
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 15 ಏಪ್ರಿಲ್ 7-13, 1997 ಬೆಲೆ ರೂ. 2.00

ಜನರ ಸಮಸ್ಯೆಗಳಿಗೆ ಪರಿಹಾರ ಬೇಕು-ಮತ್ತೊಂದು ಚುನಾವಣೆಯಲ್ಲ



ಮಾರ್ಚ್ ೩೦ರಂದು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿಯವರು ಸಂಯುಕ್ತ ರಂಗ ಸರಕಾರಕ್ಕೆ ನೀಡಿದ ಬೆಂಬಲ ವಾಪಸು ಪಡೆದಿರುವುದರಿಂದಾಗಿ ರಾಷ್ಟ್ರಪತಿಗಳಿಗೆ ಪತ್ರ ಬರೆದು ದೇಶವನ್ನೀಗ ಗಂಭೀರ ರಾಜಕೀಯ ಬಿಕ್ಕಟ್ಟಿನತ್ತ ತಳ್ಳಿದ್ದಾರೆ. ಸರಕಾರ ರಚಿಸುವುದಾಗಿಯೂ ಕಾಂಗ್ರೆಸ್ ಹೇಳಿಕೊಂಡಿತು. ಆದರೆ ಸಂಯುಕ್ತ ರಂಗದ ದೃಢ ನಿಲುವಿನಿಂದಾಗಿ ಈಗ ಸಂಯುಕ್ತ ರಂಗ ತನ್ನ ಸರಕಾರದ ನಾಯಕರನ್ನು ಬದಲಿಸಬೇಕು ಎನ್ನುವ ಮಟ್ಟಕ್ಕಿಳಿದಿದೆ. ಆದರೆ ಸಂಯುಕ್ತ ರಂಗ ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಎಡಪಕ್ಷಗಳಂತೂ ಸಂಯುಕ್ತ ರಂಗ ಸರಕಾರದ ನಾಯಕತ್ವವನ್ನು ಬದಲಿಸುವುದಾಗಲೀ, ಕಾಂಗ್ರೆಸ್ ಸರಕಾರಕ್ಕೆ ಬೆಂಬಲ ನೀಡುವುದಾಗಲೀ ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಸಾರಿವೆ. ಸಂಯುಕ್ತ ರಂಗದ ಮುಖಂಡರು ಯಾರಿರಬೇಕು ಎಂದು ನಿರ್ಧರಿಸಬೇಕಾದವರು ಸಂಯುಕ್ತ ರಂಗದ ಪಕ್ಷಗಳು ಕಾಂಗ್ರೆಸ್ಸಲ್ಲ. ಅದೇ ರೀತಿ ಕಾಂಗ್ರೆಸ್‌ನ ಅಧ್ಯಕ್ಷರು ಯಾರಿರಬೇಕು ಎಂದು ಇತರರು ನಿರ್ಧರಿಸುವುದನ್ನು ಕಾಂಗ್ರೆಸ್ ಪಕ್ಷ ಒಪ್ಪುತ್ತದೆಯೇ ಎಂದು ಪ್ರಶ್ನಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಇದರ ಬದಲು ಜನಗಳನ್ನು ಬಾಧಿಸುವ ಸಮಸ್ಯೆಗಳನ್ನೆತ್ತಿಕೊಂಡು ಅವುಗಳ ಪರಿಹಾರದ ಬಗ್ಗೆ ಕೇಳಿದ್ದರೆ ಆ ಬಗ್ಗೆ ಮಾತುಕತೆ ಸಾಧ್ಯವಿತ್ತು ಎಂದು ಹೇಳಿದ್ದಾರೆ. ಕಾಂಗ್ರೆಸ್ ಈಗಲೂ ತನ್ನ ನಿರ್ಧಾರ ಬದಲಿಸದಿದ್ದರೆ ದೇಶ ಮತ್ತೊಂದು ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ಇದರಿಂದ ನಮಗೇನೂ ತೊಂದರೆಯಿಲ್ಲ, ನಮ್ಮ ಸಂಕೋಲೆಗಳನ್ನು ಕಳೆದುಕೊಳ್ಳುತ್ತೇವೆ ಅಷ್ಟೇ. ಆದರೆ ಕಾಂಗ್ರೆಸ್ ಯಾವ ಮುಖ ಹೊತ್ತು ಜನರನ್ನು ಎದುರಿಸುತ್ತದೆ. ಜನಗಳಿಗೆ ಈಗ ಮತ್ತೊಂದು ಚುನಾವಣೆ ಬೇಕಿಲ್ಲ, ತಮ್ಮ ಸಮಸ್ಯೆಗಳಿಗೆ ತುರ್ತು ಪರಿಹಾರ ಬೇಕು ಎಂದು ಒತ್ತಿ ಹೇಳಿದ ಸುರ್ಜಿತ್ ಏಪ್ರಿಲ್ ೧೧ರಂದು ದೇವೇಗೌಡರ ನೇತೃತ್ವದ ಸರಕಾರ ವಿಶ್ವಾಸಮತ ಕೇಳುವ ಮೊದಲು ಈ ಬಿಕ್ಕಟ್ಟು ಪರಿಹಾರವಾಗುತ್ತದೆ ಎಂದು ಅವರು ಆಶಿಸಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಸಂಯುಕ್ತ ರಂಗ ಸರಕಾರದ ಕಾರ್ಯನಿರ್ವಹಣೆಯ ಬಗ್ಗೆ, ತನ್ನ ಬೆಂಬಲದ ಮೇಲೆ ಸರಕಾರ ರಚಿಸಿರುವ ಸಂಯುಕ್ತ ರಂಗ ಮತ್ತು ಕಾಂಗ್ರೆಸ್ ನಡುವೆ ಸಂಯೋಜನೆಯ ಅಭಾವದ ಬಗ್ಗೆ ಕೆಲವು ನೈಜ ದೂರುಗಳಿರಬಹುದು. ಆದರೆ ಅವರು ನೀಡಿರುವ ಕಾರಣಗಳು ಮಾತ್ರ ಅಸಮರ್ಥನೀಯ, ಅವುಗಳಲ್ಲಿ ಕೆಲವನ್ನಂತೂ ಇತ್ತೀಚಿನ ಇತಿಹಾಸವೇ ತಿರಸ್ಕರಿಸಿದೆ ಎಂದು ಸುರ್ಜಿತ್ ಹೇಳಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರು ತಮ್ಮ ಪತ್ರದಲ್ಲಿ ಸಂಯುಕ್ತ ರಂಗ ಸರಕಾರದ ಬಗ್ಗೆ ಪಟ್ಟಿ ಮಾಡಿರುವ ದೂರುಗಳನ್ನು ಒಂದೊಂದಾಗಿ ಪರಿಶೀಲಿಸುತ್ತಾ ಅವುಗಳ ಹಿಂದಿರುವ ಗೋಸುಂಬೆತನವನ್ನು ಸುರ್ಜಿತ್ ಬಯಲು ಮಾಡಿದ್ದಾರೆ.

ಕೋಮುವಾದದ ವಿರುದ್ಧ ದೇವೇಗೌಡರ ಸರಕಾರ ಸರಿಯಾದ ಹೋರಾಟ ಮಾಡುತ್ತಿಲ್ಲ ಎಂಬ ಕಾಂಗ್ರೆಸ್ ಟೀಕೆಯ ಬಗ್ಗೆ ಮಾತನಾಡುತ್ತಾ ಸುರ್ಜಿತ್, *ಈಗ ಕೋಮುವಾದದ ವಿರುದ್ಧ ಹೋರಾಟದಲ್ಲಿ ಸಂಯುಕ್ತರಂಗ ದೊಡ್ಡ ಶಕ್ತಿಯೇ ಹೊರತು ಕಾಂಗ್ರೆಸ್ ಅಲ್ಲ. ಏಕೆಂದರೆ ಸಂಯುಕ್ತ ರಂಗ 10 ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದ್ದರೆ 4 ರಾಜ್ಯಗಳಲ್ಲಿಷ್ಟೇ ಕಾಂಗ್ರೆಸ್* ಅಧಿಕಾರದಲ್ಲಿದೆ ಎಂದು ನೆನಪಿಸಿದ್ದಾರೆ. ಉತ್ತರ ಪ್ರದೇಶದ ಬೆಳವಣಿಗೆಗಳು ಕೋಮುವಾದದ ವಿರುದ್ಧ ಇರುವ ಶಕ್ತಿಗಳನ್ನು ಕ್ರೋಢೀಕರಿಸುವಲ್ಲಿನ ವಿಫಲತೆಗೆ ಮುಖ್ಯ ಉದಾಹರಣೆಯೆಂದು ಹೇಳುವ ಕಾಂಗ್ರೆಸ್ ತನ್ನ ಚುನಾವಣಾ ಮಿತ್ರ ಬಿಎಸ್‌ಪಿ ಪಕ್ಷ ಸರಕಾರ ರಚಿಸುವ ಬಗ್ಗೆ ಬಿಜೆಪಿಯೊಂದಿಗೆ ಯಾವ ಮಾತುಕತೆಯನ್ನು ಮಾಡುವುದಿಲ್ಲ ಎಂದು ರಾಜ್ಯಪಾಲರಿಗೆ ಲಿಖಿತ ರೂಪದಲ್ಲಿ ತಿಳಿಸುವಂತೆ ಏಕೆ ಮನವರಿಕೆ ಮಾಡಿಸಲಿಲ್ಲ? ಜಾತ್ಯಾತೀತತೆಯ ಬಗ್ಗೆ ಯಾವುದೇ ಬದ್ಧತೆಯಿಲ್ಲದೆ ಸರಕಾರ ರಚಿಸುವುದಷ್ಟೇ ಬಿಎಸ್‌ಪಿಯ ಏಕಮಾತ್ರ ಆಕಾಂಕ್ಷೆ ಎಂಬುದು ಈಗ ಸಿದ್ಧವಾಗಿದೆ. ಇದರಿಂದ ಪಾಠ ಕಲಿಯಬೇಕಾದದ್ದು ಕಾಂಗ್ರೆಸ್ಸೇ ಹೊರತು ಬೇರೆಯವರಲ್ಲ. ವಿಶ್ವಾಸಾರ್ಹರಲ್ಲದ ಮಿತ್ರರೊಂದಿಗೆ ಕೋಮುವಾದದ ವಿರುದ್ಧ ಹೋರಾಟ ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಅರಿಯಬೇಕಾಗಿದೆ ಎಂದು ಸುರ್ಜಿತ್ ಹೇಳಿದ್ದಾರೆ. ಜತೆಗೇ ರಾಜ್ಯಸಭಾ ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷ ತನ್ನ ಅಭ್ಯರ್ಥಿ ನಿಲ್ಲಿಸದಿದ್ದುದರಿಂದಲೇ ಬಿಜೆಪಿಯ ಮೂರು ಅಭ್ಯರ್ಥಿಗಳು ಸೋತು, ಕಾಂಗ್ರೆಸ್, ಬಿಎಸ್‌ಪಿ ಮತ್ತು ಜನತಾದಳದ ಅಭ್ಯರ್ಥಿಗಳು ಗೆಲ್ಲುವಂತಾಯಿತು ಎಂಬುದನ್ನು ಸುರ್ಜಿತ್ ಕಾಂಗ್ರೆಸ್ ಮುಖಂಡರಿಗೆ ನೆನಪಿಸಿದ್ದಾರೆ. ಉಪ ಚುನಾವಣೆಗಳಲ್ಲೂ ಬಿಜೆಪಿ ತನ್ನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳದಂತೆ ನೋಡಿಕೊಳ್ಳಲಾಯಿತು.

ಇನ್ನು ಪಂಜಾಬಿನ ಉದಾಹರಣೆ ತೆಗೆದುಕೊಂಡರೆ, ಅಲ್ಲಿ ಕೆಲವೇ ಕೆಲವಡ ಎಡಪಕ್ಷಗಳನ್ನು ಬಿಟ್ಟು ಸಂಯುಕ್ತ ರಂಗ ಒಂದು ಶಕ್ತಿಯಾಗಿಲ್ಲ, ಆದರೂ ಹಿಂದಿನ ಚುನಾವಣೆಗಳಲ್ಲಿ ಭಾರೀ ಬಹುಮತ ಪಡೆದಿದ್ದ ಕಾಂಗ್ರೆಸ್ ಈ ಬಾರಿ ಶೋಚನೀಯ ಸೋಲನ್ನೇಕೆ ಉಂಡಿತು? ಸಂಯುಕ್ತ ರಂಗವನ್ನು ಇದಕ್ಕೆ ಹೊಣೆ ಮಾಡಲು ಸಾಧ್ಯವೇ ಎಂದು ಸುರ್ಜಿತ್ ಖಾರವಾಗಿ ಪ್ರಶ್ನಿಸಿದ್ದಾರೆ.

ಹೊಣೆಗಾರಿಕೆಯುತ ವರ್ತನೆಯಲ್ಲ

"ಕೋಮುವಾದಿ, ವಿಚ್ಛಿದ್ರಕಾರೀ, ಪ್ರತ್ಯೇಕತಾವಾದಿ ಶಕ್ತಿಗಳು ಸುಮಾರಾಗಿ ದೇಶದ ಎಲ್ಲೆಡೆ ತಲೆಯೆತ್ತುತ್ತಿವೆ" ಎಂಬುದು ಕೇಸರಿಯವರ ಪತ್ರದಲ್ಲಿನ ಇನ್ನೊಂದು ದೂರು. ಇದು ಕೂಡಾ ಸತ್ಯದೂರವಾದದ್ದು. ಕಾಶ್ಮೀರದಲ್ಲಿ ಅರ್ಧಕ್ಕೂ ಹೆಚ್ಚು ಮತದಾರರು ಭಾಗವಹಿಸಿದ್ದ ಚುನಾವಣೆ ನಡೆದು ಭಾರತದ ಪ್ರತಿಷ್ಠೆಗೆ ಮಸಿ ಬಳಿಯುವ ಪಾಕಿಸ್ತಾನದ ಪ್ರಯತ್ನಗಳು ವಿಫಲವಾಗಿವೆ. ಈಶಾನ್ಯ ಭಾರತದಲ್ಲಿನ ಸಮಸ್ಯೆಗಳನ್ನು ಕುರಿತಂತೆ ಪ್ರಧಾನ ಮಂತ್ರಿಗಳು ಒಂದು ವಾರದ ಭೇಟಿ ನೀಡಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. *ಅಷ್ಟಕ್ಕೂ ಇವೆಲ್ಲಾ ರಾಷ್ಟ್ರೀಯ ಸಮಸ್ಯೆಗಳು. ಯಾವುದೇ ರಾಜಕೀಯ ಪಕ್ಷ ಇವುಗಳ ಪರಿಹಾರಕ್ಕೆ ಸಕಾರಾತ್ಮಕ ಕೊಡುಗೆ ನೀಡಬೇಕೇ ಹೊರತು, ಆ ಬಗ್ಗೆ ವಿವಾದಗಳನ್ನು ಸೃಷ್ಟಿಸುವುದು ಹೊಣೆಗಾರಿಕೆಯ ವರ್ತನೆಯಲ್ಲ.* ಎಡಪಕ್ಷಗಳು ಹಿಂದೆ ಇಂತಹ ಸಂದರ್ಭಗಳಲ್ಲಿ ನಿರ್ದಿಷ್ಟ ಸಲಹೆ-ಸೂಚನೆಗಳೊಂದಿಗೆ ಕಾಂಗ್ರೆಸ್ ಸರಕಾರಗಳಿಗೆ ಬೆಂಬಲ ನೀಡಿದ್ದನ್ನು ಸುರ್ಜಿತ್ ಈ ಸಂದರ್ಭದಲ್ಲಿ ನೆನಪಿಸಿದ್ದಾರೆ.

ಇನ್ನು, ಕೇಸರಿಯವರು ದೇಶದಲ್ಲಿ ಕಾನೂನು ವ್ಯವಸ್ಥೆ ಬಗ್ಗೆ ಮಾತನಾಡಿದ್ದಾರೆ. ನಿಜ ಅದು ಚೆನ್ನಾಗಿಲ್ಲ. ಆದರೆ ಕಾಂಗ್ರೆಸ್ ಇಂತಹ ಕ್ರಮಕ್ಕಿಳಿಯುವಷ್ಟು ಹಿಂದಿಗಿಂತ ಅದು ಹದಗೆಟ್ಟಿಲ್ಲ ಕೂಡಾ. ಕಾಂಗ್ರೆಸ್ ಅಥವಾ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಅದೇನೂ ಉತ್ತಮವಾಗಿಲ್ಲವಲ್ಲ. ಕಳೆದ ಹತ್ತು ತಿಂಗಳಲ್ಲಿ ಸಂಯುಕ್ತ ರಂಗ ಸರಕಾರ ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಕೋಮುಶಾಂತಿಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ ಎಂದು ಸುರ್ಜಿತ್ ಅಭಿಪ್ರಾಯಪಟ್ಟರು.

ಆಧಾರವಿಲ್ಲದ ದೂರುಗಳು
ಮುಖ್ಯ ವಿಷಯದ ಬಗ್ಗೆ ಮೌನ

ಸಂಯುಕ್ತ ರಂಗ ಸರಕಾರದ ಬಗ್ಗೆ ಕಾಂಗ್ರೆಸ್ಸಿನ ಇನ್ನೊಂದು ದೂರು ದೇಶದ ಭದ್ರತೆ ಮತ್ತು ರಕ್ಷಣೆ ಕುರಿತಾದದ್ದು. ಈ ಬಗ್ಗೆ ಕೆಲವು ಸತ್ಯ ಸಂಗತಿಗಳನ್ನು

ಪುಟ 2ಕ್ಕೆ

ದಿಲ್ಲಿ ರಾಜಕೀಯ ಕರ್ನಾಟಕದ ಮೇಲೆ ಪರಿಣಾಮ ಬೀರೀತೆ?

ಸಂಯುಕ್ತ ರಂಗ ಸರಕಾರದ ಪ್ರಧಾನ ಮಂತ್ರಿ ಕರ್ನಾಟಕದ ದೇವೇಗೌಡರಾಗಿದ್ದು, ಅವರು ಪ್ರಧಾನ ಮಂತ್ರಿಯಾದ ನಂತರ ಜನತಾದಳ ಸರಕಾರದ ಮುಖ್ಯಮಂತ್ರಿಯಾಗಿ ಜೆ.ಎಚ್.ಪಟೇಲರು, ಉಪ ಮುಖ್ಯಮಂತ್ರಿಗಳಾಗಿ ಸಿದ್ರಾಮಯ್ಯನವರು ಜನತಾದಳದಲ್ಲಿಯ ಆಂತರಿಕ ಜಗಳಗಳಿಂದಾಗಿ ಕಿರಿಕಿರಿಯಿಂದ ಆಡಳಿತ ನಡೆಸುತ್ತಿದ್ದು, ದಿಲ್ಲಿಯಲ್ಲಿ ತಲೆದೋರಿರುವ ರಾಜಕೀಯ ಬಿಕ್ಕಟ್ಟು ನಮ್ಮ ರಾಜ್ಯದ ರಾಜಕೀಯದ ಮೇಲೆ ಏನಾದರೂ ಪರಿಣಾಮ ಬೀರೀತೆ? ಜೆ.ಎಚ್.ಪಟೇಲರ ಮುಖಂಡತ್ವಕ್ಕೆ ಧಕ್ಕೆಯಾಗಬಹುದೇ? ಎಂಬ ವಿಚಾರ ಕುರಿತು ನಾನಾ ತರದ ಊಹಾಪೋಹಗಳು ಕೇಳಿಬರುತ್ತಿವೆ. ದಿನಪತ್ರಿಕೆಗಳಲ್ಲಿ ಓದುಗರ ಗಮನಕ್ಕೆ ಬರುತ್ತಿದೆ.

'ಪಟೇಲರಿಗೆ ದೇವೇಗೌಡರು ಪ್ರಧಾನಿಯಾಗಿ ಮುಂದುವರಿಯುವುದು ಬೇಕಿರಲಿಲ್ಲ. ಅದಕ್ಕಾಗಿಯೇ ಅವರು ಸಂಯುಕ್ತರಂಗ ಸರಕಾರಕ್ಕೆ ನೀಡಿರುವ ಬೆಂಬಲವನ್ನು ತಾಕತ್ತಿದ್ದರೆ ಹಿಂದಕ್ಕೆ ಪಡೆಯಿರಿ ಎಂಬ ಸವಾಲನ್ನು ಕಾಂಗ್ರೆಸ್ ಸದಸ್ಯರಿಗೆ ವಿಧಾನ ಸಭೆಯಲ್ಲಿ ಹಾಕಿದ್ದರು. ಆ ಸವಾಲು ಹಾಕಿದ ಮೂರು ದಿವಸಗಳಲ್ಲೇ ಈ ಬೆಳವಣಿಗೆಯಾಗಿದೆ. ದೆಹಲಿಯ ಬೆಳವಣಿಗೆಯಿಂದ ರಾಜ್ಯ ಸರಕಾರವೂ ಪತನದ ಹಾದಿಯಲ್ಲಿದೆ' ಎಂದು ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಧರ್ಮಸಿಂಗ್ ಹೇಳಿದ್ದಾರೆ.

ಬಿಜೆಪಿಯ ಮುಖಂಡರಾದ ಯಡಿಯೂರಪ್ಪನವರು ದಿಲ್ಲಿ ಬೆಳವಣಿಗೆ ಕುರಿತು ತಮ್ಮ ಅಭಿಪ್ರಾಯ ವ್ಯಕ್ತ ಮಾಡುತ್ತಾ "ದೆಹಲಿಯಲ್ಲಿ ಭುಗಿಲೆದ್ದಿರುವ ರಾಜಕೀಯ ಸ್ಥಿತಿಗತಿಗಳ ಪರಿಣಾಮ ಕರ್ನಾಟಕದ ಮೇಲೆ ಆಗುವುದು ನಿಶ್ಚಿತ. ಅಂತಹ ರೂಪಾಂತರ ಗೊಂಡ ರಾಜಕೀಯ ಸನ್ನಿವೇಶದಲ್ಲಿ ವಿಧಾನ ಸಭೆಯಲ್ಲಿ 40 ಮಂದಿ ಸದಸ್ಯ ಬಲ ಹೊಂದಿರುವ ಬಿಜೆಪಿ ನಿರ್ಣಾಯಕ ಪಾತ್ರ ವಹಿಸುತ್ತದೆ. ದೇವೇಗೌಡ ಅವರು ದೆಹಲಿಯಲ್ಲಿ ಅಧಿಕಾರ ಕಳೆದುಕೊಂಡ ಮೇಲೆ ಕರ್ನಾಟಕದ ರಾಜಕಾರಣದ ಸ್ಥಿತಿಯಲ್ಲಿ ಏರುಪೇರಾಗುತ್ತದೆ. ಲೋಕಶಕ್ತಿಯ ಮುಖಂಡ ರಾಮಕೃಷ್ಣ ಹೆಗಡೆ ಅವರು ರಾಜಕೀಯವಾಗಿ ಹೆಚ್ಚು ಬಲಿಷ್ಠವಾಗುತ್ತಾರೆ" ಎಂದು ಪ್ರತಿಕ್ರಿಯಿಸಿದ್ದಾರೆ.

ದೆಹಲಿಯಲ್ಲಿನ ರಾಜಕೀಯ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ್ದ ಲೋಕಶಕ್ತಿ ಅಧ್ಯಕ್ಷ ರಾಮಕೃಷ್ಣ ಹೆಗಡೆಯವರು "ಈಗಿನ ಬೆಳವಣಿಗೆಗಳನ್ನು ತುರ್ತು ಎಂದು ಪರಿಗಣಿಸಿ ಹೊಸ ಪ್ರಧಾನಿಯನ್ನು ನೇಮಿಸಬೇಕೆಂದು ರಾಷ್ಟ್ರಪತಿಯವರನ್ನು ಆಗ್ರಹಪಡಿಸುತ್ತಾ ರಾಷ್ಟ್ರ ರಾಜಕೀಯದಲ್ಲಿ ತಲೆದೋರಿರುವ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪಟೇಲ್ ಅವರ ನಾಯಕತ್ವವೂ ಸೇರಿದಂತೆ ಒಟ್ಟಾರೆ ರಾಜಕೀಯ ಪರಿಸ್ಥಿತಿ ಕುರಿತು ಜನತಾದಳ ಶಾಸಕರು ಹಾಗೂ ಇನ್ನಿತರ ಸಮಾನ ಮನಸ್ಕ ಮುಖಂಡರುಗಳ ಜೊತೆ ಸಮಾಲೋಚನೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಹೀಗೆ ಪತ್ರಿಕೆಗಳೂ, ರಾಜಕೀಯ ಪಕ್ಷಗಳೂ, ಇತರ ಧುರೀಣರೂ ತಮ್ಮದೇ ಆದ ಊಹಾಪೋಹಗಳನ್ನು ಹರಿಬಿಟ್ಟಿದ್ದಾರೆ. ಅದಕ್ಕೆ ಕಾರಣ ಕೂಡ ಇಲ್ಲದಿಲ್ಲ. ಜನತಾ ದಳದಲ್ಲಿ ರಾಮಕೃಷ್ಣ ಹೆಗಡೆಯವರಿಗಿದ್ದ, ಈಗಲೂ ಇರಬಹುದಾದ ವ್ಯಯಕ್ತಿಕ ಪ್ರಭಾವ, ಅವರನ್ನು ಪಕ್ಷದಿಂದ ಹೊರಗೆ ಹಾಕಿದ ನಂತರ ಜನತಾದಳದೊಳಗೆ ಉಂಟಾದ ಗೊಂದಲ, ದೇವೇಗೌಡರು ಪ್ರಧಾನ ಮಂತ್ರಿಯಾದ ನಂತರ, ಅವರ ಸ್ಥಾನಕ್ಕೆ ಮುಖ್ಯಮಂತ್ರಿಯನ್ನು ಆರಿಸುವ ವಿಷಯದಲ್ಲಾದ ಜಗಳ ಮತ್ತು ಬಹಳಷ್ಟು ಜಗಳದ ನಂತರ ಜೆ.ಎಚ್. ಪಟೇಲರನ್ನು(ರಾಮಕೃಷ್ಣ ಹೆಗಡೆಯವರ ಗುಂಪಿನ ಪರವಾಗಿ) ಮುಖ್ಯಮಂತ್ರಿಯನ್ನಾಗಿ, ಸಿದ್ರಾಮಯ್ಯನವರನ್ನು ಉಪ ಮುಖ್ಯ ಮಂತ್ರಿಗಳನ್ನಾಗಿ ಆರಿಸಿದ ಘಟನೆ, ಆ ನಂತರ 45 ಜನರನ್ನೊಳಗೊಂಡ ಮಂತ್ರಿ ಮಂಡಲದ ರಚನೆ, ಅದರಲ್ಲಿ ಕೆಲವು ಪ್ರಭಾವಿತ ವ್ಯಕ್ತಿಗಳನ್ನು ಕೈಬಿಟ್ಟಿರುವುದರಿಂದಾಗಿ ಉಂಟಾಗಿರುವ ಭಿನ್ನಾಭಿಪ್ರಾಯ ಇಂದಿಗೂ ಜೀವಂತವಾಗಿರುವ ಒಳ ಜಗಳ ಇವುಗಳೆಲ್ಲ ಮೂರ್ತ ಸ್ವರೂಪವಾಗಿ ಕಳೆದ ಎಂಟು ತಿಂಗಳ ಅಸಮರ್ಪಕ ಆಡಳಿತೆಯ ವೈಖರಿ-ಇವುಗಳನ್ನೆಲ್ಲ ನೆನಪಿಸಿಕೊಂಡಾಗ ಕೇಂದ್ರದಲ್ಲಿಯ ರಾಜಕೀಯ ಬೆಳವಣಿಗೆ ರಾಜ್ಯದ ರಾಜಕೀಯದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದೆಂದು ಊಹಿಸುವುದು ಕಷ್ಟ. ಆದರೆ ರಾಮಕೃಷ್ಣ ಹೆಗಡೆ, ಯಡಿಯೂರಪ್ಪ ಮತ್ತು ಧರ್ಮಸಿಂಗ್ ಅವರೆಲ್ಲ ಯೋಚಿಸುವಂತೆ ರಾಜ್ಯದ ಜನತಾದಳ ಸರಕಾರಕ್ಕೆ ಅಪಾಯ ಉಂಟಾಗಬಹುದು, ರಾಜ್ಯದ ರಾಜಕೀಯ ಸ್ಥಿತ್ಯಂತರದಲ್ಲಿ ಮೂಲಭೂತ ಬದಲಾವಣೆಯಾಗಬಹುದು, ಇಲ್ಲಿಯೂ ಸಂಯುಕ್ತ ರಂಗ ಸರಕಾರ ರಚನೆಗೆ ಅವಕಾಶ ಸಿಗಬಹುದೆಂಬ ಆಲೋಚನೆಗಳೆಲ್ಲ ಬರೀ ಗಾಳಿಗೋಪುರಗಳಾಗಿಯೇ ಉಳಿಯುವುದೆಂದು ಅನ್ನಿಸುತ್ತದೆ. ರಾಮಕೃಷ್ಣ ಹೆಗಡೆಯವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದಾಗ ಜನತಾದಳದ ಶಾಸಕಾಂಗ ಪಕ್ಷದಲ್ಲಿ ಅವರ ಪ್ರಭಾವ

ಪುಟ 2ಕ್ಕೆ

ಕಾಂಗ್ರೆಸ್ ಅಂತರ್ರಾಷ್ಟ್ರೀಯ ಸಮುದಾಯಕ್ಕೆ ಏನು ಸಂಕೇತ ನೀಡ ಬಯಸುತ್ತಿದೆ?

ಸ್ವತಂತ್ರ ಭಾರತದ ಐವತ್ತು ವರ್ಷಗಳಲ್ಲಿ 46 ವರ್ಷ ಆಳಿರುವ ಕಾಂಗ್ರೆಸ್ ಅಂತರ್ರಾಷ್ಟ್ರೀಯ ರಂಗದಲ್ಲಿ ಅಲಿಪ್ತ ನೀತಿಯನ್ನು ಅನುಸರಿಸಿಕೊಂಡು ಬಂದ ಪಕ್ಷ. ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಬೆಂಬಲ ನೀಡಿ ಭಾರತ ಅಂತರ್ರಾಷ್ಟ್ರೀಯ ಪ್ರತಿಷ್ಠೆ ಗಳಿಸಿದೆ ಎಂಬ ಅಂಶವು ಸಂಯುಕ್ತ ರಂಗ ಸರಕಾರಕ್ಕೆ ಬೆಂಬಲ ವಾಪಸು ಪಡೆಯುವಾಗ ಅದೇ ಕಾಂಗ್ರೆಸ್‌ನ ಮುಖಂಡರ ಗಮನಕ್ಕೆ ಬರಲಿಲ್ಲವೇ? ಸಂಯುಕ್ತ ರಂಗ ಸರಕಾರ ಅದೇ ವಿದೇಶಾಂಗ ನೀತಿಗಳನ್ನು ಅನುಸರಿಸಿ ದೇಶದ ಪ್ರತಿಷ್ಠೆ ಹೆಚ್ಚಿರುವ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾರ್ಯದರ್ಶಿಗಳ ಮಟ್ಟದ ಮಾತುಕತೆಗಳು ನಡೆಯುತ್ತಿದ್ದಾಗಲೇ, ಅಲಿಪ್ತ ದೇಶಗಳ ವಿದೇಶಾಂಗ ಮಂತ್ರಿಗಳು ಏಪ್ರಿಲ್ 7ರಂದು ನವದೆಹಲಿಯಲ್ಲಿ ಸಭೆ ಸೇರಲು ಸಿದ್ಧತೆಗಳು ನಡೆಯುತ್ತಿದ್ದಾಗಲೇ ತನ್ನ ಬೆಂಬಲವನ್ನು ಹಿಂತೆಗೆದುಕೊಂಡು ಕಾಂಗ್ರೆಸ್ ಅಂತರ್ರಾಷ್ಟ್ರೀಯ ಸಮುದಾಯಕ್ಕೆ ಯಾವ ಸಂಕೇತ ನೀಡ ಬಯಸುತ್ತಿದೆ ಎಂದು ಸುರ್ಜಿತ್ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಕರ್ನಾಟಕದ ಮೇಲೆ.........

ಪುಟ 1ರಿಂದ

ಬಲಿಷ್ಠವಾಗಿತ್ತೆಂಬುದು ನಿಜ. ಅವರನ್ನು ಪಕ್ಷದಿಂದ ಹೊರ ಹಾಕಿದ ನಂತರವೂ ಕೆಲವು ತಿಂಗಳು ಅವರು ತಮ್ಮ ಪ್ರಭಾವವನ್ನು ಉಳಿಸಿ ಕೊಂಡಿದ್ದರೆಂಬುದರಲ್ಲಿ ಎರಡಭಿಪ್ರಾಯವಿಲ್ಲ. ಆದರೆ ಅವರು 'ಲೋಕಶಕ್ತಿ'ಯ ಸ್ಥಾಪನೆ ಮಾಡಿದ ನಂತರ ಅವರ ಪ್ರಭಾವ ಜನತಾ ಪಕ್ಷದ ಮೇಲಾಗಲಿ, ಜನತಾಪಕ್ಷದ ಶಾಸಕಾಂಗದ ಮೇಲಾಗಲಿ ಮೊದಲಿನಷ್ಟೇ ಉಳಿದಿದೆಂದು ತಿಳಿಯುವುದು ಸರಿಯಲ್ಲ. ಜನತಾದಳ ಒಂದು ಬಂಡವಾಳಶಾಹಿ ಪಕ್ಷ. ಅಧಿಕಾರಕ್ಕಾಗಿಯೂ, ಇನ್ನಿತರ ಕಾರಣಕ್ಕಾಗಿಯೂ ಜಾತಿ, ಮತಗಳ ಆಧಾರದಲ್ಲಿಯೂ ಜನತಾದಳದಲ್ಲಿ ಅದರ ಶಾಸಕರಲ್ಲಿ ಗುಂಪುಗಳಿವೆ. ಅಧಿಕಾರಕ್ಕಾಗಿ ಕಚ್ಚಾಡುತ್ತಾರೆ. ಅಸಮಾಧಾನವೂ ಉಳಿದಿದೆ. ಇದೇನೂ ಹೊಸದಲ್ಲ. ಶಾಸಕರಲ್ಲುಂಟಾಗಿರುವ ಅಸಮಾಧಾನದ ಪರಿಹಾರಕ್ಕೆ ಪ್ರಯತ್ನ ನಡೆಯುತ್ತಿದೆ. ಅದೇ ಸಂದರ್ಭದಲ್ಲಿ ದಿಲ್ಲಿ ಘಟನೆ ನಡೆದಿದೆ. ದೇವೇಗೌಡರ ಪ್ರಧಾನ ಮಂತ್ರಿ ಪದಕ್ಕೆ ಅಪಾಯ ಉಂಟಾದರೆ ಕರ್ನಾಟಕದ ರಾಜಕೀಯದ ಮೇಲೆ, ಜೆ.ಎಚ್.ಪಟೇಲರ ಮುಖಂಡತ್ವದ ಮೇಲೆ ಪರಿಣಾಮ ಉಂಟಾಗಬಹುದು. ಆದರೆ ರಾಮಕೃಷ್ಣ ಹೆಗಡೆಯವರಾಗಲೀ, 'ಸಂಯುಕ್ತ ಕರ್ನಾಟಕ' ಪತ್ರಿಕೆಯಾಗಲೀ ಕನಸು ಕಾಣುವಂತೆ ರಾಜ್ಯ ವಿಧಾನಸಭೆಯಲ್ಲಿರುವ 112 ಮಂದಿ ಜನತಾದಳದ ಶಾಸಕರ ಪೈಕಿ 70 ಮಂದಿಯಾದರೂ ರಾಮಕೃಷ್ಣ ಹೆಗಡೆಯವರ ಪಕ್ಷಕ್ಕೆ ಸೇರಿ ಬಿಜೆಪಿ ಅಥವಾ ಕಾಂಗ್ರೆಸ್ಸಿನ ಜೊತೆಯಲ್ಲಿ ಸರಕಾರ ರಚನೆ ಆಗಬಹುದೆಂಬ ಹಗಲು ಕನಸು ನನಸಾಗಲು ಸಾಧ್ಯವಿಲ್ಲೆಂಬುದನ್ನು ಮಾತ್ರ ಸ್ಪಷ್ಟಪಡಿಸಬಹುದಾಗಿದೆ. ದೇವೇಗೌಡರ ಮುಖಂಡತ್ವದ ಸರಕಾರವನ್ನು ಉಳಿಸಬೇಕು ಎಂಬ ಸಿಪಿಐ(ಎಂ) ಮತ್ತು ಎಡಪಕ್ಷಗಳ ಸ್ಪಷ್ಟ, ದೃಢ, ನಿಲುವು ಕರ್ನಾಟಕದ ಜನತಾದಳ ಮತ್ತು ಅದರ ಸರಕಾರದ ಮೇಲೆ ಪರಿಣಾಮ ಬೀರಿರಬೇಕು. ಸಂಯುಕ್ತ ರಂಗ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆಯುವ ನಿಲುಮೆಯಿಂದಾಗಿ ದೇಶದ ರಾಜಕೀಯದ ಮೇಲೆ ಹಾಗೆಯೇ ಸಂಯುಕ್ತ ರಂಗದ ಸರಕಾರದ ಮೇಲೆ ಉಂಟಾಗಿರುವ ಪರಿಣಾಮವೇನೆಂದರೆ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಇನ್ನಷ್ಟು ಭದ್ರಗೊಳಿಸುವುದಾಗಿದೆ. ಶತಾಯಗತಾಯ ದೇವೇಗೌಡರ ಸರಕಾರವನ್ನು ಉಳಿಸುವ, ಬಿಜೆಪಿ ಅಧಿಕಾರ ಗ್ರಹಣ ಮಾಡದಂತೆ ನೋಡಿಕೊಳ್ಳುವುದು ಹಾಗೆಯೇ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಕ್ರಮವನ್ನು ಬಯಲಿಗೆಳೆಯುವ ಪ್ರಯತ್ನದ ಪರಿಣಾಮ ನಮ್ಮ ರಾಜ್ಯದ ಜನತಾ ದಳ ಮುಖಂಡರ ಮೇಲೆ ಆಗಿದೆಂದು ಭಾವಿಸಬೇಕಾಗುತ್ತದೆ. ಆಕಸ್ಮಾತ್ತಾಗಿ ಎದುರಿಸಬೇಕಾಗಿ ಬಂದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಜಾತೀಯ ಶಕ್ತಿಗಳು ದೇಶದ ಆಡಳಿತೆಯ ಚುಕ್ಕಾಣಿಯನ್ನು ಹಿಡಿಯಬಾರದು. ದೇಶದ ಐಕ್ಯತೆ ಸಾರ್ವಭೌಮತ್ವಕ್ಕೆ ಅಪಾಯ ಉಂಟಾಗಬಾರದೆಂಬ ಮಹೋದ್ದೇಶದಿಂದ, ತಂತಮ್ಮೊಳಗೆ ಹಲವಾರು ಭಿನ್ನಾಭಿಪ್ರಾಯಗಳಿದ್ದರೂ ಕೂಡ ಸರಕಾರದ ಆರ್ಥಿಕ ಧೋರಣೆಗೆ ಸಂಪೂರ್ಣವಾಗಿ ಒಪ್ಪದಿದ್ದರೂ, ಸಂಯುಕ್ತ ರಂಗದ ಎಲ್ಲಾ ಹದಿಮೂರು ಪಕ್ಷಗಳೂ, ತಮ್ಮ ಐಕ್ಯತೆಯನ್ನು ಪ್ರದರ್ಶಿಸಿ ದೇಶದ ಜನರ ಮುಂದೆ ಒಂದು ಹೊಸ ಪರ್ಯಾಯ ಶಕ್ತಿಯನ್ನು ಇಡಲು ಮುಂದಾಗುತ್ತಿರುವಾಗ, ಅದರ ಅಂಗ ಪಕ್ಷವಾಗಿರುವ, ಕರ್ನಾಟಕದ ಜನತಾ ದಳ ಮತ್ತು ಶಾಸಕರು ಪರ್ಯಾಯ ವ್ಯವಸ್ಥೆಗಾಗಿ ಹಾತೊರೆಯುತ್ತಿರುವ ಕರ್ನಾಟಕದ ಜನರಿಗೆ ಮೋಸ ಮಾಡಲಾರರು, ದಿಲ್ಲಿಯಲ್ಲಿ ಹದಿಮೂರು ಪಕ್ಷಗಳು ತಮ್ಮ ಐಕ್ಯತೆಯನ್ನು ಸಿಮೆಂಟ್ ಗೊಳಿಸಿದಂತೆಯೇ ಇಲ್ಲಿ ಕೂಡ ತಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲ ಬದಿಗೊತ್ತಿ ಒಗ್ಗಟ್ಟನ್ನು ಬಲಗೊಳಿಸಬೇಕೆಂದು, ತಮ್ಮಲ್ಲಿ ನನೆಗುದಿಗೆ ಬಿದ್ದಿರುವ ಸಮಸ್ಯೆಗಳಿಗೆ ದಿಲ್ಲಿಯ ವಾತಾವರಣ ತಿಳುವಾದ ನಂತರ ಸಮರ್ಪಕ ಪರಿಹಾರ ಕಂಡುಹಿಡಿಯುವ ಪ್ರಯತ್ನ ನಡೆಸಬೇಕೆಂದು, ಆ ಮೂಲಕವೇ ಜನರ ಹಿತ ಕಾಪಾಡಲು ಸಾಧ್ಯವೆಂದು ಜನತಾ ದಳದ ಮುಖಂಡರಿಗೂ, ಶಾಸಕರಿಗೂ ಹೇಳ ಬಯಸುತ್ತೇವೆ. ರಾಜ್ಯದಲ್ಲಿ ಹೆಚ್ಚಿನ ಬದಲಾವಣೆ ಆಗಲಾರದೆಂದು ಭಾವಿಸುತ್ತೇವೆ.

- ಎನ್.ಕೆ.ಉಪಾಧ್ಯಾಯ

ಮತ್ತೊಂದು ಚುನಾವಣೆ ಜನಗಳಿಗೆ ಬೇಕಾಗಿಲ್ಲ

ಪುಟ 1ರಿಂದ

ಕೇಸರಿಯವರು ಒದಗಿಸಿದ್ದರೆ ಅದು ಸ್ವಾಗತಾರ್ಹವಾಗುತ್ತಿತ್ತು ಎಂದಿರುವ ಸುರ್ಜಿತ್ ಇತ್ತೀಚೆಗೆ ರಷ್ಯಾಕ್ಕೆ ಪ್ರಧಾನ ಮಂತ್ರಿಗಳ ಭೇಟಿ ಸಂಯುಕ್ತ ರಂಗ ಸರಕಾರ ದೇಶದ ಭದ್ರತಾ ಹಿತಾಸಕ್ತಿಗಳ ಬಗ್ಗೆ ರಕ್ಷಣಾ ಅವಶ್ಯಕತೆಗಳ ಬಗ್ಗೆ ಏನು ಮಾಡಬೇಕೆಂದಿದೆ ಎಂಬುದನ್ನು ಸೂಚಿಸಿದೆ ಎಂದಿದ್ದಾರೆ.

ಇನ್ನು, ವಿದೇಶಾಂಗ ರಂಗದಲ್ಲಂತೂ ಸಂಯುಕ್ತ ರಂಗ ಸರಕಾರದ ಸಾಧನೆಗಳು ಗಮನಾರ್ಹ. ಬಿಜೆಪಿ ಮಾತ್ರವೇ ಇದನ್ನು ಸ್ವಾಗತಿಸಿಲ್ಲ. *ರಷ್ಯಾ, ಚೀನಾ ಮತ್ತು ಭಾರತ ನಿಕಟ ಬರುತ್ತಿರುವುದರಿಂದ ಸಹಜವಾಗಿಯೇ ಅಮೇರಿಕಾ ಆತಂಕಗೊಂಡಿದೆ. ಆದರೆ ಕೇಸರಿಯವರ ಪತ್ರದಲ್ಲಿ ಭಾರತದ ವಿರುದ್ಧ ಅಮೇರಿಕನ್ ಕುತಂತ್ರಗಳ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ* ಎಂಬ ಅಂಶದತ್ತಲೂ ಸುರ್ಜಿತ್ ಗಮನ ಸೆಳೆದಿದ್ದಾರೆ.

ಸಂಯುಕ್ತ ರಂಗ ಸರಕಾರದ ಇತರ ಕೆಲವು ಸಾಧನೆಗಳೂ ಇವೆ. ಈ ಅವಧಿಯಲ್ಲಿ ಕೇಂದ್ರ-ರಾಜ್ಯ ಸಂಬಂಧಗಳು ಸುಧಾರಣೆಗೊಂಡಿವೆ. ಸಂವಿಧಾನದಲ್ಲಿದ್ದರೂ ಹಿಂದಿನ ಕಾಂಗ್ರೆಸ್ ಸರಕಾರಗಳು ರಚಿಸದ ಅಂತರ-ರಾಜ್ಯ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ರಾಜ್ಯಗಳ ಕೆಲಸಗಳಲ್ಲಿ ಹಸ್ತಕ್ಷೇಪವಿಲ್ಲ, ಪಕ್ಷಪಾತವಿಲ್ಲ. ಬಿಜೆಪಿ ಅಥವಾ ಅದರ ಮಿತ್ರ ಪಕ್ಷಗಳ ಆಡಳಿತದ ರಾಜ್ಯಗಳಿಂದಲೂ ಈ ಬಗ್ಗೆ ಗೊಣಗಾಟವೇನಿಲ್ಲ. ಮೊಟ್ಟ ಮೊದಲನೆಯ ಬಾರಿಗೆ ತಂತಮ್ಮ ರಾಜ್ಯಗಳಿಗೆ ಯೋಜನಾ ನಿಧಿಗಳನ್ನು ಒದಗಿಸುವ ಬಗ್ಗೆ ಯೋಜನಾ ಆಯೋಗದೊಡನೆ ಸಭೆಯ ನಂತರ ಎಲ್ಲಾ ರಾಜ್ಯಗಳು ಹಿಂದಿಗಿಂತ ಹೆಚ್ಚಿನ ತೃಪ್ತಿಯಿಂದ ಹಿಂದಿರುಗಿದ್ದಾರೆ ಎಂದು ಸುರ್ಜಿತ್ ಒತ್ತಿ ಹೇಳಿದ್ದಾರೆ.

ಆರ್ಥಿಕ ರಂಗ
ಕಾಂಗ್ರೆಸ್ ನೀತಿಗಳೇ ಕಾರಣವಲ್ಲವೇ?

ಆರ್ಥಿಕ ರಂಗದಲ್ಲಿ ನಿಷ್ಕ್ರಿಯತೆ ಇದೆ, ಇದರಿಂದ ಬೆಲೆಯೇರಿಕೆ, ನಿರುದ್ಯೋಗ ಹೆಚ್ಚಿದೆ ಎನ್ನುತ್ತಾರೆ ಕಾಂಗ್ರೆಸ್ ಅಧ್ಯಕ್ಷರು. ಇದಕ್ಕೆ ಕಾರಣಗಳೂ ಅವರಿಗೆ ಚೆನ್ನಾಗಿ ಗೊತ್ತಿದೆ ಎಂದು ವ್ಯಂಗ್ಯವಾಡಿರುವ ಸುರ್ಜಿತ್‌ರವರು ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿಗಳನ್ನೇ ಅನುಸರಿಸಿರುವುದರಿಂದಲೇ ಹೀಗಾಗಿದೆ ಎಂದು ಕೇಸರಿಯವರ ಗಮನಕ್ಕೆ ತಂದಿದ್ದಾರೆ. ಎಡಪಕ್ಷಗಳು ಈ ನೀತಿಗಳನ್ನು ಬಹಿರಂಗವಾಗಿಯೇ ವಿರೋಧಿಸುತ್ತಿವೆ. ಆದರೆ ಕಾಂಗ್ರೆಸ್ ಈಗಲೂ ಅದನ್ನೇ ಪ್ರತಿಪಾದಿಸುತ್ತಿದೆ. ಈ ಆರ್ಥಿಕ ಪರಿಸ್ಥಿತಿಯನ್ನೆದುರಿಸಲು ಕಾಂಗ್ರೆಸ್ ಅಧ್ಯಕ್ಷರು ಕೆಲವು ಸಲಹೆ-ಸೂಚನೆಗಳನ್ನಾದರೂ ಕೊಡಬಹುದಿತ್ತು ಎಂದಿರುವ ಸುರ್ಜಿತ್ *ಲೋಕಸಭೆಯಲ್ಲಿ 140 ಸದಸ್ಯರಿರುವ ಕಾಂಗ್ರೆಸ್ ನಿರುದ್ಯೋಗ, ಬಡತನ ನಿವಾರಣೆ ಇತ್ಯಾದಿಗಳ ಬಗ್ಗೆ ಸಲಹೆಗಳನ್ನು ನೀಡಬಹುದಿತ್ತಲ್ಲವೇ* ಎಂದು ಅಭಿಪ್ರಾಯಪಟ್ಟಿದ್ದಾರೆ.

1993ರ ನೆನಪಿಲ್ಲವೇ?

ಹಾಗೆ ಮಾಡುವುದನ್ನು ಬಿಟ್ಟು ಇದ್ದಕ್ಕಿದ್ದಂತೆ ಕೈಗೊಂಡಿರುವ ಈ ಕ್ರಮ ದೇಶವನ್ನು ರಾಜಕೀಯ ಬಿಕ್ಕಟ್ಟಿನತ್ತ ತಳ್ಳಿದೆ ಎಂದು ಬೇಸರ ವ್ಯಕ್ತಪಡಿಸಿರುವ ಸುರ್ಜಿತ್ ಕಾಂಗ್ರೆಸ್ ಸರಕಾರ ರಚಿಸುವುದಾದರೂ ಹೇಗೆ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ. ಲೋಕಸಭೆಯಲ್ಲಿ ಕಾಂಗ್ರೆಸ್ಸಿನ ಬಲ 140, ಬಿಜೆಪಿ ಮತ್ತು ಅದರ ಮಿತ್ರರ(ಬಿಎಸ್‌ಪಿ ಕೂಡಾ ಸೇರಿ) ಬಲ 204. ಹೀಗಿರುವಾಗ ಯಾರ ಬೆಂಬಲದಿಂದ ಅವರು ಸರಕಾರ ರಚಿಸುತ್ತಾರೆ? *ಸಂಯುಕ್ತ ರಂಗದ ಪಕ್ಷಗಳು ಪಕ್ಷಾಂತರ ಮಾಡುತ್ತವೆ ಎಂದು ಅವರು ನಿರೀಕ್ಷಿಸಿದ್ದಾರೆಯೇ? ಅದು ಅವರ ತಪ್ಪು. ಇದೇ ಕಾಂಗ್ರೆಸ್ ಮುಖಂಡರು 1993ರಲ್ಲಿ ಅವಿಶ್ವಾಸ ಠರಾವು ಗೆಲ್ಲಲು ನಡೆಸಿದ ಪಕ್ಷಾಂತರದ ಮಸಲತ್ತನ್ನು ಈಗ ಅನುಭವಿಸುತ್ತಿಲ್ಲವೇ* ಎಂದು ಸುರ್ಜಿತ್ ತೀಕ್ಷ್ಣವಾಗಿ ಪ್ರಶ್ನಿಸುತ್ತಾರೆ.

ಸಂಯುಕ್ತ ರಂಗಕ್ಕೆ ತಾವು 10 ತಿಂಗಳು ಬೆಂಬಲ ನೀಡಿದ್ದೇವೆ. ಅದಕ್ಕೆ ಪ್ರತಿಯಾಗಿ ತಮಗೆ ಬೆಂಬಲ ನೀಡಬೇಕೆಂದು ಕೇಸರಿಯವರ ತರ್ಕ. ಹಾಗಾದರೆ ಉತ್ತರ ಪ್ರದೇಶದಲ್ಲಿ ಬಿಜೆಪಿ-ಬಿಎಸ್‌ಪಿ ಮಾಡಿಕೊಂಡಿರುವ "ಆರು ತಿಂಗಳ ನನಗೆ ಮುಖ್ಯಮಂತ್ರಿ" ಸೂತ್ರದಿಂದ ಪ್ರೇರಿತವಾಗಿರಬೇಕು ಎಂದು ಸುರ್ಜಿತ್ ವ್ಯಂಗ್ಯವಾಡಿದ್ದಾರೆ.

ಎಡಪಕ್ಷಗಳು ಮತ್ತು ಸಿಪಿಐ(ಎಂ) ಬಿಜೆಪಿಯ ಅಪಾಯವನ್ನು ದೂರ ಮಾಡಲು ಸಂಯುಕ್ತ ರಂಗವನ್ನು ಬೆಂಬಲಿಸುವ ನೀತಿಬದ್ಧ ನಿಲುವು ತಳೆದಿವೆ, ಅದಕ್ಕೆ ಈಗಲೂ ಬದ್ಧವಾಗಿವೆ ಎಂದು ಸುರ್ಜಿತ್ ಪುನರುಚ್ಚರಿಸಿದ್ದಾರೆ. ಕಾಂಗ್ರೆಸ್ ಈಗ ಹಿಡಿದಿರುವ ದಾರಿಯನ್ನು ಕಂಡರೆ ಅವರಿಗೆ ಕೋಮುವಾದದ ಶಕ್ತಿಗಳ ವಿರುದ್ಧ ನೀತಿಬದ್ಧ ಹೋರಾಟ ನಡೆಸುವುದಕ್ಕಿಂತ ಅಧಿಕಾರ ಗಿಟ್ಟಿಸುವುದೇ ಮುಖ್ಯ ಆಕಾಂಕ್ಷೆಯಾಗಿದೆ ಎಂದು ಜನ ತೀರ್ಮಾನಿಸುವಂತಾಗುತ್ತದೆ. ಕಾಂಗ್ರೆಸ್ ತನ್ನ ನಿರ್ಧಾರದ ಪ್ರಕಾರ ನಡೆದರೆ ಅದರ *ಏಕೈಕ ಫಲಿತಾಂಶವೆಂದರೆ ಹೊಸ ಚುನಾವಣೆಗಳು! ಬಿಜೆಪಿ ಜತೆಗೂಡಿ ತನ್ನ ಸರಕಾರವನ್ನು ರಚಿಸಲು ಕಾಂಗ್ರೆಸ್‌ಗೆ ಸಂಯುಕ್ತ ರಂಗದಿಂದ ಬೆಂಬಲ ನಿರೀಕ್ಷಿಸುವುದು ಸಾಧ್ಯವೇ?* ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಯಾವ ಮುಖ ಹೊತ್ತು ಜನತೆಯ ಎದುರು ಹೋಗುತ್ತದೆ? ಜತೆಗೆ ಹಲವು ಕಾಂಗ್ರೆಸ್ ಮುಖಂಡರು ಭ್ರಷ್ಟಾಚಾರದ ಕೇಸುಗಳಲ್ಲಿ ಸಿಲುಕಿರುವುದು ಬೆಳಕಿಗೆ ಬರುತ್ತದೆ.

ಕಾಂಗ್ರೆಸ್ ಈ ತೀವ್ರ ಕ್ರಮಕ್ಕೆಳೆಯಲು ಕಾರಣಗಳೇನೇ ಇರಬಹುದು. ಆದರೆ ಇಂತಹ ಮಹತ್ವದ ನಿರ್ಣಯಗಳಿಗೆ ಬರುವಾಗ ದೇಶದ ಹಿತ ಮುಖ್ಯವಾಗಿರಬೇಕು. ಆದ್ದರಿಂದ ಕಾಂಗ್ರೆಸ್ ತನ್ನ ನಿರ್ಧಾರದ ಬಗ್ಗೆ ಪುನರಾಲೋಚಿಸಬೇಕು, ದೇಶ ಮತ್ತೊಂದು ಚುನಾವಣೆಯನ್ನು ಎದುರಿಸುವಂತೆ ಮಾಡದೆ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸುರ್ಜಿತ್ ಆಗ್ರಹಪಡಿಸಿದ್ದಾರೆ. □



ಸಿಪಿಐ(ಎಂ)ಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ

ಬಳ್ಳಾರಿ: ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ)ನ ಕಾ|| ದೇವಮ್ಮ ಅಧ್ಯಕ್ಷರಾಗಿಯೂ ಹಾಗೂ ಕಾ|| ಪಿ.ಸೋಮಪ್ಪ ಉಪಾಧ್ಯಕ್ಷರಾಗಿಯೂ ಆಯ್ಕೆಯಾಗಿದ್ದಾರೆ.

13 ಸದಸ್ಯರ ಗ್ರಾಮ ಪಂಚಾಯತಿಯಲ್ಲಿ ಸಿಪಿಐ(ಎಂ) 3, ಜನತಾದಳ-3, ಹಾಗೂ ಕಾಂಗ್ರೆಸ್ -6 ಸದಸ್ಯರುಗಳನ್ನು ಹೊಂದಿದ್ದು, ಒಬ್ಬ ಸದಸ್ಯರು ಅನರ್ಹಗೊಂಡಿದ್ದು ಕಾಂಗ್ರೆಸ್‌ನ ಇಬ್ಬರು ಸದಸ್ಯರು ಗೈರು ಹಾಜರಾಗಿದ್ದರು. ಜನತಾದಳ ಬೆಂಬಲದೊಂದಿಗೆ ಈ ಸ್ಥಾನಗಳನ್ನು ಸಿಪಿಐ(ಎಂ) ಗಳಿಸಿಕೊಂಡಿದೆ.



ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ವರ್ಗಾವಣೆಗೆ ಆಗ್ರಹಿಸಿ ಧರಣಿ: ಅತ್ಯಾಚಾರ ಯತ್ನಕ್ಕೆ ಖಂಡನೆ

ಕುರುಗೋಡು: ಬಳ್ಳಾರಿ ತಾಲ್ಲೂಕು ಸೋಮಸಮುದ್ರ ಗ್ರಾಮದ ದಲಿತ ಮಹಿಳೆಯಾದ ಹುಲಿಗೆಮ್ಮ ಕುಡಿಯುವ ನೀರು ತರಲು ಪಕ್ಕದ ಚಿಲುಮೆಯಲ್ಲಿ ನೀರು ತುಂಬುತ್ತಿದ್ದಾಗ ಅದೇ ಗ್ರಾಮದ ಇಬ್ಬರು ಸವರ್ಣೀಯರು ನೀರು ತೆಗೆದುಕೊಳ್ಳುವುದನ್ನು ಆಕ್ಷೇಪಿಸಿದಾಗ ದಲಿತ ಮಹಿಳೆ ಇದನ್ನು ಪ್ರತಿಭಟಿಸಿದ್ದರಿಂದ ಆಕೆಯನ್ನು ನಿಂದಿಸಿ, ಥಳಿಸಿ, ಅವಳ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವುದನ್ನು ಹಾಗೂ ಕುರುಗೋಡು ಪೋಲೀಸ್ ಠಾಣೆಗೆ ದೂರು ಕೊಟ್ಟರು, ಎಸ್.ಐ. ಆರೋಪಿಗಳನ್ನು ರಕ್ಷಿಸುತ್ತಿದ್ದಾರೆ ಎಂದು ಹಾಗೂ ಎಸ್‌ಐ ಮೇಲೆ ತುಂಬಾ ದೂರುಗಳಿದ್ದು ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೂರಾರು ರೈತರು ಮಾರ್ಚ್ 14 ರಂದು ಕುರುಗೋಡುವಿನಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಈ ಕಾರ್ಯಕ್ರಮದಲ್ಲಿ ಹುಲುಗಪ್ಪ, ಮಾರೆಪ್ಪ, ದೊಡ್ಡಯ್ಯ ಹಾಗೂ ಕೆ.ಗಾದಿ ಲಿಂಗಪ್ಪ ಭಾಗವಹಿಸಿದ್ದರು.

ಡಿವೈಎಫ್‌ಐ ಮದ್ದೂರು ತಾಲ್ಲೂಕು ಸಮ್ಮೇಳನ

ಮಂಡ್ಯ: ಭಗತ್ ಸಿಂಗ್ ವಿಚಾರಧಾರೆಯಿಂದ ಪ್ರೇರಣೆ ಪಡೆದು ಯುವಜನ ಸಂಘಟನೆಗೆ ಮುಂದಾದ ಮಂಡ್ಯ ಜಿಲ್ಲೆಯ ಯುವಕರು ಡಿವೈಎಫ್‌ಐ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಂಘಟನೆಯನ್ನು ವಿಸ್ತರಿಸುವ ದೃಷ್ಟಿಯಿಂದ ಭಗತ್ ಸಿಂಗ್ ಮತ್ತು ಸಂಗಾತಿಗಳಾದ ರಾಜಗುರು, ಸುಖದೇವ್ ರ ಹುತಾತ್ಮ ದಿನವಾದ ಮಾರ್ಚ್ 23 ರಂದು ಮದ್ದೂರು ತಾಲ್ಲೂಕಿನ ಕೆಸ್ತೂರಿನಲ್ಲಿ ತಾಲ್ಲೂಕು ಡಿವೈಎಫ್‌ಐ ಸಮ್ಮೇಳನ ನಡೆಸಿದರು.

ಸಮ್ಮೇಳನದ ಉದ್ಘಾಟನೆಯನ್ನು ಮಾಡಿದ ಮಂಡ್ಯ ಪಿಇಎಸ್ ಕಾಲೇಜಿನ ಪ್ರಾಧ್ಯಾಪಕರಾದ ಮುದ್ದೇಗೌಡರು ಮಾತನಾಡಿ ಸ್ವಾತಂತ್ರ್ಯ ನಂತರದ ಅಧಿಕಾರದ ಜನ ಯುವ ಜನರ ಕನಿಷ್ಠ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ ಎಂದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಖಜಾಂಚಿ ಪುಟ್ಟ ಮಾದಯ್ಯ, ತಾಲ್ಲೂಕು ಕಾರ್ಯದರ್ಶಿ ಎನ್.ಎಲ್.ಭರತ್ ರಾಜ್, ಎಸ್.ಎಫ್.ಐ.ನ ಬಿ.ಅರುಣ್ ಕುಮಾರ್, ಗ್ರಾಮ ಪಂಚಾಯ್ತಿ ಅಧ್ಯಕ್ಷರು ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಜಗದೀಶ್ ಮಹಮದ್ ಸಲೀಂ, ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.

ಸಮ್ಮೇಳನ ಕೈಗೊಂಡ ಕೆಲವು ನಿರ್ಣಯಗಳು

ಮದ್ದೂರಿನಿಂದ ತುಮಕೂರು ಮಾರ್ಗಕ್ಕೆ ಬಸ್ ಸೌಕರ್ಯ ಮತ್ತು ರಸ್ತೆ ದುರಸ್ತಿಗೆ ಆಗ್ರಹ, ಮಳವಳ್ಳಿಯ ಕಾಗೇಪುರದಲ್ಲಿ ನಡೆದ ಪೋಲೀಸ್ ದೌರ್ಜನ್ಯಕ್ಕೆ ಖಂಡನೆ, ತಾಲ್ಲೂಕಿಗೆ ಸಮರ್ಪಕ ಕುಡಿಯುವ ನೀರಿಗೆ ಒತ್ತಾಯ.

ನೂತನ ತಾಲ್ಲೂಕು ಸಮಿತಿ: ಅಧ್ಯಕ್ಷರು: ನಾಗೇಶ್, ಉಪಾಧ್ಯಕ್ಷರಾಗಿ ಕೆಂಚೇಗೌಡ, ಸಿದ್ದೇಗೌಡ, ಕಾರ್ಯದರ್ಶಿ: ಧನಂಜಯ, ಸಹ ಕಾರ್ಯದರ್ಶಿಗಳಾಗಿ: ಮಂಚಶೆಟ್ಟಿ, ಖಜಾಂಚಿ-ಮಹಮದ್ ಸಲೀಂ ಅಲ್ಲದೆ ಆರು ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಕೋಲಾರ: ಡಿವೈಎಫ್‌ಐ ಸದಸ್ಯತ್ವ ಚಳುವಳಿ ಆರಂಭ

ಕೋಲಾರ ಜಿಲ್ಲೆಯಲ್ಲಿ ಭಗತ್ ಸಿಂಗ್‌ರ ಹುತಾತ್ಮ ದಿನಾಚರಣೆಯ ಅಂಗವಾಗಿ ಮಾರ್ಚ್ 23ರಂದು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸದಸ್ಯತ್ವ ನೊಂದಾವಣೆ ಉದ್ಘಾಟನೆ ಮಾಡುವ ಮುಖಾಂತರ ಸದಸ್ಯತ್ವ ಚಳುವಳಿ ಪ್ರಾರಂಭವಾಗಿದೆ. ಶ್ರೀನಿವಾಸಪುರದ ರೋಜರನಪಳ್ಳಿ ಕ್ರಾಸ್, ಕೋಲಾರ ಗಾಂಧಿನಗರ, ತೊಟ್ಲಿ, ಹರಟಿ, ಬಂಗಾರಪೇಟೆ ತಾಲ್ಲೂಕುಗಳಲ್ಲಿ ಉದ್ಘಾಟನ ಕಾರ್ಯಕ್ರಮದೊಂದಿಗೆ ಪ್ರಾರಂಭಗೊಂಡು ನೊಂದಾವಣೆ ಚಳುವಳಿ ಮಧ್ಯಾಹ್ನ 3 ಗಂಟೆಯ ವೇಳೆಗೆ 1600 ಸದಸ್ಯತ್ವ ನಡೆದಿರುವ ಬಗ್ಗೆ ಮಾಹಿತಿ ಬಂದಿದ್ದು ಉಳಿದ ಕಡೆಗಳಲ್ಲೂ ಸದಸ್ಯತ್ವ ಕಾರ್ಯಕ್ರಮ ನಡೆಯುತ್ತಿದೆ.

ಶ್ರೀನಿವಾಸಪುರ: ಮಾರ್ಚ್ 11ರಂದು ಶ್ರೀನಿವಾಸಪುರ ತಾಲ್ಲೂಕಿನ ವಳಗೇರನಪಳ್ಳಿ ಕ್ರಾಸ್‌ನಲ್ಲಿ 10.40ರಿಂದ ಸುಮಾರು ಒಂದೂವರೆ ಗಂಟೆಗಳ ಕಾಲ ಯುವಜನ ರಿಂದ ರಾಜ್ಯ ಜನತಾದಳದ ಸರಕಾರ ಏರಿಸಿರುವ ಬಸ್‌ಪ್ರಯಾಣ ದರವನ್ನು ಹಿಂತೆಗೆದು ಕೊಳ್ಳಬೇಕೆಂದೂ, ಕೆಎಸ್‌ಆರ್‌ಟಿಸಿಯನ್ನು ಖಾಸಗೀಕರಣ ಮಾಡಬಾರದೆಂದೂ ಸಾರಿಗೆ ಮಂತ್ರಿ ಸಿಂಧ್ಯಾರವರ ಈ ಜನವಿರೋಧಿ ನೀತಿಯನ್ನು ವಿರೋಧಿಸಿ ರಸ್ತೆ ತಡೆ ಮಾಡಲಾಯಿತು. ಡಿವೈಎಫ್‌ಐನ ಜಿಲ್ಲಾಧ್ಯಕ್ಷ ಪಿ.ನಾಗಪ್ಪ, ರಸ್ತೆ ತಡೆಯ ಉದ್ದೇಶಗಳ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ರೈತ ಸಂಘದ ಹೊಳೂರು ಶಂಕರ್, ಪಿ.ಆರ್.ನಾರಾಯಣಸ್ವಾಮಿ, ಡಿವೈಎಫ್‌ಐನ ಜಿ.ಆರ್.ಮುರಳೀಕೃಷ್ಣ, ಡಿವೈಎಫ್‌ಐನ ರೋಜರನಪಳ್ಳಿ ಕ್ರಾಸ್ ವಲಯ ಸಮಿತಿ ಸಂಚಾಲಕ ಎನ್. ನಾಗಭೂಷಣ ಭಾಗವಹಿಸಿ ಮಾತನಾಡಿದರು.

ಡಿವೈಎಫ್‌ಐ ವಿರಾಜಪೇಟೆ ವಲಯ ಸಮ್ಮೇಳನ

ವಿರಾಜಪೇಟೆ ವಲಯ ಸಮ್ಮೇಳನವು ಮಾರ್ಚ್11ರಂದು ನಡೆಯಿತು. ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಪೀಟರ್ ಲೋಬೋರವರು ಧ್ವಜಾರೋಹಣವನ್ನು ನೆರವೇರಿಸಿದರು. ಡಿವೈಎಫ್‌ಐ ರಾಜ್ಯ ಸಮಿತಿ ಸದಸ್ಯರಾದ ಕಿಶೋರ್ ಕುಟ್ಟಪ್ಪ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀಜಗದೀಶ್ ವಕೀಲರು, ಯುವಜನರ ಇಂದಿನ ಸಮಸ್ಯೆಗಳನ್ನು ಹಾಗೂ ಯುವಜನರು ಮಾದಕವ್ಯಸನಿಗಳಾಗುತ್ತಿರುವುದರ ಬಗ್ಗೆ ಮಾತನಾಡಿ ಇದಕ್ಕಿರುವ ಪರಿಹಾರವೆಂದರೆ ಯುವಜನರ ಐಕ್ಯ ಹೋರಾಟ ಮತ್ತು ಯುವಜನರನ್ನು ಒಂದು ವಿಶಾಲ ಸಂಘಟನೆಯ ಅಡಿಯಲ್ಲಿ ಸಂಘಟಿಸಿ ಆಣಿನೆರೆಸುವುದು ಎಂದರು.

ಪಕ್ಷದ ರಾಜ್ಯ ಕೇಂದ್ರ ಶಾಲೆ ಮುಂದಕ್ಕೆ

ಮೇ ತಿಂಗಳಲ್ಲಿ ರಾಜ್ಯ ಕೇಂದ್ರ ಶಾಲೆ ನಡೆಸಬೇಕೆಂದು ರಾಜ್ಯ ಸಮಿತಿ ನಿರ್ಣಯ ಮಾಡಿತ್ತು. ಇಂದಿನ ರಾಜಕೀಯ ಸ್ಥಿತ್ಯಂತರಗಳಿಂದಾಗಿ ಅದನ್ನು ಜೂನ್ ತಿಂಗಳಿಗೆ ಮುಂದೂಡಲು ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ನಿರ್ಣಯಿಸಿದೆ

ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ರೈಲು-ರಸ್ತೆ ತಡೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ರಾಜ್ಯಾದ್ಯಂತ ಮಾರ್ಚ್ 27ರಂದು ಕಾರ್ಮಿಕರು, ರೈತರು, ವಿದ್ಯಾರ್ಥಿ-ಯುವಜನ, ಇನ್ನಿತರ ದುಡಿಯುವ ಜನರ ಆಕ್ರೋಶಗಳ ಬಗ್ಗೆ ಕಳೆದ ಸಂಚಿಕೆಯಿಂದ ಮುಂದುವರೆದ ವರದಿ.


ಹುಬ್ಬಳ್ಳಿಯಲ್ಲಿ

ಉಡುಪಿ: ಉಡುಪಿಯಲ್ಲಿ 300ಕ್ಕಿಂತಲೂ ಹೆಚ್ಚು ಕಾರ್ಮಿಕರು ಕಾರ್ಪೊರೇಶನ್ ಬ್ಯಾಂಕ್ ರಸ್ತೆಯಿಂದ ಮೆರವಣಿಗೆಯಲ್ಲಿ ಹೋಗಿ ಬಸ್ ನಿಲ್ದಾಣದ ಸಮೀಪದ ತ್ರಿವೇಣಿ ವೃತ್ತದಲ್ಲಿ ಬಸ್ ತಡೆ ಚಳುವಳಿ ನಡೆಸಿದರು. ಇವರಲ್ಲಿ 95 ಮಂದಿ ಮಹಿಳೆಯರಿದ್ದರು. ಚಳುವಳಿಯ ನೇತೃತ್ವವನ್ನು ಪಿ.ವಿಶ್ವನಾಥ ರೈ, ಡೇವಿಡ್ ಕರ್ಕಡ, ಎನ್.ಸಾಧು ಅಮೀನ್, ದೋಗು ಸುವರ್ಣ, ರಮೇಶ್ ಮೆಂಡನ್ ಮತ್ತು ಗುರುರಾಜ ಶೆಟ್ಟಿಗಾರರು ವಹಿಸಿದ್ದರು. ಚಳುವಳಿಗಾರರನ್ನುದ್ದೇಶಿಸಿ ಪಿ.ವಿಶ್ವನಾಥ ರೈಯವರು ಮಾತನಾಡಿದರು.

ಬಂಟ್ವಾಳ: ನಗರದ ಬಿ.ಸಿ. ರಸ್ತೆಯಲ್ಲಿ ರಸ್ತೆ ತಡೆ ಚಳುವಳಿ ನಡೆಸಲಾಯಿತು. 130 ಮಹಿಳೆಯರನ್ನು ಒಳಗೊಂಡು 204 ಮಂದಿ ಕಾರ್ಯಕರ್ತರನ್ನು ಬಂಟ್ವಾಳ ಪೋಲೀಸರು ಬಂಧಿಸಿ ಅನಂತರ ಬಿಡುಗಡೆಗೊಳಿಸಿದರು. ಬಂಧಿಸಲ್ಪಟ್ಟವರಲ್ಲಿ ಸಿಐಟಿಯು ಮುಖಂಡರಾದ ಬಿ.ವಾಸು ಗಟ್ಟಿ, ಬಿ.ನಾರಾಯಣ, ಬಿ.ಸಂಜೀವ ಬಂಗೇರ, ಮೋನಪ್ಪ, ಸಪಲ್ಯ, ಡಿವೈಎಫ್‌ಐನ ಬಿ.ಉದಯಕುಮಾರ್, ...ಲ್ ಮೊದಲಾದವರು ಒಳಗೊಂಡಿದ್ದರು.

ದಕ್ಷಿಣ ಕನ್ನಡ: ಸುಮಾರು 2 ಸಾವಿರ ಕಾರ್ಮಿಕರು, ಯುವಜನರು, ನೌಕರರು, ರೈತರು, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಮಂಗಳೂರಿನ ರೈಲು ನಿಲ್ದಾಣದಲ್ಲಿ ಮಂಗಳಾ ಎಕ್ಸ್‌ಪ್ರೆಸ್ ರೈಲನ್ನು 11ರಿಂದ 11.30ರವರೆಗೆ ತಡೆದರು. ಮಂಗಳೂರಿನ ಪುರಭವನದ ಆವರಣದಿಂದ ಮೆರವಣಿಗೆಯಲ್ಲಿ ಹೋಗಿ ರೈಲು ಹಳಿಗಳ ಮೇಲೆ ಕುಳಿತು ಪಿಕೆಟಿಂಗ್ ನಡೆಸಿದವರಲ್ಲಿ ಸಿಐಟಿಯು, ಎಚ್‌ಎಂಎಸ್, ಬಿಇಎಫ್‌ಐ, ಡಿವೈಎಫ್‌ಐ, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆ ಇತ್ಯಾದಿ ಸಂಘಟನೆಗಳ ಕಾರ್ಯಕರ್ತರು ಒಳಗೊಂಡಿದ್ದರು.

ಚಳುವಳಿಗಾರರನ್ನುದ್ದೇಶಿಸಿ ಸಾಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕ ಬಿ.ಮಾಧವ, ಸಿಐಟಿಯು ಮುಂದಾಳು ಕೆ. ಆರ್.ಶ್ರೀಯಾನ್, ಸಂಜೀವಶೆಟ್ಟಿ, ಎಚ್.ಎಂ.ಎಸ್.ನ ವೆಂಕಟರಾವ್, ದ.ಕ. ಜಿಲ್ಲಾ ರೈತ ಸಂಘದ ರಾಮಚಂದ್ರ ಉಚ್ಚಿಲ್ ಮತ್ತು ಡಿವೈಎಫ್‌ಐನ ರಾಮದಾಸ್ ಅವರೂ ಮಾತನಾಡಿದರು.


ಶಿರಾಲಿಯಲ್ಲಿ

ಕುಂದಾಪುರ: ಶಾಸ್ತ್ರಿ ಸರ್ಕಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಳಿತು ವಾಹನಗಳನ್ನು ತಡೆದ 300ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಅನಂತರ ಬಿಡುಗಡೆ ಮಾಡಿದರು. ಚಳುವಳಿಯ ನೇತೃತ್ವವನ್ನು ಸಿಐಟಿಯು ಮುಖಂಡರಾದ ಅಬ್ರಹಾಂ ಕರ್ಕಡ, ಕೆ.ಶಂಕರ, ...ನಾರಾಯಣ, ವಿ.ನರಸಿಂಹ ಮಹಾಬಲ ವಡೇರ ಹೋಬಳಿ, ರೈತ ಸಂಘದ ಮುಖಂಡರಾದ ಯು.ದಾಸ ಭಂಡಾರಿ, ಡಿವೈಎಫ್‌ಐ ಮುಖಂಡ ಎಸ್.ನರಸಿಂಹ ಅವರು ವಹಿಸಿದ್ದರು.

ದಾಂಡೇಲಿ: ಉತ್ತರ ಕನ್ನಡ ಸಿಐಟಿಯು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನೂರಾರು ಪ್ರತಿಭಟನಾಕಾರರು ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿ ಬಸ್ ನಿಲ್ದಾಣದ ಬಳಿ ಬಂದು ಜವಾಹರ ಲಾಲ್ ನೆಹರೂ ರಸ್ತೆಯ ಮಧ್ಯೆ ಕುಳಿತು ರಸ್ತೆ ತಡೆ ಚಳುವಳಿ ನಡೆಸಿದರು. ಸಿಐಟಿಯು ಮುಖಂಡರು ಹಾಗೂ ನಗರಸಭಾ ಸದಸ್ಯರಾದ ಟಿ.ಎಸ್.ನಾಯ್ಕ ಹಾಗೂ ಭೀಮರಾವ್ ಮುಂತಾದವರು ಮಾತನಾಡಿದರು.

ಹುಬ್ಬಳ್ಳಿ: ಸಿಐಟಿಯು ನೇತೃತ್ವದ ಕಾರ್ಖಾನೆ, ಬೀಡಿ, ನೇಕಾರ ಕಾರ್ಮಿಕರು, ಏಯರ್ ಲೆಸ್, ಟೆಲಿಕಾಂ, ಬ್ಯಾಂಕ್, ವಿಮಾ ನೌಕರರು, ವಿದ್ಯಾರ್ಥಿ, ಯುವಜನರು ಸೇರಿದಂತೆ 400ಕ್ಕೂ ಹೆಚ್ಚು ಜನರು ಭಾಗವಹಿಸಿ ಹುಬ್ಬಳ್ಳಿಯಲ್ಲಿ ಕುರ್ಲಾ ಎಕ್ಸ್‌ಪ್ರೆಸ್ ರೈಲನ್ನು ಅರ್ಧ ಗಂಟೆಗಳ ಕಾಲ ತಡೆದರು. ಇದರ ನೇತೃತ್ವವನ್ನು ಎಸ್‌ಎಫ್‌ಐನ ಮಹಾಂತೇಶ್ ಮತ್ತು ಸಿಐಟಿಯುನ ಎ.ಎಂ.ಜೋಷಿ ವಹಿಸಿದ್ದರು. ರಬಿಯಾಬಿ ಸಾರಾಗಾಣ, ಶ್ರೀಮತಿ ಪತ್ತಾರ್, ಎ.ಎ.ಮುಲ್ಲಾ, ರಫಿ ಹೊಸಮಾರ ಮುಂತಾದವರು ವಹಿಸಿದ್ದರು.

ಭಟ್ಕಳ: ಭಟ್ಕಳ ತಾಲೂಕಿನ ಶಿರಾಲಿಯ ಪ್ರಮುಖ ಬೀದಿಗಳಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ ಬೃಹತ್ ಮೆರವಣಿಗೆ ನಡೆಸಿ ಶಿರಾಲಿಯ ರಾಷ್ಟ್ರೀಯ ಹೆದ್ದಾರಿ ನಂ. 17ರಲ್ಲಿ 15 ನಿಮಿಷಗಳ ಕಾಲ ರಸ್ತೆತಡೆ ಚಳುವಳಿ ನಡೆಸಿದರು. ನಂತರ 729 ಜನರು ಬಂಧಿತರಾಗಿದ್ದರು. ಇದಕ್ಕೂ ಮೊದಲು ವೆಂಕ್ಟಾಪುರ, ಮುರ್ಡೇಶ್ವರ, ಚಿತ್ರಾಪುರ ಹಾಗೂ ವಿವಿಧ ಕಾರ್ಖಾನೆಗಳ ಹಂಚಿನ ಕಾರ್ಮಿಕರು ಭಾಗವಹಿಸಿದ್ದರು. ಈಶ್ವರನಾಯ್ಕ, ಶಂಕರ್ ದೇವಾಡಿಗ, ಗಣಪತಿ ದೇವಾಡಿಗ, ಚಂದ್ರು ನಾಯ್ಕ, ಮಂಜುನಾಥ ನಾಯ್ಕ, ಹರಿಶ್ಚಂದ್ರ ದೇವಾಡಿಗ, ಮುನ್ವೇಲ್ ಡಿಕಾಸ್ತಾ, ವೆಂಕಟೇಶ ದೇವಾಡಿಗ, ನಾಗಪ್ಪ ದೇವಾಡಿಗ ಮುಂತಾದವರು ನೇತೃತ್ವ ವಹಿಸಿದ್ದರು.

ಹೊನ್ನಾವರ: ಹೊನ್ನಾವರದಲ್ಲಿ ಕಾಂ.ತಿಲಕಗೌಡ ನೇತೃತ್ವದಲ್ಲಿ ಸುಮಾರು 540ಕ್ಕೂ ಹೆಚ್ಚಿನ ಕಾರ್ಮಿಕರು ಮೆರವಣಿಗೆ ನಡೆಸಿ ರಾಷ್ಟ್ರೀಯ ಹೆದ್ದಾರಿ ನಂ. 17ರ ಮೇಲೆ ಅರ್ಧ ತಾಸು ರಸ್ತೆ ತಡೆ ಚಳುವಳಿ ನಡೆಸಿ ಬಂಧನಕ್ಕೊಳಗಾದರು.

ಸಕಲೇಶಪುರ: ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ 200ಕ್ಕೂ ಹೆಚ್ಚು ತೋಟ ಕಾರ್ಮಿಕರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ಚಳುವಳಿ ನಡೆಸಿದರು. ನಂತರ ಪ್ರವಾಸಿ ಮಂದಿರದ ಹತ್ತಿರ ಸಭೆ ನಡೆಸಿ ಚಳುವಳಿಯನ್ನು ಮುಕ್ತಾಯಗೊಳಿಸಿದರು.

ತುಮಕೂರು: ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ ಹಾಗೂ ಎ.ಆರ್.ಡಿ.ಯುನ ನೂರಾರು ಕಾರ್ಯಕರ್ತರು ರಸ್ತೆ ತಡೆ ಚಳುವಳಿ ನಡೆಸಿದರು. ಮಹಮದ್ ದಸ್ತಗೀರ್, ಸೈಯದ್ ಮುಜೀಬ್, ಎನ್.ಕೆ.ಸುಬ್ರಮಣ್ಯಂ, ಲೋಕೇಶ್ ಮುಂತಾದವರು ಭಾಗವಹಿಸಿದ್ದರು. □



ಕರ್ನಾಟಕದಲ್ಲಿ ಕಳೆದ ವಾರ

ಮಾರ್ಚ್ 28

- ಮುಂದಿನ ವರ್ಷ ವೈದ್ಯಕೀಯ ಕಾಲೇಜುಗಳಲ್ಲಿ ಶೇ. 15ರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯರಿಗೆ ನೀಡಿ ಆದಾಯ ಬರುವ ಹಣವನ್ನು ಆಸ್ಪತ್ರೆಗಳ ಸುಧಾರಣೆಗೆ ವಿನಿಯೋಗಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವರು.
- ಕನ್ನಡದ ನಾಲ್ವರು ಜ್ಞಾನ ಪೀಠ ವಿಜೇತರ ಅಂಚೆ ಚೀಟಿ ಬಿಡುಗಡೆ

ಮಾರ್ಚ್ 29

- ಚಳುವಳಿ ನಿರತ ಕಾಲೇಜು ಅಧ್ಯಾಪಕರಿಂದ ತಮ್ಮ ಮುಷ್ಕರವನ್ನು ತೀವ್ರಗೊಳಿಸಲು ನಿರ್ಧಾರ. ಅಖಿಲ ಭಾರತ ಅಧ್ಯಾಪಕರ ಒಕ್ಕೂಟದ ಬೆಂಬಲ.
- ಆಲಮಟ್ಟಿ ವಿವಾದ ಕುರಿತಂತೆ ಬಿಜೆಪಿ ಶಾಸಕ ನಂಜೇಗೌಡರು ಪ್ರಧಾನಿಗಳ ಬಗ್ಗೆ ತಳೆದ ನಿಲುವು ಅವರ ವೈಕ್ತಿಗತ ನಿಲುವು, ಬಿಜೆಪಿ ನಿಲುವಲ್ಲ ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ.

ಮಾರ್ಚ್ 30

- ಕಾಂಗ್ರೆಸ್ ಬೆಂಬಲ ಹಿಂಪಡೆದಿರುವ ಕ್ಲಿಷ್ಟ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಎದೆಗುಂದದೆ ವಿಚಲಿತರಾಗದೆ ಧೈರ್ಯದಿಂದಿರುವಂತೆ ಮುಖ್ಯಮಂತ್ರಿಗಳಿಂದ ಪ್ರಧಾನಿಗಳಿಗೆ ತುರ್ತು ಸಂದೇಶ. ರಾಷ್ಟ್ರಪತಿಗಳು ಹೊಸ ಪ್ರಧಾನಿಯನ್ನು ನೇಮಿಸಬೇಕೆಂದು ರಾಮಕೃಷ್ಣ ಹೆಗಡೆ.
- ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ಪ್ರದಾನ.

ಮಾರ್ಚ್ 31

- ಬೆಂಗಳೂರಿನಲ್ಲಿನ ಅರಮನೆ ಪ್ರದೇಶದ ಸ್ವಾಧೀನ ಕುರಿತ ಕಾಯ್ದೆ ಕ್ರಮಬದ್ಧತೆಯನ್ನು ಪ್ರಶ್ನಿಸಿದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮತ್ತಿತರರ ರಿಟ್ ಅರ್ಜಿಗಳು ಸುಪ್ರೀಂಕೋರ್ಟಿನಲ್ಲಿ ವಜಾ. ಪ್ರತಿ ರಿಟ್ ಅರ್ಜಿಗೆ 5000 ರೂ. ನಂತೆ ಸರಕಾರಕ್ಕೆ ಕೋರ್ಟ್ ವೆಚ್ಚ ತುಂಬಿಸಿಕೊಡಬೇಕು ಎಂದು ಆದೇಶ.
- ಕವಿ ಅರವಿಂದ ನಾಡಕರ್ಣಿಯವರಿಗೆ 1996ನೇ ಸಾಲಿನ ಗೌರೀಶಕಾಯ್ಕಿಣಿ ಪ್ರಶಸ್ತಿ ಪ್ರದಾನ.

ಏಪ್ರಿಲ್ 1

- ಸರಕು ಸಾಗಣೆ ಮೇಲೆ ಶೇ. 5 ಸೇವಾ ಶುಲ್ಕದ ವಿರುದ್ಧ ಲಾರಿ ಮಾಲೀಕರ ಅನಿರ್ದಿಷ್ಟ ಕಾಲದ ಮುಷ್ಕರದಿಂದ ರಾಜ್ಯದಲ್ಲೂ ಸರಕು ಸಾಗಣೆ ಸ್ಥಗಿತ.
- ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಅನುಷ್ಠಾನ ಕುರಿತು ಟೆಂಡರ್ ಷರತ್ತುಗಳ ಬದಲಾವಣೆ ಸಾಧ್ಯವಿಲ್ಲ ಎಂದು ರಾಜ್ಯ ಬೃಹತ್ ಕೈಗಾರಿಕಾ ಸಚಿವರು

ಏಪ್ರಿಲ್ 2

- ಮತ್ತೊಂದು ಲಾಕಪ್ ಸಾವು. ಕೋಲಾರ ಟೌನ್ ಪೋಲೀಸ್ ಠಾಣೆಯಲ್ಲಿ ಬಂಧಿತ ಆರೋಪಿ ವೆಂಕಟಪ್ಪ ಎಂಬಾತನ ಸಾವು. ಎಸ್‌ಎಫ್‌ಐ, ಡಿವೈಎಫ್‌ಐ, ಸಿಪಿಐ(ಎಂ) ಮತ್ತಿತರರ ಪ್ರತಿಭಟನಾ ಧರಣಿ-ಎಂಟು ಪೋಲೀಸರ ಅಮಾನತು.

ಏಪ್ರಿಲ್ 3

- ಮುಖ್ಯಮಂತ್ರಿಗಳ ಭರವಸೆಯ ಮೇರೆಗೆ 40 ದಿನಗಳ ಕಾಲೇಜು ಹಾಗೂ ವಿಶ್ವವಿದ್ಯಾಲಯ ಅಧ್ಯಾಪಕರ ಮುಷ್ಕರ ಅಂತ್ಯ.
- ದಿನಗೂಲಿ ಆಧಾರದ ಮೇಲೆ ಚಾಲಕ, ನಿರ್ವಾಹಕರಾಗಿ ದುಡಿಯುತ್ತಿರುವ 2609 ಮಂದಿಯನ್ನು ಏಪ್ರಿಲ್‌ನಿಂದಲೇ ಕಾಯಂಮಾಡಿರುವುದಾಗಿ ಸಾರಿಗೆ ಸಚಿವರು
- ಏಪ್ರಿಲ್ 15ರವರೆಗೆ ಎನ್‌ಜಿಇಎಫ್‌ನಲ್ಲಿ ಕೆಲಸ ಸ್ಥಗಿತ - ಸುಧಾರಣೆಯ ಬಗ್ಗೆ ಪರಿಶೀಲಿಸಲಿಕ್ಕಾಗಿ ಎಂದು ಕೈಗಾರಿಕಾ ಸಚಿವರು.

ಸಿಐಟಿಯು ಗುಲ್ಬರ್ಗಾ ಸಮ್ಮೇಳನ

ಮಾರ್ಚ್ 8 ರಂದು ಸಿಐಟಿಯುವಿನ ಪ್ರಥಮ ಗುಲ್ಬರ್ಗ ಜಿಲ್ಲಾ ಸಮ್ಮೇಳನ ರಾಜಶ್ರೀ ಸಿಮೆಂಟ್ ಕಾರ್ಖಾನೆಯ ಮಳಖೇಡದಲ್ಲಿ ಜರುಗಿತು. ರಾಜ್ಯ ಸಿಐಟಿಯುವಿನ ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಮ್ಮೇಳನದ ಸ್ಥಳಕ್ಕೆ ದಿವಂಗತ ಕಾ|| ವಿಜಯ ಶರ್ಮ ನಗರ ಎಂದು ನಾಮಕರಣ ಮಾಡಿ ಸಭೆಯನ್ನು ಅವರು ಉದ್ಘಾಟಿಸಿದರು. ಸಭೆಯಲ್ಲಿ ಜಿಲ್ಲಾ ಸಂಚಾಲನಾ ಸಮಿತಿಯ ವರದಿಯ ಮೇಲೆ ಹಲವು ಕಾರ್ಖಾನೆಗಳಿಂದ ಬಂದ ಪ್ರತಿನಿಧಿಗಳು ಚರ್ಚೆ ಮಾಡಿದರು. ಒಟ್ಟು 154 ಪ್ರತಿನಿಧಿಗಳು ಬಂದಿದ್ದರು. ಈ ಸಮ್ಮೇಳನದಲ್ಲಿ ಕೆಲವು ಮುಖ್ಯ ನಿರ್ಣಯಗಳನ್ನು ಮಂಡಿಸಲಾಯಿತು.

ಅಸಂಘಟಿತ ಕಾರ್ಮಿಕರ ಒಂದು ಪ್ರಮುಖ ನಿರ್ಣಯವನ್ನು ಸಮ್ಮೇಳನದಲ್ಲಿ ಮಂಡಿಸಲಾಯಿತು.

ಸಿಐಟಿಯುವಿನ ಹೊಸ ಜಿಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ರಚನೆಯಾಯಿತು. 10 ಜನ ಪದಾಧಿಕಾರಿಗಳು ಮತ್ತು 17 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ- ವಿ.ಜಿ.ದಾಸ್, ಪ್ರಧಾನ ಕಾರ್ಯದರ್ಶಿ ಯಾಗಿ ಚಂದು ಜಾಧವ ಆಯ್ಕೆಯಾದರು. ನಂತರ ರಾಜಶ್ರೀ ಕಾರ್ಖಾನೆಯಿಂದ ಆರಂಭವಾದ ಮೆರವಣಿಗೆಯಲ್ಲಿ ಜಿಲ್ಲೆಯ ಎಲ್ಲಾ ಕಾರ್ಮಿಕರು ಭಾಗವಹಿಸಿದ್ದರು. ಬಹಿರಂಗ ಸಭೆಯಲ್ಲಿ ಸೂರ್ಯನಾರಾಯಣ ರಾವ್, ಮಾರುತಿ ಮಾನ್ಪಡೆ, ನೀಲಾ.ಕೆ, ವಿ.ಜಿ.ದಾಸ್, ಮಾತನಾಡಿದರು. ಚಂದು ಜಾಧವ ವಂದನಾರ್ಪಣೆ ಮಾಡಿದರು.

ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಬಿಜೆಪಿ ಬೆಂಬಲಿಗರ ಹಲ್ಲೆಗೆ ಖಂಡನೆ

ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕರಿಕೆ ಗ್ರಾಮದಲ್ಲಿ ಜನರ ಪರವಾಗಿ ಕೆಲಸ ಮಾಡುತ್ತಾ ಬಂದಿರುವ ಕೆಲವು ಯುವಕರ ಮೇಲೆ ಕೊಡಗು ಜಿಲ್ಲೆಯ ಬಿಜೆಪಿ ಉಪಾಧ್ಯಕ್ಷ ಕೋಡಿ ಪೊನ್ನಪ್ಪನವರ ಬೆಂಬಲಿಗರು ಮಾರಕಾಸ್ತ್ರಗಳಿಂದ ಧಾಳಿ ನಡೆಸಿ ಇಬ್ಬರು ಡಿವೈಎಫ್‌ಐ ಕಾರ್ಯಕರ್ತರಾದ ಕೆ.ಎಂ. ಪಾಲನ್ ಮತ್ತು ಜೋನ್ ಅವರಿಗೆ ತೀವ್ರ ಗಾಯಗಳಾಗಿವೆ ಎಂದು ವರದಿಯಾಗಿದೆ. ಅವರನ್ನು ವಿರಾಜಪೇಟೆ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದೆ.

ಡಿವೈಎಫ್‌ಐ ಸಂಘಟನೆಯನ್ನು ಕಟ್ಟಿ ಅಲ್ಲಿ ಸಮ್ಮೇಳನವನ್ನು ನಡೆಸುವ ಈ ಯುವಜನರ ಉತ್ಸಾಹವನ್ನು ಸಹಿಸಲಾಗದ ಈ ಹಲ್ಲೆ ನಡೆಸಲಾಗಿದ್ದು, ಸ್ಥಳೀಯ ಪೋಲೀಸರು ಆರೋಪಿಗಳನ್ನು ಬಂಧಿಸುವ ಬದಲು ಪ್ರತಿ ದೂರನ್ನು ಪಡೆದು ಬಿಜೆಪಿ ಕಾರ್ಯಕರ್ತರನ್ನು ಆಸ್ಪತ್ರೆಗೆ ದಾಖಲು ಪಡಿಸಿದ್ದಾರೆ. ಇಲ್ಲಿ ಪೋಲೀಸರು ಬಿಜೆಪಿ ಮುಖಂಡರೊಂದಿಗೆ ಶಾಮೀಲಾಗಿರುವುದು ಸ್ಪಷ್ಟ. ಇಂತಹ ಸನ್ನಿವೇಶದಲ್ಲಿ ಅಲ್ಲಿಯ ಪೋಲೀಸರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲವಾದ್ದರಿಂದ ಕೂಡಲೇ ಮಧ್ಯ ಪ್ರವೇಶಿಸಿ ಹಲ್ಲೆಕೋರರನ್ನು ಬಂಧಿಸಿ ನಿಷ್ಪಕ್ಷ ಪಾತ ತನಿಖೆ ನಡೆಸಲು ಆದೇಶಿಸಬೇಕು ಎಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ರಾಜ್ಯ ಗೃಹ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಅಲ್ಲದೆ ಡಿವೈಎಫ್‌ಐ ಮುಖಂಡರು ಪೋಲೀಸ್ ಮಹಾ ನಿರ್ದೇಶಕರುಗಳನ್ನು ಭೇಟಿಯಾಗಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಕಡಂಗ ಘಟನೆ ಆತಂಕಕಾರಿ-ಸಿಪಿಐ(ಎಂ) ಕಳವಳ

ಪರಸ್ಪರ ಸೌಹಾರ್ದಯುತ ಜೀವನ ನಡೆಸುತ್ತಾ ಬಂದಿರುವ ಕಡಂಗದಲ್ಲಿ ಕೆಲವರ ವೈಯಕ್ತಿಕ ದ್ವೇಷ ಸಾಧನೆಗಾಗಿ ಘಟನೆಗೆ ಕೋಮು ಬಣ್ಣ ಹಚ್ಚಿ ಅಮಾಯಕ ಜನರ ಆಸ್ತಿ, ಪಾಸ್ತಿ ಹಾಗೂ ಜೀವ ಹಾನಿಗೆ ಪ್ರಯತ್ನಿಸಿದ ಘಟನೆ ನಡೆದಿದ್ದು, ಇದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ ಖೇದ ವ್ಯಕ್ತಪಡಿಸಿದೆ.

ವೈಯುಕ್ತಿಕ ಕಾರಣಗಳಿಗೆ ಕೋಮು ಬಣ್ಣ ಹಚ್ಚಿ ಅಶಾಂತಿಯನ್ನು ಸೃಷ್ಟಿಸಿ ಜನರ ಸೌಹಾರ್ದಯುತ ಜೀವನಕ್ಕೆ ಧಕ್ಕೆ ತರುವ ಅಮಾಯಕ ಜನರ ಜೀವನದೊಂದಿಗೆ ಚೆಲ್ಲಾಟವಾಡುವ ಈ ಘಟನೆಗೆ ಕಾರಣವಾದವರು ಯಾರೇ ಆದರೂ ಅವರೆಷ್ಟೇ ಪ್ರಭಾವ ಶಾಲಿಗಳಾಗಿದ್ದರು ಸರಿ ಆ...ತದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಇಂತಹ ಘಟನೆಗಳಿಂದ ಪರಸ್ಪರ ಭಾವೋದ್ರೇಕಿತರಾಗದೆ ಶಾಂತಿ ಸೌಹಾರ್ದತೆ ಹಾಗೂ ಪರಸ್ಪರ ಐಕ್ಯತೆಯನ್ನು ಕಾಪಾಡುವಲ್ಲಿ ಸಹಕರಿಸಬೇಕೆಂದು ಕಡಂಗ ಮತ್ತು ಜಿಲ್ಲೆಯ ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ.

ವಿಜಯ ಶರ್ಮಾ

ಕಳೆದ ನಾಲ್ಕು ದಶಕಗಳಿಂದ ಗುಲ್ಬರ್ಗ ಜಿಲ್ಲೆಯ ಕಮ್ಯುನಿಸ್ಟ್ ಪಕ್ಷದ ರೈತ-ಕಾರ್ಮಿಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ವಿಜಯ ಶರ್ಮ ಅವರು ಇತ್ತೀಚೆಗೆ ಅನಾರೋಗ್ಯದಿಂದಾಗಿ ಮೃತಪಟ್ಟಿದ್ದಾರೆ. ಇವರು ಗುಲ್ಬರ್ಗಾ ಜಿಲ್ಲಾ ಸಮಿತಿ ಸದಸ್ಯರಾಗಿ, ಕೆಲವು ವರ್ಷ ಜಿಲ್ಲಾ ಕಾರ್ಯದರ್ಶಿಯಾಗಿ ಗುಲ್ಬರ್ಗ, ...ದಲ್ಲಿ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಯಾಗಿಯೂ ಕೆಲಸ ಮಾಡಿದ್ದರು. ಇತ್ತೀಚಿನ ವರ್ಷಗಳಲ್ಲಿ ಇವರ ಆರೋಗ್ಯ ಕೆಟ್ಟಿದ್ದು ರಾಜಕೀಯದಲ್ಲಿ ಸಕ್ರಿಯ ಭಾಗವಹಿಸಲು ತೊಂದರೆ ಯಾಗುತ್ತಿತ್ತು. 1964ರಲ್ಲಿ ಬಲಪಂಥವಾದವನ್ನು ... ಸಿಪಿಐ(ಎಂ) ಪಕ್ಷದಲ್ಲಿ ಮುಂದುವರಿದು ಪಕ್ಷ ಕಟ್ಟಲು ದುಡಿದಿದ್ದಾರೆ. ವಿಜಯಶರ್ಮ ಅವರ ಅಕಾಲಿಕ ಮರಣಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಆಘಾತ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಅವರ ಕುಟುಂಬದ ... ದುಃಖದಲ್ಲಿ ಪಕ್ಷ ಸಹಭಾಗಿಯಾಗುತ್ತದೆ.

■ "ಪಂಜಾಬಿನಲ್ಲಿ ಅಕಾಲಿದಳ (ಮಾನ್)ದೊಂದಿಗೆ ಬಿಎಸ್‌ಪಿ ಕೈ ಜೋಡಿಸುವುದರೊಂದಿಗೆ ಎಲ್ಲಾ ಬಾಗಿಲು ಮುಚ್ಚಿದಂತಾಗಿದೆ"

- ಅಟಲ್ ಬಿಹಾರಿ ವಾಜಪೇಯಿ,
ಫೆಬ್ರವರಿ 13, 1997

■ "ಬಿಜೆಪಿಯ ಕಾರ್ಯಕರ್ತರುಗಳು ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಯಥಾಸ್ಥಿತಿವಾದಿಯಾದ್ದರಿಂದ ಅವರೊಡನೆ ಕೆಲಸ ಮಾಡುವುದು ಕಷ್ಟ. ಅವರು ಹಿಂದುತ್ವ ಮನುವಾದಿ......."

- ಕಾನ್‌ಶೀ ರಾಮ್,
ಫೆಬ್ರವರಿ 13, 1997

ಎಷ್ಟು ದಿನ ಈ ಬಿಜೆಪಿ-ಬಿಎಸ್‌ಪಿ ಮದುವೆ?

ಸುರ್ಜಿತ್

ಒಂದು ವರ್ಷಕ್ಕಿಂತ ಹೆಚ್ಚು ದಿನ ಬಾಳಬಹುದು ಎಂದು ಸ್ವತಃ ಬಿಎಸ್‌ಪಿ ಮುಖಂಡರಿಗೂ ಭರವಸೆಯಿಲ್ಲ ಎಂಬುದು ಅವರು ಮಾಡಿಕೊಂಡ ವ್ಯವಸ್ಥೆಯಿಂದಲೇ ವೇದ್ಯವಾಗುತ್ತದೆ. ಕೆಲವಾದರೂ ವಿಷಯಗಳಲ್ಲಿ ಸಮಾನ ನಿಲುವಿಲ್ಲದ ಈ ಕೂಟದಲ್ಲಿನ ಆಂತರಿಕ ವೈರುಧ್ಯ ಬಹಳ ಮೊದಲೇ ಪ್ರಕಟಗೊಳ್ಳಬಹುದು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್.

ಇವೆರಡು ಸ್ಯಾಂಪಲ್ಲುಗಳಷ್ಟೇ. ಒಂದು ತಿಂಗಳಲ್ಲೇ ಇವರು ಇದನ್ನು ಮರೆತುಬಿಟ್ಟರು. ಆದರೆ ಜನಗಳಿಗೂ ಗೊತ್ತಿತ್ತು, ಸಾರ್ವಜನಿಕವಾಗಿ ಒಬ್ಬರನ್ನೊಬ್ಬರು ದೂಷಿಸುತ್ತಿದ್ದರೂ ತೆರೆಯ ಮರೆಯಲ್ಲಿ ಪಿಸುಮಾತುಗಳು ಸಾಗಿದ್ದವು ಎಂದು. ಆದ್ದರಿಂದ ಉತ್ತರ ಪ್ರದೇಶದ ರಾಜ್ಯಪಾಲ ರೋಮೇಶ್ ಭಂಡಾರಿಯವರನ್ನು ವಾಪಸು ಕಳಿಸಬೇಕೆಂದು ಒತ್ತಾಯಿಸುವ ತನ್ನ ನಿಲುವಳಿಯನ್ನು ಲೋಕಸಭೆಯಲ್ಲಿ ಬಿಜೆಪಿ ಉಪ ಮುಖಂಡ ಜಸ್ವಂತ್ ಸಿಂಗ್ ವಾಪಸು ತಗೊಳ್ಳುತ್ತಾ ತನ್ನ ಪಕ್ಷದ ಉದ್ದೇಶ ಈಡೇರಿದೆ ಎಂದು ಹೇಳಿದರೂ ನಿಜವಾದ ಕಾರಣ ಬೇರೆಯೇ ಎಂದು ಎಲ್ಲರಿಗೂ ಗೊತ್ತಾಗಿತ್ತು. ಆದರೆ ಹಿಂದಿನ ದಿನ ಉತ್ತರ ಪ್ರದೇಶದಲ್ಲಿ ಅಧಿಕಾರ ಹಂಚಿಕೊಳ್ಳುವ ಒಪ್ಪಂದವಾದಾಗ ಕೆಲವು ಜನರಿಗೆ ಸ್ವಲ್ಪ ಆಶ್ಚರ್ಯ ಉಂಟಾದದ್ದು ನಿಜ.

ಈ ಎರಡೂ ಪಕ್ಷಗಳು ಅಧಿಕಾರ ಪಡೆಯಲು ಎಷ್ಟು ಹತಾಶವಾಗಿದ್ದವೆಂದರೆ ತಮ್ಮ ಚುನಾವಣಾ ಮೈತ್ರಿಗಳನ್ನು ಗಾಳಿಗೆ ತೂರುವ, ನೀತಿ-ಘೋಷಣೆಗಳನ್ನು ತ್ಯಜಿಸುವ ಸಮಯಸಾಧಕತನವನ್ನು ಪ್ರದರ್ಶಿಸಲೂ ಅವು ಹೇಸಿಲ್ಲ. ಇತ್ತ ಸಂಯುಕ್ತರಂಗದ ಒಳಗೂ ಮಾಯಾವತಿಯವರ ನೇತೃತ್ವದ ಬಿಎಸ್‌ಪಿ ಸರಕಾರಕ್ಕೆ ಬೆಂಬಲ ನೀಡುವಲ್ಲಿ ತಪ್ಪೇನಿಲ್ಲ ಎಂಬ ಭಾವನೆ ಕೆಲವರಿಗಿತ್ತು. ಆದರೆ ಸರಕಾರ ರಚಿಸುವಲ್ಲಿ ಬಿಜೆಪಿಯೊಂದಿಗೆ ಯಾವುದೇ ರೀತಿಯಲ್ಲಿ ಸೇರಿಕೊಳ್ಳುವುದಿಲ್ಲ ಎಂದು ರಾಜ್ಯಪಾಲರಿಗೆ ಲಿಖಿತವಾಗಿ ತಿಳಿಸಲು ಬಿಎಸ್‌ಪಿ ನಿರಾಕರಿಸಿದುದರಿಂದ ಇವರ ಕೈ ಮೇಲಾಗಲು ಸಾಧ್ಯವಾಗಲಿಲ್ಲ. ಅತ್ತ ಕಾಂಗ್ರೆಸ್ಸಿಗರೂ ಇದರಿಂದ ಮುಜುಗರ ಎದುರಿಸ ಬೇಕಾಯಿತು. ಕಾಂಗ್ರೆಸ್-ಬಿಎಸ್‌ಪಿ ಮೈತ್ರಿಯನ್ನು ಇಡೀ ದೇಶಕ್ಕೆ ವಿಸ್ತರಿಸುವ ಅವರ ಯೋಜನೆ ನುಚ್ಚು ನೂರಾಯಿತು.

ಬಿಎಸ್‌ಪಿಯನ್ನು ಸಂಯುಕ್ತ ರಂಗದ ನಿಕಟ ತರಬೇಕೆಂಬ ಇನ್ನೊಂದು ಅಭಿಪ್ರಾಯವೂ ಇತ್ತು. ಸಂಯುಕ್ತ ರಂಗ ರಚನೆಗೊಂಡದ್ದು ಮುಖ್ಯವಾಗಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಪಡೆಯದಂತೆ ತಡೆಯಲು ಎಂಬುದು ಎಲ್ಲರಿಗೂ ಗೊತ್ತು. ಇದರಿಂದ ಹಲವು ವಿಷಯಗಳಲ್ಲಿ ಮುಖ್ಯವಾಗಿ ಎಡ ಪಕ್ಷಗಳಿಗೆ ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟಂತೆ ಭಿನ್ನಾಭಿಪ್ರಾಯಗಳಿದ್ದರೂ ಸಂಯುಕ್ತರಂಗ ಮೂಡಿಬಂತು. ಆದರೆ ಬಿಎಸ್‌ಪಿಯ ಅಜೆಂಡಾದಲ್ಲಿರುವ ಒಂದೇ ಒಂದು ಅಂಶವೆಂದರೆ ಮಾಯಾವತಿ ಮುಖ್ಯಮಂತ್ರಿಯಾಗಬೇಕು . ಅದಕ್ಕೆ ಯಾವ ಸಹಾಯ ಸಿಕ್ಕಿದರೂ ಪರವಾಗಿಲ್ಲ! ಇಂತಹ ಪಕ್ಷ ಸಂಯುಕ್ತರಂಗದ ಭಾಗವಾಗಿರುವುದಾದರೂ ಹೇಗೆ?

ಬಿಜೆಪಿಯ ನಿಜ ಹೂರಣ ಬಯಲಿಗೆ

ಆರಂಭದಲ್ಲಿ ಕಲ್ಯಾಣಸಿಂಗ್‌ರವರು ಬಿಎಸ್‌ಪಿ-ಬಿಜೆಪಿ ಸರಕಾರಕ್ಕೆ ಪ್ರತಿರೋಧ ವ್ಯಕ್ತಪಡಿಸಿದರೂ ಆರು ತಿಂಗಳ ಸರದಿ ಮುಖ್ಯಮಂತ್ರಿ ಸೂತ್ರದಲ್ಲಿ ಅವರಿಗೆ ಎರಡನೇ ಸರದಿಯಲ್ಲಿ ಆರು ತಿಂಗಳಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಆಶ್ವಾಸನೆಯಿಂದಾಗಿ ಅವರು ಒಪ್ಪಿದರು. ಆರ್.ಎಸ್.ಎಸ್. ಕೂಡಾ ಬಿಎಸ್‌ಪಿಯ ಬೇಡಿಕೆಗೆ ತಲೆಬಾಗಲೇಬೇಕೆಂದು ಬಿಜೆಪಿಯ ಮೇಲೆ ಒತ್ತಾಯ ತಂದಿರುವುದಾಗಿ ವರದಿಯಾಗಿದೆ.

ಉತ್ತರ ಪ್ರದೇಶದ ಈ ಘಟನೆ ಮತ್ತೊಮ್ಮೆ ಬಿಜೆಪಿಯನ್ನು ಬಯಲಿಗೆಳೆದಿದೆ. ತನ್ನನ್ನು ಉನ್ನತ ನೈತಿಕ ಪೀಠದಲ್ಲಿ ಕುಳ್ಳಿರಿಸಿಕೊಂಡು ಬೀಗುತ್ತಿದ್ದ ಬಿಜೆಪಿ ಉತ್ತರ ಪ್ರದೇಶದಲ್ಲಿ ಅಧಿಕಾರ ಪಡೆಯುವ ಪ್ರಯತ್ನದಲ್ಲಿ ಈಗ ನೆಲಕ್ಕುರುಳಿದೆ. ಅಧಿಕಾರದಾಹ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರುವಂತೆ ಮಾಡಿದೆ. ತಮ್ಮ ಈ ತಿಪ್ಪರಲಾಗವನ್ನು ಅವರು ಜನರಿಗೆ ಹೇಗೆ ವಿವರಿಸುತ್ತಾರೋ!

ಸಮಾಜವಾದಿ ಪಕ್ಷ ಮತ್ತು ಅದರ ಮುಖಂಡ ಮುಲಾಯಂಸಿಂಗ್ ಯಾದವರ ಹಠಮಾರಿತನದಿಂದಾಗಿ ಹೀಗಾಯಿತು ಎಂಬ ಸಂಯುಕ್ತರಂಗದ ಒಂದು ವಿಭಾಗದ ಹಾಗೂ ಕಾಂಗ್ರೆಸ್ ಮುಖಂಡರ ಅಭಿಪ್ರಾಯ ಕೂಡಾ ಅಸಂಬದ್ಧ ಎಂದು ಈಗ ಸಾಬೀತಾಗಿದೆ. ಬಿಎಸ್‌ಪಿ ವಿಶ್ವಾಸಾರ್ಹ ಮಿತ್ರ ಅಲ್ಲ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ. ಸಮಾಜವಾದಿ ಪಕ್ಷ ಇದನ್ನು ಮೊದಲೇ ಸ್ವತಃ ಅನುಭವದಿಂದಲೇ ಕಂಡುಕೊಂಡಿತ್ತು. ಬಿಎಸ್‌ಪಿಯ ಎಲ್ಲಾ ಶರತ್ತುಗಳನ್ನು ಒಪ್ಪಿದ್ದರೂ ಅದು ಮತ್ತೆ ಬಿಜೆಪಿಯ ಜೊತೆಗೆ ಹೋಗುತ್ತಿರಲಿಲ್ಲ ಎಂಬ ಗ್ಯಾರಂಟಿ ಇರಲಿಲ್ಲ. ಸಮಾಜವಾದಿ ಪಕ್ಷ ಆಗ ಕೇಳಿದ್ದು ಒಂದೇ ಮಾತು - ಬಿಜೆಪಿಯೊಡನೆ ಯಾವ ಸಂಬಂಧವೂ ಇರುವುದಿಲ್ಲ ಎಂದು ರಾಜ್ಯಪಾಲರಿಗೆ ಲಿಖಿತ ಹೇಳಿಕೆ ನೀಡಿದರೆ ಉಳಿದೆಲ್ಲದರ ಬಗ್ಗೆ ಮಾತುಕತೆ ನಡೆಸಬಹುದು ಎಂದು . ಬಿಎಸ್‌ಪಿ ಅಷ್ಟಕ್ಕೂ ಏಕೆ ಒಪ್ಪಲಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ.

ವಾಸ್ತವತೆಯನ್ನು ಸ್ವೀಕರಿಸಬೇಕು

ಕೆಲವು ಪ್ರಶ್ನೆಗಳ ಮೇಲಾದರೂ ಸಮಾನ ನಿಲುವು ಇಲ್ಲದೆ ಮೈತ್ರಿಕೂಟಗಳು ಸಾಧ್ಯವಿಲ್ಲ. ಉತ್ತರ ಪ್ರದೇಶದಲ್ಲಿ ಕೋಮುವಾದಿ ಶಕ್ತಿಗಳ ಬೆದರಿಕೆ ಅತ್ಯಂತ ಮುಖ್ಯವಾದ ಪ್ರಶ್ನೆ. ಬಿಜೆಪಿ ಸರಕಾರದ ಆಳ್ವಿಕೆಯಲ್ಲಿ ಬಾಬ್ರಿ ಮಸೀದಿ ಧ್ವಂಸ ಹಾಗೂ ಈಗ ಕಾಶೀ, ಮಥುರಾ ಪ್ರಶ್ನೆಗಳ ಮೇಲೆ ನಡೆಯುತ್ತಿರುವ ಚಳುವಳಿಯ ಹಿನ್ನೆಲೆಯಲ್ಲಿ ಇದು ಎಲ್ಲರೂ ಒಪ್ಪುವ ಸಂಗತಿ.

ರಾಜಕೀಯದಲ್ಲಿ ಮೈತ್ರಿಕೂಟಗಳಷ್ಟೇ ಅಲ್ಲ, ಪಕ್ಷಗಳು ಕೂಡಾ ಒಂದು ಸುಸಂಗತ ನೀತಿಗಳಿಲ್ಲದಿದ್ದರೆ, ಕಾರ್ಯಕ್ರಮವಿಲ್ಲದಿದ್ದರೆ ಜನ ಬೆಂಬಲ ಕಳೆದುಕೊಳ್ಳುತ್ತವೆ. ಜನತಾದಳ ತನಗೆ ಏಕೆ ಈ ಕಳೆದ ವರ್ಷಗಳಲ್ಲಿ ಜನ ಬೆಂಬಲ ಇಳಿಮುಖವಾಗಿದೆ ಎಂಬುದರ ಬಗ್ಗೆ ಯೋಚಿಸಬೇಕಾಗಿದೆ. ಎಡ ಪಕ್ಷಗಳು, ಸಮಾಜವಾದಿ ಪಕ್ಷ ಮತ್ತು ಸಂಯುಕ್ತರಂಗದ ಇತರ ಪಕ್ಷಗಳೂ ಪರಿಸ್ಥಿತಿಯ ವಾಸ್ತವತೆಯನ್ನು ಒಪ್ಪಿಕೊಂಡು ತ್ರಿಕ್ಕಾಟದ ನಿಲುವು ತಳೆಯದೆ ಈಗಾಗಲೇ ದೀರ್ಘ ರಾಷ್ಟ್ರಪತಿ ಆಳ್ವಿಕೆಯನ್ನು ಅನುಭವಿಸಿದ ಜನಗಳ ಸಮಸ್ಯೆಗಳನ್ನು ಕೈಗೆತ್ತಿ ಕೊಳ್ಳಬೇಕು. ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಕಾರರು ಮತ್ತಿತರ ಶ್ರಮಜೀವಿಗಳ ರಕ್ಷಣೆಗೆ ಮುಂದಾಗಬೇಕು. ಕೋಮುವಾದಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಹೋರಾಟವನ್ನು ಮುಂದುವರೆಸಿ ಸಮಯಸಾಧಕ ಮೈತ್ರಿಗಳನ್ನು ಬಯಲಿಗೆಳೆಯಬೇಕು.

ಈಗ ಉತ್ತರ ಪ್ರದೇಶದಲ್ಲಿ ಬಂದಿರುವ ಅತ್ಯಂತ ನೀತಿಬಾಹಿರ ಕೂಟ ತನ್ನೊಳಗಿನ ಮೂಲಭೂತ ವೈರುದ್ಯಗಳನ್ನು ಬದಿಗಿಟ್ಟಿದೆ ಏಕೆ?


ಬಿಜೆಪಿ- ಬಿಎಸ್‌ಪಿ ಮುಖಂಡರು ಒಂದೇ ವರ್ಷ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅಂದರೆ ಅವರಿಗೂ ಈ ಕೂಟ ಒಂದು ವರ್ಷಕ್ಕಿಂತ ಹೆಚ್ಚು ಬಾಳುವ ಭರವಸೆಯಿಲ್ಲ. ಕಾನ್‌ಶೀರಾಮ್ ಮತ್ತು ಬಿಎಸ್‌ಪಿ ಈ ಒಪ್ಪಂದಕ್ಕೂ ಬದ್ಧರಾಗಿರುತ್ತಾರೆ ಎಂಬ ನಂಬಿಕೆ ಬಿಜೆಪಿ ಮುಖಂಡರಿಗಿಲ್ಲ. ಅವರ ಕಾರ್ಯಕರ್ತರಂತೂ ತಮ್ಮ ಮುಖಂಡರ ತಿಪ್ಪರಲಾಗದಿಂದ ಬೇಸತ್ತಿದ್ದಾರೆ. ಅತ್ತ ಬಿಎಸ್‌ಪಿ ಕಾರ್ಯಕರ್ತರು ತಾವು ಸೆಣಸಬೇಕಾದ 'ಮನುವಾದಿ' ಶಕ್ತಿಗಳೊಂದಿಗೆ ತಮ್ಮ ಮುಖಂಡತ್ವ ಕೈಮಿಲಾಯಿಸಿರುವುದರಿಂದ ಅತೃಪ್ತರಾಗಿದ್ದಾರೆ. ವಿಹೆಚ್‌ಪಿ-ಆರ್‌ಎಸ್‌ಎಸ್-ಬಿಜೆಪಿಯು ಕಾಶಿ, ಮಥುರಾ ಚಳುವಳಿಗಿಳಿದರೆ ತಮ್ಮ ಮುಖ್ಯಮಂತ್ರಿ ಆಗೇನು ಮಾಡುತ್ತಾರೆ, ಆರು ತಿಂಗಳ ನಂತರ ಏನ್ನು ಮಾಡಬಲ್ಲರು ಎಂಬ ಜಿಜ್ಞಾಸೆ ಅವರಲ್ಲಿದೆ.

ಈ ಕೂಟದೊಳಗೇ ಅಡಕವಾಗಿರುವ ವೈರುಧ್ಯ ನಿರೀಕ್ಷೆಗಿಂತ ಮೊದಲೇ ಮುಂಚೂಣಿಗೆ ಬರಬಹುದು. ಈ ಪಕ್ಷಗಳು ಪ್ರತಿನಿಧಿಸುವ ಜನ ವಿಭಾಗಗಳ ಹಿತಾಸಕ್ತಿಗಳಲ್ಲಿ ತಿಕ್ಕಾಟ ಬಂದೇ ಬರುತ್ತದೆ. ಏಕೆಂದರೆ ಬಿಜೆಪಿ ಪ್ರಮುಖವಾಗಿ ಮೇಲ್ಜಾತಿಗಳ ಜನಗಳನ್ನು ಪ್ರತಿನಿಧಿಸುವ ಪಕ್ಷ. ಆ ಜನ ತಾನು ದಲಿತರ, ಹಿಂದುಳಿದವರ ಪರವಾದ ಪಕ್ಷ ಎಂದು ಹೇಳಿಕೊಳ್ಳುವ ಬಿಎಸ್‌ಪಿಯ ಪ್ರಾಬಲ್ಯವನ್ನು ಎಷ್ಟು ದಿನ ಒಪ್ಪುತ್ತಾರೆ? ಕಲ್ಯಾಣ್ ಸಿಂಗ್‌ರವರಿಗೂ ತನ್ನ ಆರು ತಿಂಗಳ ಸರದಿ ಆಗುವವರೆಗೆ ಈ ಕೂಟ ಬಾಳುತ್ತದೆಯೋ ಎಂಬ ವಿಶ್ವಾಸ ಇದ್ದಂತಿಲ್ಲ. ಉತ್ತರ ಪ್ರದೇಶದ ಸಾಮಾಜಿಕ, ರಾಜಕೀಯ ವಾಸ್ತವತೆಗಳಲ್ಲಿ ಇದು ಸಹಜವೇ.

○

ಮಹಾನ್ ಕ್ರಾಂತಿಕಾರಿ

ಎಕೆಜಿ ಬದುಕು



"ನಮಗಿರುವುದು ಒಂದೇ ಬದುಕು. ಇದನ್ನು ಜಗತ್ತಿನ ಅತ್ಯಂತ ಶ್ರೇಷ್ಠ ಕಾರ್ಯದಲ್ಲಿ - ದಬ್ಬಾಳಿಕೆಗೊಳಗಾದವರನ್ನು, ಶೋಷಿತರನ್ನು ಗುಲಾಮಗಿರಿಯಲ್ಲಿ ತೊಳಲುತ್ತಿರುವವರನ್ನು ಸ್ವತಂತ್ರಗೊಳಿಸಿ ಬಿಡುಗಡೆ ಮಾಡುವ - ಕಾರ್ಯದಲ್ಲಿ ತೊಡಗಿಸಿದಾಗಲೇ ಬದುಕು ಸಾರ್ಥಕ"

-ಲೆನಿನ್

ಲೆನಿನ್ನರ ಈ ಮಾತನ್ನು ವಸ್ತುಶಃ ಕಾರ್ಯರೂಪಕ್ಕಿಳಿಸಿದವರು ಎ.ಕೆ. ಗೋಪಾಲನ್.

ದುಡಿಯುವ ಜನತೆಯ ಚರಿತ್ರೆಯು 'ಎಕೆಜಿ' ಹೆಸರಿಲ್ಲದೆ ಪೂರ್ಣವಾಗದು. ಈ ಶತಮಾನ ಕಂಡ ಮಹಾನ್ ಕ್ರಾಂತಿಕಾರಿ ಎಕೆಜಿ. ಭಾರತದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಎಕೆಜಿಗೆ ಶೋಷಿತ, ಮರ್ದಿತ, ದುಡಿಯುವ ಜನತೆಯ ಪ್ರೀತಿಯ, ಆದರಣೀಯ ನಾಯಕ ಎಕೆಜಿ. ಕೇರಳದ ಜನರಿಗೆ 'ವೀರಪುತ್ರ' ಪ್ರೀತಿಯ 'ಗೋಪಾಲನ್ ಮಾಸ್ಟರ್'. ಅವರು ನಡೆಸಿದ ಹೋರಾಟ, ಮಾಡಿದ ತ್ಯಾಗಗಳಿಗೆ ಎಣೆಯಿಲ್ಲ. ಗುರುವಾಯೂರು ಸತ್ಯಾಗ್ರಹ ಇತಿಹಾಸ ನಿರ್ಮಿಸಿತು. ಇಡೀ ಭಾರತದಲ್ಲಿ ಎಕೆಜಿ ಓಡಾಡದೆ ಇರುವ ನೆಲವಿಲ್ಲ. ಅವರು ನಡೆಸಿದ ಕಾಲ್ನಡಿಗೆ ಜಾಥಾಗಳೆಷ್ಟೋ! ಭಾರತದ ಮಾವೋ - ಎಕೆಜಿ. ಸಾಮಾನ್ಯ ಜನರೊಂದಿಗೆ ಸಹಬಾಳ್ವೆ ನಡೆಸಿದುದರಿಂದ ಬಂದ ಯುಕ್ತಾಯುಕ್ತ ವಿವೇಚನೆ. ಅಭ್ಯಾಸದಿಂದ ಪಡೆಕೊಂಡ ಚಿಂತನೆ, ವಾದ ವಿವಾದಗಳಿಂದ ಉಂಟಾದ ಪ್ರಚೋದನೆ -ಇವೆಲ್ಲಾ ಸಂಗಮಿಸಿ ಎಕೆಜಿ ಈ ನಾಡಿನ ಮಹಾ ನಾಯಕರು.

ಸಿಪಿಐ(ಎಂ)ನ ಉಚ್ಚ ನಾಯಕರಾದ ಎಕೆಜಿ ಪಾರ್ಲಿಮೆಂಟಿನಲ್ಲಿ ಪ್ರತಿಭಾವಂತ ವಿಪಕ್ಷ ನಾಯಕ. ಆಳುವವರಿಗೆ ಸಿಂಹಸ್ವಪ್ನ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು, ಪೋಲೀಸರು, ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಮಂದಿ ಎಕೆಜಿಯ ಹೋರಾಟಗಳನ್ನು ಮರ್ದಿಸಿದರು. ದೈಹಿಕವಾಗಿ ಹಿಂಸಿಸಿದರು. ಎಕೆಜಿ ದೇಹದಲ್ಲಿ ಗಾಯದ ಗುರುತು ಇಲ್ಲದ ಜಾಗವಿರಲಿಲ್ಲ. ಆದರೆ ದಿಟ್ಟತನ, ಧೃತಿಗೆಡದ ಸಾಮರ್ಥ್ಯ - ಎಕೆಜಿ ವ್ಯಕ್ತಿತ್ವ.

75 ವರ್ಷಗಳ ಬಾಳಿನುದ್ದಕ್ಕೂ ಜನರಿಗಾಗಿಯೇ ಚಿಂತಿಸಿದ, ಜನರಿಗಾಗಿಯೇ ಹೋರಾಡಿದ, ಸರ್ವತ್ಯಾಗ ಮಾಡಿದ ಎಕೆಜಿ 1977ರ ಮಾರ್ಚ್ 21 ರ ಮಧ್ಯರಾತ್ರಿ ಹೋರಾಟಕ್ಕೆ ವಿರಾಮ ಹಾಕಿದರು. ಎಕೆಜಿಯಿಲ್ಲದೆ 20 ವರ್ಷಗಳು ಕಳೆದು ಹೋಗಿವೆ. ಆದರೆ ಎಕೆಜಿ ಸತ್ತು ಬದುಕಿದ್ದಾರೆ. ಈ ನಾಡಿನ ದುಡಿಯುವ ಜನತೆಗೆ ಎಕೆಜಿ ಎಂದಿಗೂ ಚಿರಂಜೀವಿ. ಅವರ ಹೋರಾಟದ ದಾರಿಗೆ ಎಕೆಜಿಯ ನೆನಪು ಸದಾ ದಾರಿ ದೀಪ.

ಇಎಂಎಸ್ ಹೇಳುತ್ತಾರೆ-"ಎಕೆಜಿಯ ಅಗಲಿಕೆ ನಮಗಾದ ಮಹಾನ್ ನಷ್ಟವಾದರೂ ಹಲವಾರು ಗೋಪಾಲನ್ನರು, ಕೃಷ್ಣ ಪಿಳ್ಳೆಗಳು ಬೆಳೆದು ಬರುವಲ್ಲಿ ಎಕೆಜಿ ಪ್ರೇರಕ ಶಕ್ತಿಯಾದರು ಎಂಬ ತೃಪ್ತಿ ನಮಗಿದೆ."

ಎಕೆಜಿಯವರ ಆತ್ಮಕಥೆ 'ನನ್ನ ಬದುಕು' - ತನ್ನ ಸುತ್ತಲಿನ ಜಗತ್ತಿಗೆ, ಸಮಾಜ ಜೀವನಕ್ಕೆ ವಿಚಾರಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಿದ ಮಾನವತೆಯ ಸಂವೇದನೆಯ ಬದುಕನ್ನು ನಮ್ಮೆದುರು ತೆರೆದಿಡುತ್ತದೆ. ಎಕೆಜಿ ಆತ್ಮಕಥೆ ಮಾನವ ಜೀವಿತದ ಸಾರ್ಥಕತೆಯ ಚಿತ್ರ. ಇದರ ಕೆಲವು ತುಣುಕುಗಳು.

ಜೈಲು ವಾಸದ ಅನುಭವ

"ನನ್ನನ್ನು ಹುಚ್ಚರ ವಾರ್ಡಿಗೆ ಕೊಂಡು ಹೋದರು. ಅಧಿಕಾರವರ್ಗಕ್ಕೆ ನಾನೊಬ್ಬ ಹುಚ್ಚನಾಗಿದ್ದ. ಸಾಮ್ರಾಜ್ಯಶಾಹಿ ದೃಷ್ಟಿಯಲ್ಲಿ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಹುಚ್ಚಾಗಿರಬಹುದು. ನಾನೋರ್ವ 'ರಾಜಕೀಯ ಹುಚ್ಚ' ನೆನ್ನಲು ಹೆಮ್ಮೆ ಪಡುತ್ತೇನೆ. ಸಾಮ್ರಾಜ್ಯಶಾಹಿ ನಿರ್ನಾಮವಾಗುವ ತನಕ ಈ ಹುಚ್ಚು ಬಿಡಲಿಕ್ಕಿಲ್ಲ. ಪ್ರಪಂಚದಲ್ಲಿ ದಬ್ಬಾಳಿಕೆ ಕೊನೆಗೊಳ್ಳುವ ತನಕ ಈ ಹುಚ್ಚು ಬಿಡಬಾರದೆಂದು ನನ್ನ ಬಯಕೆ"

ಸ್ವಾತಂತ್ರ್ಯ ದೊರೆತಾಗ

"1947ರಲ್ಲಿ ಸ್ವಾತಂತ್ರ್ಯ ಘೋಷಿಸಿದಾಗಲೂ 1972 ರಲ್ಲಿ ಸ್ವಾತಂತ್ರ್ಯದ 25 ನೇ ವಾರ್ಷಿಕೋತ್ಸವ ವೇಳೆಯಲ್ಲೂ ನನ್ನನ್ನು ಜೈಲಿನಲ್ಲಿ ಬಂಧಿಸಿಟ್ಟದ್ದು ಸ್ವಾತಂತ್ರ್ಯದ ವಿಡಂಬನೆ. ಸ್ವಾತಂತ್ರ್ಯ ಪ್ರಗತಿ, ಸಮಾಜವಾದಕ್ಕಾಗಿ ನಡೆಸುವ ಹೋರಾಟವು ಇನ್ನೂ ಭಾರತದ ಜನತೆಯ ಪ್ರಧಾನ ಆವಶ್ಯಕತೆಯಾಗಿದೆಯೆಂಬುದನ್ನು ಇದು ಸೂಚಿಸುತ್ತದೆ"

ಕಾಂಗ್ರೆಸ್ ಆಡಳಿತದಲ್ಲಿ

"ಒಂದು ಕಾಲದಲ್ಲಿ ಕಾಂಗ್ರೆಸ್ಸನ್ನು ಪೋಷಿಸುವ ಉದ್ದೇಶದಿಂದ ಹಸಿವು, ಕಷ್ಟ, ದಬ್ಬಾಳಿಕೆಯನ್ನು ಸಹಿಸಿದೆ. ಇಂದು ಅದೇ ಕಾಂಗ್ರೆಸ್ಸು ಆಳುತ್ತಿದೆ. ನನ್ನ ಒಡನಾಡಿಗಳಾ

ಪುಟ 8 ನೋಡಿ

ಭಾರತದ ಆರ್ಥಿಕಕ್ಕೆ ಮತ್ತೊಂದು ಸುಧಾರಣಾ ಛೂಮಂತ್ರ

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಭಾರತದ ಕೇಂದ್ರ ಸರಕಾರದ ಧಣಿಯಂತೆ ವರ್ತಿಸುತ್ತಿರುವ ಐಎಂಎಫ್ ಮತ್ತೊಂದು ಸುಧಾರಣಾ ಮಂಕು ಬೂದಿಯನ್ನು ಭಾರತದ ಮೇಲೆ ಎರಚಿದೆ. ಭಾರತದಲ್ಲಿ ಆರ್ಥಿಕ ಸುಧಾರಣೆ ಮಾಡಿ ಭಾರತವನ್ನು ಉದ್ಧಾರ ಮಾಡುವ ಮಹೋನ್ನತ ಉದ್ದೇಶವಿರುವವರೆಂಬ ಪೋಸು ನೀಡುತ್ತಿರುವ ಐಎಂಎಫ್, ಭಾರತ ಈಗಾಗಲೇ ಮಾಡಿರುವ ಆರ್ಥಿಕ ಸುಧಾರಣೆಗಳನ್ನು ಪ್ರಶಂಸಿಸುತ್ತ ಮತ್ತೊಂದು ಕಂತು ಸುಧಾರಣಾ ಕ್ರಮಗಳನ್ನು ಭಾರತಕ್ಕೆ ಸಲಹೆ ನೀಡಿದೆ.

ಪಾರಿಭಾಷಿಕ ಪದಪುಂಜಗಳ ಆಕರ್ಷಣೀಯ ಮೇಲುಡಿಗೆ ತೊಡಿಸಿ ಈ ಸುಧಾರಣಾ ಸಲಹೆ ನೀಡಿರುವಾತ ಐಎಂಎಫ್‌ನ ಏಶಿಯಾ ಮತ್ತು ಪೆಸಿಫಿಕ್ ವಿಭಾಗದ ಹ್ಯೂಬರ್ಟ್ ನೀಸ್ ಎನ್ನುವವ.

ಈ ಮಹಾಶಯನ ಪ್ರಕಾರ ಈ ಸುಧಾರಣಾ ಕಂತಿನಲ್ಲಿ ಮೊದಲು ತೆರಿಗೆ ರಚನೆಯ ಸುಧಾರಣೆ ಆಗಬೇಕು. ಈಗಿರುವ ವಿವಿಧ ಪ್ರಕಾರದ ಅಬ್ಕಾರಿ ಸುಂಕ ಮತ್ತು ಮಾರಾಟ ತೆರಿಗೆಗಳ ಬದಲಾಗಿ ಎಲ್ಲಕ್ಕೂ ಸಮನ್ವಯವಾಗುವ ವ್ಯಾಟ್(VAT- Valne Added Tax -ಅಂದರೆ ಸರಕಿಗೆ ಮೌಲ್ಯ ಸೇರಿದಷ್ಟೇ ತೆರಿಗೆ ಹೇರುವ ಪದ್ಧತಿ) ಜಾರಿಗೆ ತರಬೇಕಂತೆ. ಇಲ್ಲಿ ಕೆಲವೇ ದರಗಳಿರಬೇಕು ಮತ್ತು ರಿಯಾಯತಿಗಳು ಅತಿ ಕಡಿಮೆ ಇರಬೇಕು. ಬಂದ ಕಂದಾಯವನ್ನು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳಬೇಕು.

ಇದನ್ನು ಓದಿದರೆ ನಿಮಗೂ ಇದೇನೋ ಬಹಳ ಸರಳವಾಗಿದ್ದು ಒಳ್ಳೆಯ ವ್ಯವಸ್ಥೆ ಇರುವಂತೆ ಭಾಸವಾಗುತ್ತಿರಬಹುದು. ಆದರೆ ವಾಸ್ತವದಲ್ಲಿ ಐಎಂಎಫ್ ಹೇಳುತ್ತಿರುವುದು ಇಂದು ದೇಶದ ಕೃಷಿ ಮತ್ತು ಸಣ್ಣ ಕೈಗಾರಿಕಾ ವಲಯಗಳಿಗೆ ಇರುವ ರಿಯಾಯಿತಿಗಳನ್ನು ತೆಗೆಯಿರಿ ಎಂದು. ಅಭಿವೃದ್ಧಿಶೀಲ ದೇಶವಾಗಿರುವ ನಮ್ಮ ಭಾರತದ ಆರ್ಥಿಕದಲ್ಲಿ ಇಂದಿಗೂ ಸಣ್ಣ ಕೈಗಾರಿಕೆ ಮತ್ತು ಕೃಷಿಗೆ ಅತಿ ಮಹತ್ವ ಇದೆ ಮತ್ತು ಅವುಗಳ ಕೊಡುಗೆಯೂ ಗಮನಾರ್ಹವಾದದ್ದು ಎಂಬುದು ನಮಗೆ ನಿಮಗೆಲ್ಲ ಗೊತ್ತಿರುವ ಸರಳ ಸತ್ಯ. ನಮ್ಮ ಕೃಷಿ ಇಂದು ನಮಗೆ ಆಹಾರ ಸ್ವಾವಲಂಬನೆ ತಂದುಕೊಟ್ಟಿದೆ. ಹಾಗೆಯೇ ವಿದೇಶಿ ವಿನಿಮಯವನ್ನು ದೇಶಕ್ಕೆ ಅದು ತಂದುಕೊಡುತ್ತಿದೆ(ರಫ್ತಿನ ಮೂಲಕ) ದೇಶದ ಶೇ 60 ಹೆಚ್ಚು ಜನ ಕೃಷಿಯ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. ಹಾಗೆಯೇ ಸಣ್ಣ ಕೈಗಾರಿಕೆಗಳ ಪಾತ್ರವೂ ಮಹತ್ತರವಾದದ್ದು. ಕಡಿಮೆ ಬಂಡವಾಳ ಹೂಡಿಕೆಯಲ್ಲೂ ಹೆಚ್ಚಿನ ಉದ್ಯೋಗ ಸೃಷ್ಟಿ ಈ ವಲಯದಲ್ಲಿ ಆಗುತ್ತಿದೆ. ದೇಶದ ರಫ್ತಿನ ಶೇ 40 ರಷ್ಟು ಸಣ್ಣ ಕೈಗಾರಿಕೆಗಳಿಂದ ಬರುತ್ತದೆ. ಅಲ್ಲದೆ ಸಣ್ಣ ಬಂಡವಾಳ ಸಾಕಾಗುವುದರಿಂದ ಇವು ದೇಶದ್ಯಂತ ಹರಡಿಕೊಂಡು ಅಭಿವೃದ್ಧಿಗೆ ನೆರವಾಗಿವೆ.

ಇವೆಲ್ಲ ಲಾಭ ದೇಶಕ್ಕೆ ಆಗಿದ್ದು ಈ ವಲಯಗಳಿಗೆ ವಿಶೇಷ ಸವಲತ್ತು ರಿಯಾಯಿತಿಗಳನ್ನು ನೀಡಿದ್ದರಿಂದ. ಹೀಗಿರುವಾಗ ಈಗ ಈ ವಲಯಗಳಿಗೆ ಸವಲತ್ತುಗಳನ್ನು ಕಡಿಮೆ ಮಾಡಿ/ನಿಲ್ಲಿಸಿ ಎಂದರೆ ಈ ವಲಯಗಳ ಕತ್ತು ಹಿಸುಕಿ ಎಂದಂತೆಯೇ. ಇದರಿಂದ ಯಾರಿಗೆ ಲಾಭ? ದೇಶದ ದೊಡ್ಡ ಉದ್ದಿಮೆಗಳಿಗೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ. ಇದಲ್ಲದೆ ಬೇರೆ ಸಲಹೆಗಳನ್ನು ಆತ ನೀಡಿದ್ದಾನೆ. ಆಡಳಿತದಲ್ಲಿ (ಅಂದರೆ ಸರಕಾರಿ ನೌಕರರಿಗೆ) ಸಂಬಳ ಕಡಿಮೆ ಮಾಡುವ ಬದಲು ಉದ್ಯೋಗಗಳನ್ನೇ ಕಡಿಮೆ ಮಾಡಿ ಎಂದಿದ್ದಾನೆ ಆತ. ಹೀಗೆ ನೌಕರರ ಸಂಖ್ಯೆ ಕಡಿಮೆ ಮಾಡಿ ಸೇವೆಯಲ್ಲಿ ಉಳಿದವರಿಗೆ ಸಂಬಳ ಹೆಚ್ಚು ಮಾಡಬೇಕಂತೆ. ಇದರಿಂದ ಈ ನೌಕರರು/ಅಧಿಕಾರಿಗಳು ಸಭ್ಯ ಜೀವನ ನಡೆಸಲು ಸಾಧ್ಯವಾಗುತ್ತದೆಯಂತೆ. ಸರಿ ನಿರುದ್ಯೋಗಿಗಳಾದವರು ಹೇಗೆ ಜೀವಿಸ ಬೇಕು? ಅವರಿಗೆ ಬೇರೆಡೆ ಉದ್ಯೋಗ ದೊರೆಯುತ್ತದಂತೆ. ಹೀಗೆ ಮುಂದುವರಿಯುತ್ತದೆ ಈ ತರ್ಕ ಸರಣಿ.

ಈತ ಹೇಳುವುದರಲ್ಲಿ ಒಂದಂಶವಂತೂ ಸತ್ಯವಾದದ್ದು. ಅದೆಂದರೆ ಉದಾರೀಕರಣದಿಂದ ಸರಕಾರಿ ಯಂತ್ರಗಳು ಹೆಚ್ಚೆಚ್ಚು ಭ್ರಷ್ಟವಾಗುತ್ತಿರುವುದು. ಬೆಲೆಗಳು ಏರುತ್ತಿವೆ ಸಂಬಳ ಹೆಚ್ಚುತ್ತಿಲ್ಲ. ಇನ್ನೊಂದು ಕಡೆ ಹೆಚ್ಚುತ್ತಿರುವ ಬಳಕೆ/ ಐಷಾರಾಮಿ ವಸ್ತುಗಳ ಆಕರ್ಷಣೆ. ಏನು ಮಾಡುವುದು ಭ್ರಷ್ಟಾಚಾರವೊಂದೇ ದಾರಿ. ಉದಾರೀಕರಣದ ಒಳ ಪರಿವು ಇದೇ ಅಲ್ಲವೇ. ಅದೇ ದಾರಿಯಲ್ಲಿ ಮುಂದೆ ಎಳೆಯುತ್ತಿದೆ ಐಎಂಎಫ್.

ಭಾರತದ ರಸ್ತೆ ಬಂದರುಗಳಿಗೆ ಆಕಾಶದೆತ್ತರದಷ್ಟು ಹಣ ಬೇಕು

ಇದು ಸಾಗಾಣಿಕೆ ಕಾರ್ಯದರ್ಶಿ ಎಸ್.ಸುಂದರ್ ಹೇಳಿರುವುದು. ಆಕಾಶದೆತ್ತರ ಎಂದರೆ ಎಷ್ಟು? 175000 ಕೋಟಿ ರೂಪಾಯಿಗಳಷ್ಟು. ದೇಶದ ಅಭಿವೃದ್ಧಿಗೆ ಅಂತರ್ರಚನಾ ಸೌಕರ್ಯಗಳಾದ ರಸ್ತೆ, ಬಂದರು, ರೈಲ್ವೆ ವಿದ್ಯುತ್ ಎಲ್ಲ ಬೇಕು. ರೈಲ್ವೆಗೆ ಬಜೆಟ್ಟಿನಲ್ಲಿ ನೆರವಿಲ್ಲ. ವಿದ್ಯುತ್ ವಲಯ ತೆರೆದು ರಿಯಾಯಿತಿ, ಸವಲತ್ತುಗಳ ಹೊಳೆ ಹರಿಸಿದರೂ ಎನ್ರಾನ್, ಕೊಜೆಂಟ್ರಿಕ್ಸ್‌ಗಳ ಅವಾಂತರಕಾರಿ ಲೂಟಿ ಬಿಟ್ಟರೆ ಬೇರೇನೂ ಆಗಿಲ್ಲ. ರಸ್ತೆ ಬಂದರುಗಳಿಗೆ ಹಣ ಬೇಕು ಎಲ್ಲಿಂದ ಬರುತ್ತದೆ.

ಉದಾರೀಕರಣದ ತತ್ವದ ಪ್ರಕಾರ ಮಾರುಕಟ್ಟೆ ಆರ್ಥಿಕದಲ್ಲಿ ಮಾರುಕಟ್ಟೆ ಶಕ್ತಿಗಳಿಂದ ಹಣ ಹೂಡಬೇಕು. ಎಲ್ಲವೂ ಖಾಸಗೀಕರಣವಾಗುತ್ತಿರುವ ಈ ದಿನಗಳಲ್ಲಿ ಹಣ ಹೂಡಬೇಕಿಲ್ಲವೆ? ಆ ಮೂಲಕ ಅವರು ದೇಶದ ಅಭಿವೃದ್ಧಿಯ ಕೊಡುಗೆ ಸಲ್ಲಿಸಬೇಕಲ್ಲವೇ? ಆದರೆ ಅವರಿಗೆ ಈ ವಿಷಯದಲ್ಲಿ ಈ ವರೆಗೆ ನೀಡಿರುವ ಸವಲತ್ತು/ರಿಯಾಯಿತಿಗಳು ಸಾಲದಂತೆ. ಆದ್ದರಿಂದ ಅವರು ಏನೂ ಹೂಡಿಕೆ ಮಾಡಿಲ್ಲ.

ಈ ಅವಶ್ಯಕತೆಯ ಶೇ 40 ರಷ್ಟು ರಾಷ್ಟ್ರೀಯ ಹೆದ್ದಾರಿಗಳಿಗೆ ಬೇಕು. ಬರೀ ಶೇ 5 ರಷ್ಟು ರಾಷ್ಟ್ರೀಯ ಹೆದ್ದಾರಿಗಳು ಮಾತ್ರ ನಾಲ್ಕು ದಾರಿ ರಸ್ತೆಗಳಾಗಿವೆ. ಶೇ 80 ರಷ್ಟು ಎರಡು ದಾರಿ ರಸ್ತೆಗಳಾದರೆ ಉಳಿದ ಶೇ 15 ರಷ್ಟು ಒಂದೇ ದಾರಿ ರಸ್ತೆಗಳಾಗಿವೆ.

ಬಂದರುಗಳ ಸ್ಥಿತಿಯೂ ಹಾಗೆಯೇ ಇದೆ. ಬಂದರುಗಳ ಅಭಿವೃದ್ಧಿಗೆ ಅವಶ್ಯವಿರುವ ಹಣದ ಶೇ 60 ರಷ್ಟನ್ನು ಬಂದರುಗಳೇ ದುಡಿಯಬಲ್ಲವು. ಆದರೆ ಇನ್ನುಳಿದ ಶೇ 40 ರಷ್ಟನ್ನು ಖಾಸಗಿಯವರಿಂದ ಹೂಡಿಕೆ ಮಾಡಿಸಬೇಕಾಗುತ್ತದೆ. ಯಾಕೆಂದರೆ ಸರಕಾರಿ ಬೆಂಬಲದ ಮಾತಂತೂ ಈಗ ಇಲ್ಲವಲ್ಲ.

ಆದ್ದರಿಂದಲೇ ರಸ್ತೆ ಮತ್ತು ಬಂದರುಗಳ ಅಭಿವೃದ್ಧಿಯ ವಿಷಯದಲ್ಲಿ ಯಾವುದೇ ಬೆಳವಣಿಗೆ ಆಗುತ್ತಿಲ್ಲ.

ಉದಾರೀಕರಣ ದೇಶಕ್ಕೇ ಅಭಿವೃದ್ಧಿ ತರುತ್ತದೆ. ಎಂದರೆ ನಂಬುವ ಮಾತೇ? ನೀವೇ ಹೇಳಿ.

ರಾಷ್ಟ್ರೀಕೃತ ಬ್ಯಾಂಕುಗಳ ಹೊರೆ

ಹಣಕಾಸು ವಲಯದ ಸುಧಾರಣೆ ಹಾಗೆ ಭರದಿಂದಲೇ ಸಾಗಿದೆ. ಬ್ಯಾಂಕುಗಳು ಮೊದಲಿಗೆ ಬಲಿಯಾದರೆ ಬಲಿ ಪಟ್ಟಿಯಲ್ಲಿ ವಿಮಾ ವಲಯ ನಂತರದ ಸ್ಥಾನದಲ್ಲಿದೆ. ಸಂಯುಕ್ತ ರಂಗ ಸರಕಾರ ಸ್ಥಳೀಯ - ಪ್ರಾದೇಶಿಕ ಬ್ಯಾಂಕುಗಳ (LAB) ಸ್ಥಾಪನೆಗೆ ಅನುಮತಿ ನೀಡುತ್ತಿದೆ. ಈಗಾಗಲೇ ಇರುವ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಸ್ಥಳೀಯ ಜಮೀನುದಾರರು ಮತ್ತು ಪುಟ್ಟ ಬಂಡವಾಳಿಗರು ದೊಡ್ಡ ಬಂಡವಾಳಿಗರ ಹಿತ ಕಾಯಲು ಈ ಸ್ಥಳೀಯ ಪ್ರದೇಶ ಬ್ಯಾಂಕುಗಳ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಗುತ್ತಿದೆ.

ಬ್ಯಾಂಕುಗಳ ಇತಿಹಾಸದಲ್ಲೇ ಮೊದಲ ಭಾರಿ ಬ್ಯಾಂಕುಗಳ ಎಲ್ಲ ಉದ್ಯೋಗಿಗಳು(ಅಂದರೆ ಅಧಿಕಾರಿಗಳು ಮತ್ತು ನೌಕರರು) ಒಗ್ಗಟ್ಟಾಗಿ ಪ್ರತಿಭಟಿಸಲು ಸಿದ್ಧರಾಗುತ್ತಿದ್ದಾರೆ.

ರಾಷ್ಟ್ರೀಕೃತ ಬ್ಯಾಂಕುಗಳ ಸ್ವಾಮ್ಯ ಹೊಂದಿರುವ ಸರಕಾರ ಮಾಡಿರುವ ಅವಾಂತರ ನೋಡಿ. ಈ ಬ್ಯಾಂಕುಗಳಿಂದ ನೀಡಿದ 4000 ಕೋಟಿ ರೂಪಾಯಿಗಳ ಸಾಲ ಬಾಕಿಯಾಗಿ ಹೋಗಿದೆ.

ಈ ಮೊತ್ತದಲ್ಲಿ ದೊಡ್ಡ ಪಾಲು ದೇಶದ ಬಂಡವಾಳಶಾಹಿಗಳು ಪಡೆದ ಸಾಲ. ಇವರೆಲ್ಲರು ಸಾಲ ಮರುಪಾವತಿಸುವ ಸಾಮರ್ಥ್ಯ ಹೊಂದಿರುವವರು. ಆದರೆ ಸರಕಾರಕ್ಕೆ ಈ ಮೊತ್ತವನ್ನು ವಸೂಲು ಮಾಡುವ ಸಂಕಲ್ಪವಿಲ್ಲ.

ಮತ್ತೆ ಉದಾರೀಕರಣ/ಸುಧಾರಣೆಗಳ ಮೂಲಕ ಈ ಸುಸ್ತಿದಾರರಿಗೇ ಸಾಲ ನೀಡುವ ನೀತಿಗಳನ್ನು ಜಾರಿಗೆ ತರಲಾಗುತ್ತಿದೆ ಯಾಕೆ?

ಯಾಕೆಂದರೆ ಅದೇ ಉದಾರೀಕರಣ ಉರುಫ್ ಆರ್ಥಿಕ ಸುಧಾರಣೆ!!

ಕಂಪನಿಗಳಿಗೂ ನಡುಕ

ಕಂಪನಿಗಳ ವಶೀಕರಣದ ಬಗ್ಗೆ ಒಂದು ಮಾರ್ಗದರ್ಶಿ ಸೂತ್ರವೇ ಜಾರಿಗೆ ಬಂದು ವಶೀಕರಣ ಕಾಯಿದೆ ಬದ್ಧವಾಗಿ ಬಿಟ್ಟಿದೆ. ಈಗ ಉದಾರೀಕರಣದ ಮಾರುಕಟ್ಟೆ ಆರ್ಥಿಕದ ಭಾಗವಾಗಿ ಬಂದಿರುವ ಇದು ಹಲವು ದೇಶೀ ಕಂಪನಿಗಳಿಗೆ ಭಯ ಹುಟ್ಟಿಸಿದೆ. ಕಾರಣವೇನೆಂದರೆ ಅವುಗಳಿಗೆ ಯಾವತ್ತೂ ವಶೀಕರಣಕ್ಕೊಳಗಾಗಿ ಅಸ್ತಿತ್ವ ಕಳೆಕೊಳ್ಳುವ ಭಯ.

ಈ ಭಯವನ್ನೇ ಸಿಐಐ ಎಂಬ ದೇಶೀ ಬಂಡವಾಳಿಗರ ಸಂಘಟನೆ ವ್ಯಕ್ತಪಡಿಸಿ ಸರಕಾರ ಅವುಗಳಿಗೆ ರಕ್ಷಣೆ ನೀಡಬೇಕು ಎಂದಿದೆ. ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಇನ್ನು ಇದರಿಂದ ಹತ್ತು ವರ್ಷಗಳವರೆಗೆ ಸಣ್ಣ ಮತ್ತು ಮಧ್ಯಮ ಕಂಪನಿಗಳನ್ನು ವಶೀಕರಣದಿಂದ ರಕ್ಷಿಸಬೇಕೆಂದು ಅದು ಸೂಚಿಸಿದೆ.

ಇದರರ್ಥ ವಶೀಕರಣದಿಂದ ಹಲವು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕಂಪನಿಗಳು ತೊಂದರೆಗೊಳಗಾಗುತ್ತವೆ ಎಂಬುದು ಸ್ಪಷ್ಟ. ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ನುಂಗಿಹಾಕುವಂತೆ ಸಣ್ಣ/ ಮಧ್ಯಮ ಕಂಪನಿಗಳನ್ನು ದೊಡ್ಡ ಕಂಪನಿಗಳು ನುಂಗಿ ಹಾಕುತ್ತವೆ.

ಇದರಿಂದ ಸ್ಪರ್ಧಾತ್ಮಕತೆ ನಿರ್ವಹಣೆ ಇವಲ್ಲ ಹೆಚ್ಚುತ್ತದೆ ಎನ್ನುವುದಾದರೆ ಇವುಗಳಿಗೆ ದೇಶದ ಜನತೆ ತೆರಬೇಕಾದ ಬೆಲೆಯೂ ಅತೀ ಹೆಚ್ಚಿನದಾಗಿರುತ್ತದೆ. ನಮ್ಮ ಜನತೆಯ ಆದಾಯ ಅಷ್ಟು ಹೆಚ್ಚಿನ ಪ್ರಮಾಣದ್ದಲ್ಲವಲ್ಲ ಅದೇ ಸಮಸ್ಯೆ.

ಸಿಐಐಗೆ ತನ್ನ ಕಾಲ ಮೇಲೆ ಕಲ್ಲು ಬಿದ್ದಾಗ ಎಚ್ಚರವಾಗಿದೆ ಅಷ್ಟೇ ಅಲ್ಲವೆ?

ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ

ಜಿ.ಎನ್.ಮೋಹನ್

"ಭಾರತದ ಇಂದಿನ ಪತ್ರಿಕೋದ್ಯಮ ತಮಗೆ ಬೇಕಾದ ಹಾಗೂ ತಮಗೆ ಬೇಕಾದವರ ತುತ್ತೂರಿ ಊದಲು ಇರುವ ಪತ್ರಿಕೋದ್ಯಮ" ಎಂದು ಅಂಬೇಡ್ಕರ್ ದಶಕಗಳ ಹಿಂದೆ ಸಾರಿದ್ದರು.

ಹಲವು ದಶಕಗಳ ಹಿಂದಿನ ಈ ಅಂಬೇಡ್ಕರ್ ವಾಣಿ ಇಂದಿಗೂ ಅದೆಷ್ಟು ಪ್ರಸ್ತುತ. ಅಂಬೇಡ್ಕರ್‌ರವರ ವಿಶೇಷವೇ ಈ ಮುಂಗಾಣ್ಕೆ.

ಭಾರತ ಇಂದು ಹೊರಳು ದಾರಿಯಲ್ಲಿ ನಿಂತಿದೆ. ರಾಜಕೀಯ ಹಾಗೂ ಸಾಮಾಜಿಕ ಏರು ಪೇರುಗಳ ಅಂಚಿನಲ್ಲಿರುವ ದೇಶಕ್ಕೆ ಪತ್ರಿಕೋದ್ಯಮ ಕಣ್ಣಾಗಬೇಕಿತ್ತು. ನಾಡಿನ ನಾಡಿಬಡಿತವನ್ನು ಮುಂಚೆಯೇ ಕಂಡು ಹಿಡಿದು ಅದರ ಓರೆಕೋರೆಗಳತ್ತ ಭೂತಗನ್ನಡಿ ಹಿಡಿದು ಸರಿದಾರಿಯಲ್ಲಿ ಮುನ್ನಡೆಸಬೇಕಾಗಿತ್ತು. ಭಾರತೀಯ ಪತ್ರಿಕೋದ್ಯಮ ಈ ನಿಟ್ಟಿನಲ್ಲಿ ವಿಫಲವಾಗಿದೆ. ಕಟುವಾಸ್ತವಗಳನ್ನು ಮುಂದೆ ಹರಡಿಕೊಂಡು ಕೈಚೆಲ್ಲಿ ಕುಳಿತಿದೆ. ಅಂಬೇಡ್ಕರ್, ಪತ್ರಿಕೋದ್ಯಮ ಇನ್ನೂ ಅಂಬೆಗಾಲಿಕ್ಕುತ್ತಿದ್ದಾಗ ಆಡಿದ ಮಾತೇ ಇಂದಿಗೂ ಪದಶಃ ಅನ್ವಯಿಸುತ್ತಿರುವುದು ಪತ್ರಿಕೋದ್ಯಮದ ಕಟು ವಿಮರ್ಶೆಯೇ ಸರಿ.

ಅಂಬೇಡ್ಕರ್ ಪತ್ರಿಕೆಗಳನ್ನು ತಾವು ತಲುಪಬೇಕಾಗಿದ್ದವರನ್ನು ಮುಟ್ಟುವುದಕ್ಕಿಂತ ತಲುಪಬೇಕಾದವರ ಸ್ಥಿತಿಯತ್ತ ಇತರರ ಕಣ್ಣು ತೆರೆಸಲು ಬಳಸಿಕೊಂಡರು. 1920ರ ಜನವರಿ 31ರಂದು ಅಂಬೇಡ್ಕರ್ 'ಮೂಕ ನಾಯಕ' ವಾರಪತ್ರಿಕೆಯನ್ನು ಆರಂಭಿಸಿದರು. ತಮ್ಮ ಮೊದಲ ಸಂಪಾದಕೀಯದಲ್ಲಿ "ಹಲವು ಪತ್ರಿಕೆಗಳು ಕೆಲವೊಂದು ಜಾತಿಗಳ ಹಿತಾಸಕ್ತಿಯನ್ನು ಮರೆಸುತ್ತವೆ. ಅವು ಇತರೆ ಜಾತಿಗಳ ಹಿತಾಸಕ್ತಿಯನ್ನು ಕಡೆಗಣಿಸುತ್ತವೆ" ಎಂದು ಬರೆದರು.

1927ರ ಏಪ್ರಿಲ್ 3ರಂದು 'ಬಹಿಷ್ಕೃತ ಭಾರತ' ಪತ್ರಿಕೆಯನ್ನು ಆರಂಭಿಸಿದರು.

'ಬಹಿಷ್ಕೃತ ಭಾರತ' ಆಯುಧದಂತೆ ಕೆಲಸ ಮಾಡಿತು. ಅಂಬೇಡ್ಕರ್ ತಾವು ನಂಬಿದ್ದ ಧೋರಣೆಗಳತ್ತ ಜನರ ಗಮನ ಸೆಳೆಯುವುದೇ ಅಲ್ಲದೆ ಸರಕಾರಕ್ಕೆ ಎಚ್ಚರಿಕೆಗಳನ್ನು ನೀಡಲು ಈ ಪತ್ರಿಕೆಯನ್ನು ಬಳಸಿದರು. ದೇವಸ್ಥಾನಗಳಿಗೆ ಪ್ರವೇಶ, ಸಾರ್ವಜನಿಕ ಬಾವಿಯಲ್ಲಿ ದಲಿತರು ನೀರು ತರುವಂತಾಗುವುದು. ಕೆಳವರ್ಗಕ್ಕೆ ಉನ್ನತ ಶಿಕ್ಷಣವನ್ನು ನೀಡುವುದು ಬ್ರಾಹ್ಮಣರು ಮಾತ್ರವೇ ಶಿಕ್ಷಣದ ಗುತ್ತಿಗೆ ಹಿಡಿಯುವುದನ್ನು ತಪ್ಪಿಸಲು 'ಬಹಿಷ್ಕೃತ ಭಾರತ' ವೇದಿಕೆಯಾಯಿತು. ಪತ್ರಿಕೆಗಳ ಮೂಲಕ ಸಂಪಾದಕೀಯದಲ್ಲಿ ಎಚ್ಚರಿಕೆ ನೀಡುತ್ತಿದ್ದುದು ಮಾತ್ರವೇ ಅಲ್ಲದೆ ಸಕ್ರಿಯವಾಗಿ ಹಮ್ಮಿಕೊಳ್ಳುತ್ತಿದ್ದುದು ಅಂಬೇಡ್ಕರ್‌ರವರ ವಿಶೇಷ.

"ಸೇವಕನಿಗೆ ಆತ ಸೇವಕ ಎಂಬುದನ್ನು ಹೇಳು, ಆಗ ಆತ ದಂಗೆಯೇಳುತ್ತಾನೆ" ಎಂಬ ಘೋಷಣೆಯೊಂದಿಗೆ ಅಂಬೇಡ್ಕರ್ 1930ರಲ್ಲಿ 'ಜನತಾ' ಪತ್ರಿಕೆ ಆರಂಭಿಸಿದರು. ನಾಗಪುರದಲ್ಲಿ ನಡೆದ ತುಳಿತಕ್ಕೊಳಗಾದವರ ಸಮ್ಮೇಳನದಲ್ಲಿ ಈ ಪತ್ರಿಕೆಯ ರೂಪುರೇಷೆಗಳನ್ನು ನಿರ್ಧರಿಸಲಾಯಿತು.

'ಜನತಾ' ಪತ್ರಿಕೆ ಕೆಲವು ಕಾಲ ಸ್ಥಗಿತವಾಯಿತು. 1943ರಲ್ಲಿ ಮತ್ತೆ ಇದಕ್ಕೆ ಜೀವ ನೀಡುವ ಪ್ರಯತ್ನ ನಡೆಯಿತು. ನಂತರ ಜನತಾಗೆ 'ಪ್ರಬುದ್ಧ ಭಾರತ' ಎಂದು ಮರು ನಾಮಕರಣ ಮಾಡಲಾಯಿತು. "ತ್ಯಾಗದಲ್ಲಿ ಮಾತ್ರವೇ ತುಳಿತಕ್ಕೊಳಗಾದ ಜನಾಂಗಕ್ಕೆ ಭವ್ಯ ಭವಿಷ್ಯವಿದೆ. ನಮ್ಮ ಗುರಿ ಆಡಳಿತ ನಡೆಸುವುದು. ಹುಲಿಗಳಂತಿರಿ. ಹೋರಾಟ ಮತ್ತೂ ಹೋರಾಟ ನಡೆಸಿ" ಎಂದು ಅವರು ಪ್ರಬುದ್ಧ ಭಾರತದಲ್ಲಿ ಕರೆ ನೀಡಿ ಯುವಕರನ್ನು ಹುರಿದುಂಬಿಸಿದರು.

ಅಂಬೇಡ್ಕರ್ 'ಸಮತಾ' ಆರಂಭಿಸಿ ಅಲ್ಲಿಯೂ ಸಾಕಷ್ಟು ಲೇಖನಗಳನ್ನು ಬರೆದರು.

ಅಂಬೇಡ್ಕರ್ ಚಳುವಳಿಗಳ ಆಳದಲ್ಲಿದ್ದುದು ಅವರ ಪತ್ರಿಕೆಗೆ ಹೊಸ ಮುನ್ನೋಟವನ್ನು ಒದಗಿಸಿತು. ಚಳುವಳಿಯ ಗಟ್ಟಿತನ ಪತ್ರಿಕೆಯನ್ನು ಬೆಳೆಸಿತು. ಅಂಬೇಡ್ಕರ್‌ರವರು ದಶಕಗಳ ಕಾಲ ಪತ್ರಿಕೆಯ ಒಡನಾಟದಲ್ಲಿದ್ದದ್ದು ಅವರಿಗೆ ಮಾಗಿದ ಅನುಭವವನ್ನು ನೀಡಿತು. ವಿಶ್ವದ ಪತ್ರಿಕೋದ್ಯಮ, ಭಾರತದ ಪತ್ರಿಕೋದ್ಯಮ, ಭಾಷಾ ಪತ್ರಿಕೋದ್ಯಮದತ್ತ ಸೀಳು ನೋಟ ಹರಿಸಲು ಸಹಾಯ ಮಾಡಿತು. ಈ ಹಿನ್ನೆಲೆಯಲ್ಲಿಯೇ ಅಂಬೇಡ್ಕರ್ "ಲಾರ್ಡ್ ಸಾಲಿಸ್‌ಬರಿ ತಮ್ಮ ಪತ್ರಿಕೋದ್ಯಮವನ್ನು ಕಚೇರಿ ಕಾರಕೂನರು ಕಚೇರಿ ಕಾರಕೂನರಿಗೆ ಬರೆದ ಪತ್ರಿಕೋದ್ಯಮ ಎಂದು ವರ್ಣಿಸಿದರು. "ಭಾರತೀಯ ಪತ್ರಿಕೋದ್ಯಮ ಇದಕ್ಕಿಂತ ಒಂದು ಕೈ ಹೆಚ್ಚಿನದು. ಇದು ತಮ್ಮ ನಾಯಕರನ್ನು ಹೊಗಳಲು ಹೊಗಳು ಭಟ್ಟರು ಬರೆದದ್ದು" ಎಂದು ಟೀಕಿಸಿದರು.

"ಪತ್ರಿಕೆಯನ್ನು ಕೈಯಲ್ಲಿಟ್ಟುಕೊಂಡು ಮಹಾನ್ ನಾಯಕರನ್ನು ಉತ್ಪಾದಿಸುವುದು ಅತ್ಯಂತ ಸುಲಭದ ಕೆಲಸ" "ವ್ಯಕ್ತಿ ಆರಾಧನೆ ಭಾರತದಲ್ಲಿ ಇಂದು ಕಾಣಿಸುವಷ್ಟು ಕುರುಡಾಗಿ ಇನ್ನೆಂದೂ ಇರಲಿಲ್ಲ" "ಚರಿತ್ರೆಯಲ್ಲಿ ನಾಯಕರು ಎಂದರೆ, ಕಾರ್ಲೈಲ್ ಎಂಬಾತ ವರ್ಣಿಸಿದಂತೆ ಹಲವು ನೋಟುಗಳು" ಇಂತಹ ಅಗ್ರಗಣ್ಯ ನಾಯಕರು ಕಂಡಾಗ "ಇಲ್ಲಿ ಅಗ್ರಗಣ್ಯ ನಾಯಕರಿದ್ದಾರೆ ಎಚ್ಚರಿಕೆ" ಎಂಬ ಫಲಕ ತೂಗು ಹಾಕಬೇಕು ಎಂದು ಅವರು ವರ್ಣಿಸಿದರು.

ಕಾಲನ ತೆರೆ ಸರಿದ ಈ ದಿನಗಳಲ್ಲೂ ಅಂಬೇಡ್ಕರ್ ಮಾತು ಎಷ್ಟು ಪ್ರಸ್ತುತ! ಅಂಬೇಡ್ಕರ್ ಬದುಕಿನಲ್ಲಿ ಆರ್ಥಿಕತೆಯ ಪ್ರಾಮುಖ್ಯವನ್ನು ಅರಿತಿದ್ದರು. ಸಮಾಜದ ಬದಲಾವಣೆ ಆರ್ಥಿಕ ಸಮಾನತೆಯ ಆಧಾರದಲ್ಲಿದೆ ಎಂಬುದೇ ನಾಯಕರನ್ನು ಅವರು ಹಲವು ನೋಟುಗಳಂತೆ ಕಾಣುವಂತೆ ಮಾಡಿತ್ತು.

ಹೀಗೆಯೇ ಅವರು ಪತ್ರಿಕೋದ್ಯಮದಲ್ಲಿ ಆರ್ಥಿಕವಾಗಿ ಬಲಿಷ್ಠರಾದವರು ಕೈಗಳು ಆಡಲು ಆರಂಭಿಸುತ್ತಿದ್ದಂತೆಯೇ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಅರಿತಿದ್ದರೂ ಗುತ್ತೇದಾರಿ ಬಂಡವಾಳ ನುಸುಳುವ ಪತ್ರಿಕಾ ಸರಣಿ ಹೇಗೆ ಕಿರು ಪತ್ರಿಕೆಗಳನ್ನು, ಭಾಷಾ ಪತ್ರಿಕೆಗಳನ್ನು ನಿಧಾನವಾಗಿ ಮುಗಿಸುತ್ತದೆ ಈ ಹಿನ್ನೆಲೆಯಲ್ಲಿ ತುಳಿತಕ್ಕೊಳಗಾದ ಜನಾಂಗಗಳ ಹೋರಾಟದ ದನಿ ಎಷ್ಟು ಕ್ಷೀಣವಾಗುತ್ತಾ ಬರುತ್ತದೆ ಎಂಬುದನ್ನು ಅರಿತಿದ್ದರು.

ಪುಟ 8 ನೋಡಿ



ಪ.ಬಂಗಾಳ: ಪಂಚಾಯತ್ ಘೆರಾವೋ 'ಚಳವಳಿ' ಠುಸ್!

ಪಶ್ಚಿಮ ಬಂಗಾಳ ರಾಜ್ಯಾದ್ಯಂತ ಚುನಾಯಿತ ಪಂಚಾಯಿತಿಗಳಿಗೆ ಮುತ್ತಿಗೆ ಹಾಕುವ ಕಾಂಗ್ರೆಸ್ ಪಕ್ಷದ ಚಳವಳಿ ಹೀನಾಯ ಸೋಲು ಕಂಡಿದೆ. ಈ 'ಆಂದೋಲನಕ್ಕೆ' ಅಬ್ಬರದ ಪ್ರಚಾರವೇನೋ ನೀಡಲಾಗಿತ್ತು. ಆದರೆ ಚಳವಳಿಗೆ ಕರೆ ಕೊಟ್ಟ ಕಾಂಗ್ರೆಸ್ ಪಕ್ಷವೇ ಆಂತರಿಕ ಕಚ್ಚಾಟಗಳಿಂದ ನಲುಗುತ್ತಿರುವುದರಿಂದ, ಅದರಿಂದ ಯಾವ ರೀತಿಯ ಅರ್ಥಪೂರ್ಣ ಚಳವಳಿ ನಡೆಯಲು ಸಾಧ್ಯವಾದೀತು?

ಪಂಚಾಯತ್ ಘೆರಾವೋ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆಯಲು ಐಎನ್ಎಸ್ ವರದಿಗಾರರು ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ ಪ್ರದೀಪ್ ಭಟ್ಟಾಚಾರ್ಯರನ್ನು ಫೋನಿನಲ್ಲಿ ಸಂಪರ್ಕಿಸಿದಾಗ 'ಘೆರಾವೋ ಯಶಸ್ವಿಯಾಗಿದೆ' ಎಂದಷ್ಟೇ ಹೇಳಿದ ಪ್ರದೀಪ್ ಫೋನನ್ನು ಕುಕ್ಕಿಬಿಟ್ಟರು!

ಕಚ್ಚಾಟವೇ ಪ್ರಮುಖ ಅಂಶ

ಎಂದಿನಂತೆ ರಾಜ್ಯ ಕಾಂಗ್ರೆಸ್ ಬಣಗಳ ನಡುವಿನ ಹೊಡೆದಾಟವೇ ಈ ಚಳುವಳಿಯಲ್ಲಿ ಕೂಡ ಪ್ರಮುಖ ಅಂಶವಾಗಿತ್ತು. ಘೆರಾವೋ ವಿಚಾರದಲ್ಲಿ ಸೋಮೇನ್ ಮಿತ್ರ ಮತ್ತು ಮಮತಾ ಬ್ಯಾನರ್ಜಿ ಬಣಗಳ ಮಧ್ಯೆ 24 ಪರಗಣ ಜಿಲ್ಲೆಯ ಗ್ಯ ಫಾಟ್ ಎಂಬಲ್ಲಿ ಹೊಡೆದಾಟವಾಗಿ 16 ಜನರು ಗಾಯಗೊಂಡರು. ಆ ಪೈಕಿ ಬಾಂಬ್ ಸ್ಫೋಟದಿಂದ ಗಾಯಗೊಂಡ ಏಳು ಜನರನ್ನು ಆಸ್ಪತ್ರೆಗೆ ಸಾಗಿಸಬೇಕಾಯಿತು.

ಹೇಗಿದೆ ಕಾಂಗ್ರೆಸ್ ಚಳವಳಿಯ ವೈಖರಿ?

ಯಾವುದಾದರೂ ನೆಪ, ಕಾರಣ ಮುಂದೊಡ್ಡಿ ಎಡರಂಗ ಸರಕಾರದ ವಿರುದ್ಧ ಕಾಲು ಕೆರೆಯುತ್ತಿರುವ ಕಾಂಗ್ರೆಸ್‌ಗೆ ಮತ್ತೊಮ್ಮೆ ಮುಖಭಂಗವಾಗಿದೆ.

ಚಂಡೀಗಢದಲ್ಲಿ ಬೃಹತ್ ಪ್ರದರ್ಶನ

ಹರ್ಯಾಣದ ರಾಜಧಾನಿ ಚಂಡೀಗಢದಲ್ಲಿ ಮಾರ್ಚ್ 19 ರಂದು ಹತ್ತು ಸಾವಿರಕ್ಕೂ ಹೆಚ್ಚು ಜನರು ಭಾರೀ ಮಂತ ಪ್ರದರ್ಶನ ನಡೆಸಿದರು. ಸಿಐಟಿಯು ಮತ್ತು ಕೃಷಿ ಕೂಲಿಕಾರರ ಸಂಘಗಳ ಜಂಟಿ ಕ್ರಿಯಾ ಸಮಿತಿ ಇದಕ್ಕೆ ಕರೆ ನೀಡಿತ್ತು.

ಕೃಷಿ ಕಾರ್ಮಿಕರು, ಇಟ್ಟಿಗೆ ಗೂಡುಗಳ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಚೌಕಿದಾರರು, ಅರಣ್ಯ ನೌಕರರು ಮತ್ತು ಅಸಂಘಟಿತ ವಲಯದ ಕಾರ್ಮಿಕರು ಪಾಲ್ಗೊಂಡಿದ್ದರು.

ದುಡಿಯುವ ಜನರಿಗೆ ಸಂಬಂಧಿಸಿ ಹಲವು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ಈ ಪ್ರದರ್ಶನವನ್ನು ನಡೆಸಲಾಯಿತು.

ರಾಜ್ಯದೆಲ್ಲೆಡೆಯಿಂದ ಬಂದಿದ್ದ ಶ್ರಮಿಕರು ಪರೇಡ್ ಮೈದಾನದಿಂದ ವಿಧಾನ ಸಭೆ ಕಾರ್ಯಾಲಯಕ್ಕೆ ಮೆರವಣಿಗೆ ನಡೆಸಿದರು. ಅಲ್ಲೇ ಅವರು ರಸ್ತೆ ಸಂಚಾರವನ್ನು ಸ್ಥಗಿತಗೊಳಿಸಿ ಸಾರ್ವಜನಿಕ ಸಭೆಯನ್ನು ನಡೆಸಿದರು. ಶ್ರದ್ಧಾನಂದ ಸೋಲಂಕಿ(ಸಿಐಟಿಯು ರಾಜ್ಯ ಅಧ್ಯಕ್ಷರು) ಮತ್ತು ಮೋಹನ ಕುಮಾರ್ ಸಿಂಗ್(ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರು) ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಎಐಎಡಬ್ಲ್ಯುಯುನ ಅಖಿಲ ಭಾರತ ಸಹ ಕಾರ್ಯದರ್ಶಿ ಸುನೀತ್ ಚೋಪ್ರಾ ಸಹಿತ ಅನೇಕ ಮುಖಂಡರು ಮಾತನಾಡಿದರು. ಜನವಿರೋಧಿ ನೀತಿಗಳು ಅನುಷ್ಠಾನಗೊಳ್ಳುವುದನ್ನು ತಡೆಯಲು ಮಧ್ಯಪ್ರವೇಶ ಮಾಡಲು ದುಡಿಯುವ ಜನರ ಮುಂದೆ ಇರುವುದು ಹೋರಾಟವೊಂದೇ ಪ್ರಬಲವಾದ ಮಾರ್ಗ ಎಂದು ಭಾಷಣಕಾರರು ಪ್ರತಿಪಾದಿಸಿದರು.

ಸಭೆ ನಡೆಯುತ್ತಿರುವಾಗಲೇ ವಿವಿಧ ಸಂಘಟನೆಗಳ ಮುಖಂಡರ ನಿಯೋಗವೊಂದು ಹರ್ಯಾಣದ ಕೃಷಿ ಮಂತ್ರಿಯನ್ನು ಭೇಟಿ ಮಾಡಿ 17 ಅಂಶಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿತು. ಕೃಷಿ ಕೂಲಿಗಾರರಿಗಾಗಿ ಕೇಂದ್ರ ಕಾನೂನು ರಚಿಸಬೇಕು ಎಂಬ ಬೇಡಿಕೆಯೂ ಅದರಲ್ಲಿ ಸೇರಿದೆ.

ಹರ್ಯಾಣ ವಿದ್ಯುಚ್ಛಕ್ತಿ ಮಂಡಳಿ ಮತ್ತು ರಾಜ್ಯ ಸ್ವಾಮ್ಯದ ಇತರ ನಿಗಮಗಳನ್ನು ಖಾಸಗೀಕರಿಸಬಾರದು ಎಂದು ಒತ್ತಾಯಿಸಲಾಗಿದೆ.

ಕುಶಲರಲ್ಲದ (Unskilled) ಕಾರ್ಮಿಕರಿಗೆ ತಿಂಗಳಿಗೆ 2500 ರೂ. ಕನಿಷ್ಠ ವೇತನ, ಗ್ರಾಮಗಳಲ್ಲಿ ಇಂದಿಗೂ ಕುಟುಂಬಗಳಿಂದ ಪಾಳೇಗಾರಿಕೆ ಬಾಕಿಗಳನ್ನು ಸಂಗ್ರಹಿಸುವ ಗ್ರಾಮ ಚೌಕಿದಾರರಿಗೆ ನಿಯಮಿತ ವೇತನ ನೀಡಬೇಕು, ಭೂ ರಹಿತರಿಗೆ ಜಮೀನು ಹಾಗೂ ವಸತಿ ನಿವೇಶನ ವಿತರಣೆ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಹೊಸ ಪದಿತರ ವ್ಯವಸ್ಥೆಯ ಲಾಭ ಅತಿ ಬಡವನಿಗೂ ಸಿಗುವಂತಾಗಲು ಸೂಕ್ತ ನಿಯಮಗಳನ್ನು ರೂಪಿಸಬೇಕು ಎಂದು ಸಂಘಟನೆಗಳು ಆಗ್ರಹಿಸಿವೆ.

ಚೌಕಿದಾರರಿಗೆ ಪ್ರತಿ ತಿಂಗಳು ಬಿಡಿಓ ಮತ್ತು ಪಂಚಾಯತ್‌ಗಳ ಮೂಲಕ 400 ರೂಪಾಯಿ ವೇತನವನ್ನು ನೀಡಲು ಸರಕಾರ ಈಗಾಗಲೇ ಒಪ್ಪಿದೆ. ಇತರ ಬೇಡಿಕೆಗಳ ಮೇಲೆ ಮಾತುಕತೆ ನಡೆಯುತ್ತಿದೆ.

ಶೈಕ್ಷಣಿಕ ಆಡಳಿತದಿಂದ ಭ್ರಷ್ಟಾಚಾರ ನಿರ್ಮೂಲನಕ್ಕೆ ಹೋರಾಡಲು ಕರೆ

ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗಗಳ ಭ್ರಷ್ಟಾಚಾರವನ್ನು ತೊಡೆದು ಹಾಕುವ ಹೋರಾಟದ ಮುಂಚೂಣಿಯಲ್ಲಿ ಇರಬೇಕು ಎಂದು ಖಾಸಗಿ ಕಾಲೇಜುಗಳ ಶಿಕ್ಷಕರಿಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ವಿ.ಎಸ್. ಅಚ್ಯುತಾನಂದನ್ ಕರೆ ನೀಡಿದ್ದಾರೆ.

ಕೇರಳ ಖಾಸಗಿ ಕಾಲೇಜು ಶಿಕ್ಷಕರ ಸಂಘದ 39 ನೇ ವಾರ್ಷಿಕ ಸಮ್ಮೇಳನವನ್ನು ಕಣ್ಣೂರಿನಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆಡಳಿತ ವರ್ಗಗಳ ಕೋಮು, ಜಾತಿ ಅಥವಾ ಧರ್ಮಭೇದವಿಲ್ಲದೆ ಖಾಸಗಿ ಶಿಕ್ಷಣ ಕ್ಷೇತ್ರ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಡಳಿತದವರು ಕೂಡಾ ಈ ವಿಚಾರದಲ್ಲಿ ಕೆಟ್ಟು ಹೋಗಿದ್ದಾರೆ ಎಂದು ಕಾ|| ವಿ.ಎಸ್. ವಿಷಾದ ವ್ಯಕ್ತಪಡಿಸಿದರು.

ಕಾಂ|| ಇಎಂಎಸ್ ನಂಬೂದಿರಿಪಾಡ್ ನೇತೃತ್ವದ ಪ್ರಥಮ ಕಮ್ಯುನಿಸ್ಟ್ ಸರಕಾರ 1957 ರಲ್ಲಿ ಪ್ರಸ್ತಾಪಿಸಿದ್ದ ಶಿಕ್ಷಣ ಕಾನೂನು ಅಂಗೀಕಾರವಾಗಿ ಅನುಷ್ಠಾನಗೊಂಡಿದ್ದರೆ ಕೇರಳದ ಶಿಕ್ಷಣ ರಂಗದಲ್ಲಿ ಈಗಿನ ದುರದೃಷ್ಟಕರ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಸಂಘದ ಹೊಸ ಅಧ್ಯಕ್ಷರಾಗಿ ಪ್ರೊಫೆಸರ್ ವಿಶ್ವನಾಥನ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಪ್ರೊ. ದಿವಾಕರನ್ ನಾಯರ್ ಸಮ್ಮೇಳನದಲ್ಲಿ ಆಯ್ಕೆಯಾದರು.

ಪ್ರಶ್ನೆ ಪತ್ರಿಕೆ ಬಯಲು ಪ್ರಕರಣ: ತನಿಖೆಗೆ ಆದೇಶ

ಪಶ್ಚಿಮ ಬಂಗಾಳದಲ್ಲಿ ಈ ವರ್ಷದ ಮಾಧ್ಯಮಿಕ(ಹತ್ತನೇ ತರಗತಿ) ಪರೀಕ್ಷೆಗಳ ಗಣಿತ ಪ್ರಶ್ನೆ ಪತ್ರಿಕೆ ಬಹಿರಂಗವಾಗಿರುವ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಶಾಲಾ ಶಿಕ್ಷಣ ಸಚಿವ ಕಾಂತಿ ಬಿಸ್ವಾಸ್ ಆದೇಶ ಹೊರಡಿಸಿದ್ದಾರೆ.

ಈ ಪ್ರಕರಣದ ಸಂಬಂಧದಲ್ಲಿ ಈಗಾಗಲೇ ನಡೆಯುತ್ತಿರುವ ಪೋಲೀಸ್ ತನಿಖೆ ಮುಂದುವರಿಯುತ್ತದೆ ಎಂದು ಅವರು ತಿಳಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಬಯಲಾದ ಪ್ರಕರಣವನ್ನು ದೊಡ್ಡ ಹಗರಣವನ್ನಾಗಿ ಮಾಡಲು ಕಾಂಗ್ರೆಸ್ ನಡೆಸಿದ ಪ್ರಯತ್ನ ವಿಫಲವಾಗಿದೆ.

ಮಹಿಳಾ ಮೀಸಲಾತಿ; ಹೀಗೊಂದು ಸಂಕಿರಣ

ಕಲ್ಕತ್ತ: ವಿಶ್ವಸಂಸ್ಥೆ ಸಂಘಗಳ ಒಕ್ಕೂಟದ ಪಶ್ಚಿಮ ಬಂಗಾಳ ಘಟಕ ಶಾಸಕಾಂಗ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಮೀಸಲಾತಿ ವಿಚಾರವಾಗಿ ಕಲ್ಕತ್ತದಲ್ಲಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು.

ರಷ್ಯಾದ ಕಾನ್ಸುಲ್ ಜನರಲ್ ಎಸ್. ಎಸ್ ಗಪ್ರಿಕೊವ್, ಅಮೆರಿಕದ ಕಾನ್ಸುಲ್ ಜೆರಿಲ್‌ಸಿಮ್ಸ್, ನ್ಯಾಯಮೂರ್ತಿ ಕೆ.ಎಂ. ಯೂಸುಫ್, ಎಡರಂಗ ಸರಕಾರದ ಸಂಸದೀಯ ವ್ಯವಹಾರಗಳ ಸಚಿವ ಪ್ರಬೋಧ್ ಸಿಂಗ್ ಮುಂತಾದವರು ಮಾತನಾಡಿದರು.

ಪ.ಬಂಗಾಳ ವಿಧಾನ ಸಭೆಯ ಸ್ಪೀಕರ್ ಹಷಿಂ ಅಬ್ದುಲ್ ಹಲೀಂ ಚರ್ಚೆಯನ್ನು ಉದ್ಘಾಟಿಸಿದರು.

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಮತ್ತು ಅವರ ಹೋರಾಟಗಳು ಅಲಕ್ಷಿತವಾಗದಿರಲು ನಾನಾ ಸಂಸದೀಯ ವೇದಿಕೆಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಸಾಧ್ಯವಾಗಬೇಕು ಎಂದು ಹಲೀಂ ಹೇಳಿದರು. ಸ್ವಾವಲಂಬಿಯಾಗಲು ಮತ್ತು ಅವಲಂಬಿತ ಪಾತ್ರವನ್ನು ಕಳಚಿಕೊಳ್ಳಲು ಮಹಿಳೆಯರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಪಶ್ಚಿಮ ಬಂಗಾಳದ ಪಂಚಾಯತುಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಈಗಾಗಲೇ ಮೂರನೇ ಒಂದರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಆಡಳಿತದ ಸಮಸ್ಯೆಗಳನ್ನು ಸಮರ್ಪಕವಾಗಿ ನಿಭಾಯಿಸಲು ಮಹಿಳೆಯರು ಸಮರ್ಥರು ಎಂಬುದನ್ನು ಇಲ್ಲಿನ ಅನುಭವ ತೋರಿಸಿಕೊಟ್ಟಿದೆ ಎಂದು ಸ್ಪೀಕರ್ ಹೇಳಿದರು.

ಮಹಿಳೆಯರ ದುಃಸ್ಥಿತಿ

ತಮ್ಮ ತಮ್ಮ ದೇಶಗಳಲ್ಲಿ ಸಮಾಜಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ದುಃಸ್ಥಿತಿಯ ಚಿತ್ರಣವನ್ನು ರಷ್ಯಾ ಮತ್ತು ಅಮೆರಿಕದ ರಾಯಭಾರಿ ಅಧಿಕಾರಿಗಳು ತೆರೆದಿಟ್ಟರು. ಮಹಿಳೆಯರಿಗೆ ಸ್ಥಾನ ಮೀಸಲಾತಿ ಅಗತ್ಯ ಎಂದು ಬಲವಾಗಿ ವಾದಿಸಿದರು.

ಅನೇಕ ಮಹಿಳಾ ಪ್ರತಿನಿಧಿಗಳೂ ಸಂಕಿರಣದಲ್ಲಿ ಮಾತನಾಡಿದರು.



ರಾಜ್ಯಾದ್ಯಂತ ಯುವಜನತೆಯ ಬಳಿಗೆ ಸಂದೇಶ ಕೊಂಡೊಯ್ದ

ಭಗತ್ ಸಿಂಗ್ ಹುತಾತ್ಮ ದಿನಾಚರಣೆ

ಮಾರ್ಚ್ 23 ಭಾರತದ ಸ್ವಾತಂತ್ರ್ಯ, ಸ್ವಾಭಿಮಾನಿ ಜನತೆಗೆ ಅದರಲ್ಲೂ ಯುವ ಜನತೆಗೆ ರೋಮಾಂಚನಗೊಳ್ಳುವ ದಿನ. ಕಾರಣ ಭಗತ್ ಸಿಂಗ್ ಮತ್ತು ಆತನ ಸಹಚರರು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟದಲ್ಲಿ ಹಾಗೂ ದೇಶಕ್ಕೆ ಸ್ವಾಭಿಮಾನಿ ಸ್ವಾತಂತ್ರ್ಯ ತಂದುಕೊಡಬೇಕೆಂಬ ಛಲದಿಂದ ಯಾವ ರಾಜಿಯೂ ಇಲ್ಲದೆ ಬ್ರಿಟಿಷರ ನೇಣುಗಂಬಕ್ಕೇರಿ ಹುತಾತ್ಮರಾದ ದಿನ. ಇದೇ ಮಾರ್ಚ್ 23ಕ್ಕೆ ಭಗತ್‌ಸಿಂಗ್ ಮತ್ತು ಆತನ ಸಹಚರರಾದ ರಾಜಗುರು ಮತ್ತು ಸುಖದೇವ್ ಹುತಾತ್ಮರಾದ 66 ವರ್ಷಗಳ ನೆನಪಿಗಾಗಿ ಡಿವೈಎಫ್ಐ ಮತ್ತು ಇತರ ಯುವಜನ ಮತ್ತು ವಿದ್ಯಾರ್ಥಿ ಸಂಘಟನೆಗಳು 'ತ್ಯಾಗ ಬಲಿದಾನ'ಗಳನ್ನು ನೆನಪಿಸುವ ಹಾಗೂ ಅವರ ಸಂದೇಶಗಳನ್ನು ಜನತೆಯ ಬಳಿಗೆ ಕೊಂಡೊಯ್ಯುವ ದಿನವನ್ನಾಗಿ ಆಚರಿಸಲು ಕರೆ ನೀಡಿದ್ದರು. ಈ ಕರೆಗೆ ರಾಜ್ಯಾದ್ಯಂತ ಅಭೂತಪೂರ್ವ ವಾಗಿ ಯುವ ಜನರು ವಿದ್ಯಾರ್ಥಿಗಳು ಸ್ಪಂದಿಸಿ, ಸಭೆ ಸಮಾರಂಭ, ಉಪನ್ಯಾಸ ಸಾಂಸ್ಕೃತಿಕ ಇನ್ನಿತರ ಕಾರ್ಯಕ್ರಮಗಳು ನಡೆದ ಬಗ್ಗೆ ಒಂದು ವರದಿ.

ಬಾಗೇಪಲ್ಲಿ: ತಾಲ್ಲೂಕಿನಾದ್ಯಂತ 12 ಘಟಕಗಳಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ಹುತಾತ್ಮ ದಿನಾಚರಣೆಯ ಜತೆಗೆ ಡಿವೈಎಫ್ಐ ಸದಸ್ಯತ್ವ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ತಾಲ್ಲೂಕಿನ ಬಾಗೇಪಲ್ಲಿ 1ನೇ ಬ್ಲಾಕ್, ಬಿಳ್ಳೂರು, ಮಿಸಲಪರ್ತಿ, ಶಂಕಮಾರಂಪಲ್ಲಿ, ಗುಂಟಗಾನಪಲ್ಲಿ, ರಾಚವಾರಪಲ್ಲಿ, ಬೆನಗಾನಪಲ್ಲಿ, ಶಿವಪುರ ಮತ್ತು ಬೆಸ್ತಲಪಲ್ಲಿಗಳಲ್ಲಿ ಕಾರ್ಯಕ್ರಮಗಳು ನಡೆದವು. ಬಿಳ್ಳೂರಿನಲ್ಲಿ ನಡೆದ ಕಾರ್ಯಕ್ರಮಕ್ಕೆ ಜಿ.ಪಂಚಾಯತ್ ಸದಸ್ಯರಾದ ಕಾಂ||ಸಿ.ಡಿ.ಗಂಗುಲಪ್ಪ, ಶಿಕ್ಷಕರಾದ ವರದರಾಜು, ಗ್ರಾ. ಪಂಚಾಯತ್ ಅಧ್ಯಕ್ಷರಾದ ಸದಾಶಿವಪ್ಪ, ರೈತ ಸಂಘದ ಟಿ.ನರಸಿಂಹಯ್ಯ, ಚಲಪತಿ, ಡಿವೈಎಫ್ಐನ ಭಾಸ್ಕರ ರೆಡ್ಡಿಯವರು ಭಾಗವಹಿಸಿದ್ದರು.

ಇದರ ಪೂರ್ವಭಾವಿಯಾಗಿ ತಾಲ್ಲೂಕಿನ ಪಾತಪಾಳ್ಯ, ಬಿಳ್ಳೂರು, ತಿಮ್ಮಂಪಲ್ಲಿ ಮತ್ತು ಮಾರಗಾನಕುಂಟೆಗಳಲ್ಲಿ ರಾಜ್ಯಕಾರ್ಯದರ್ಶಿ ಎಸ್ ವೈ.ಗುರುಶಾಂತ್‌ರವರ ಸಮ್ಮುಖದಲ್ಲಿ ಸಭೆ ನಡೆಸಿ, ಕಾರ್ಯಕ್ರಮ ರೂಪಿಸಲಾಗಿತ್ತು.

ಹುಬ್ಬಳ್ಳಿ: ಎಸ್‌ಎಫ್ಐ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ಕಾರ್ಯಕ್ರಮ ನಡೆಯಿತು. ಸಿಐಟಿಯು ಡಿ.ಜಿ.ಗೋವಿಂದಕರ್, ಹೆಚ್.ಪಿ. ಮುನವಳ್ಳಿ, ಜ್ಞಾನೇಶ ಬೆನಗಿ, ಹಂಚಿನ ಮನಿ ಅತಿಥಿಗಳಾಗಿ ಭಾಗವಹಿಸಿದ್ದರು. ಮಹೇಶ್ ಪತ್ತಾರ್ ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರು ನಗರ:

- ಉರ್ವಾಸ್ಟೋರ್‌ನಲ್ಲಿ ನಡೆದ ಸಾರ್ವಜನಿಕ ಸಭೆಯ ಆರಂಭದಲ್ಲಿ ಸಂಜೀವ ಬಳ್ಕೂರ್‌ರಿಂದ ಧ್ವಜಾರೋಹಣ, ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿಯವರಿಂದ ಭಗತ್ ಸಿಂಗ್‌ರ ಬಲಿದಾನದ ವಿವರಣೆ.
- ಪಕ್ಕಲಡ್ಕದಲ್ಲಿ ಪ್ರಭಾಕರ್ ಟೈಲರ್ ರಿಂದ ಧ್ವಜಾರೋಹಣ. ನಗರ ಸಮಿತಿ ಕಾರ್ಯದರ್ಶಿ ರಾಮದಾಸ್‌ರ ಭಾಷಣ.
- ಜಪ್ಪಿನ ಮೊಗರುವಿನಲ್ಲಿ ಎಸ್‌ಎಫ್ಐ ಸ್ಥಾಪಕ ಸದಸ್ಯ ಜೆ.ಚಂದ್ರಹಾಸರಿಂದ ಧ್ವಜಾರೋಹಣ.
- ಶಕ್ತಿ ನಗರದಲ್ಲಿ ಜಿಲ್ಲಾ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿಯವರ ಭಾಷಣ.
- ಜಿಲ್ಲಾ ಸಮಿತಿ ಕಛೇರಿಯಲ್ಲಿ ಭಗತ್ ಸಿಂಗ್ ಭಾವಚಿತ್ರ ಅನಾವರಣ. ಘನರಾಜ್ ರವರಿಂದ ಉಪನ್ಯಾಸ

ಉಳ್ಳಾಲ ವಲಯ

- ಮುನ್ನೂರು ಗ್ರಾಮದಲ್ಲಿ ಕೃಷ್ಣಪ್ಪ ಸಾಲಿಯಾನ್ ರಿಂದ ಧ್ವಜಾರೋಹಣ. ಬಳಿಕ 'ಕಾಲ್ನಡೆ ಜಾಥಾ' ಗ್ರಾಮದ ಬೀದಿ ಬೀದಿಗಳಲ್ಲಿ ಸಾರ್ವಜನಿಕ ಸಭೆ. ಸಾವಿರಕ್ಕೂ ಹೆಚ್ಚು ಮಂದಿಯ ನಡುವೆ ಭಗತ್ ಸಿಂಗ್ ಸಂದೇಶ. ಭಾಷಣಕಾರರು ನಾಗೇಶ್ ಕುಮಾರ್, ರಮಾನಾಥ, ಜಯಂತ್ ನಾಯಕ್.
- ಉಳ್ಳಾಲ ವಲಯ ಸಮಿತಿಯಿಂದ ತೊಕ್ಕೊಟ್ಟಿನಲ್ಲಿ ಬ್ಯಾಂಕ್ ನೌಕರರ ಮುಂದಾಳು ಬಿ.ಎಂ.ಮಾಧವರಿಂದ ಉಪನ್ಯಾಸ.
- ಹರೇಕಳದಲ್ಲಿ ಧ್ವಜಾರೋಹಣ.

ಕುಂದಾಪುರ:

- ಸಾಲಿಗ್ರಾಮದಲ್ಲಿ ಅಧ್ಯಯನ ಶಿಬಿರ. ಜಿಲ್ಲಾ ಜತೆ ಕಾರ್ಯದರ್ಶಿ ಚಂದ್ರಶೇಖರ್‌ರವರಿಂದ ಧ್ವಜಾರೋಹಣ. ಸಿಐಟಿಯು ಮುಂದಾಳು ವಿ.ಮಾಧವ, ಸೋಮಯಾಜಿ, ಎಚ್.ನರಸಿಂಹರ ವರಿಂದ ಉಪನ್ಯಾಸ.
- ಗುಲ್ವಾಡಿಯಲ್ಲಿ ವಾರಪೂರ್ತಿ ಕ್ರೀಡಾ ಚಟುವಟಿಕೆ.
- ಪಡುಕೋಣೆಯಲ್ಲಿ ರಸ್ತೆ ಶ್ರಮದಾನ.
- ಚರ್ಚ್‌ರೋಡ್‌ನಲ್ಲಿ ಸ್ವಂತ ಚಿಟ್ಟೆದು ಶ್ರಮದಾನ.

ಬೆಳ್ತಂಗಡಿ:

- ಎನ್.ಜಿ.ಓ ಹಾಲ್‌ನಲ್ಲಿ ನಡೆದ ತಾಲ್ಲೂಕು ಮಟ್ಟದ ಕಾರ್ಯಕ್ರಮದಲ್ಲಿ ಕೆ.ಆರ್.ಶ್ರೀಯಾನ್, ಕೃಷ್ಣಪ್ಪ ಕೊಂಚಾಡಿ, ಬಿ.ಎಂ.ಭಟ್ ಭಾಗವಹಿಸಿದ್ದರು.

ಮೂಡಬಿದರೆ:

- ಯಾದವಶೆಟ್ಟಿ,ರಮಣಿ,ಪ್ರದೀಪ್ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿದ್ದರು.

ಗುರುಪುರ: ಕುಪ್ಪೆಪದವು ಕಛೇರಿಯಲ್ಲಿ ನಡೆದ ಸಭೆಯಲ್ಲಿ ವಸಂತ ಆಚಾರಿ, ಹಸನಬ್ಬ 'ಭಗತ್ ಸಿಂಗ್' ಕುರಿತು ಮಾತನಾಡಿದರು.

ಉಡುಪಿ: ಇಲ್ಲಿ ನಡೆದ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಡಾ|| ಮಹಾಬಲೇಶ್ವರ ರಾವ್, ಪಿ.ವಿಶ್ವನಾಥರೈ ಮುಖ್ಯ ಅತಿಥಿಗಳಾಗಿದ್ದರು. ಸಭೆಯ ಅಧ್ಯಕ್ಷತೆಯನ್ನು ಉಮೇಶ್ ಕುಂದರ್ ವಹಿಸಿದ್ದರು. ಪಿ.ವಿಶ್ವನಾಥ, ರಮೇಶ್ ಮೆಂಡನ್, ಪ್ರಶಾಂತ್ ಭಟ್ ಮುಂತಾದವರು ಉಪಸ್ಥಿತರಿದ್ದರು.

ಸುಳ್ಯ ತಾಲ್ಲೂಕಿನಲ್ಲಿಯೂ ಸಭೆ ಉಪನ್ಯಾಸ ಸಮಾರಂಭ ನಡೆದ ವರದಿಯಾಗಿದೆ.

ವರದಿ : ನಿರಂತರ,
ಮಂಗಳೂರು.

ಡಿವೈಎಫ್ಐ ಮಳವಳ್ಳಿ ತಾಲ್ಲೂಕು ಸಮ್ಮೇಳನ

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಸಮ್ಮೇಳನವು ಮಾರ್ಚ್ 17 ಮತ್ತು 18 ರಂದು ಮಳವಳ್ಳಿ ಸಮೀಪದ ಮತ್ತಿತಾಳೇಶ್ವರ ದೇವಸ್ಥಾನದಲ್ಲಿ ನಡೆಯಿತು. ಮೋಹನ್ ಕುಮಾರ್ ರವರು ಸಮ್ಮೇಳನವನ್ನು ಉದ್ಘಾಟಿಸಿದರು.

ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಜನ ಶ್ರೀಮಂತರ ರಕ್ಷಣೆ ಮಾಡಿದರ ಹೊರತು ಬಡವರ ಚೇತರಿಸುವ ಕೆಲಸವನ್ನು ಮಾಡಲಿಲ್ಲವೆಂದು ಮೋಹನ್ ಕುಮಾರ್ ತೀವ್ರ ಟೀಕಾಪ್ರಹಾರ ಮಾಡಿದರು. ಯುವಜನರ ಸಮಸ್ಯೆಯನ್ನು ಬಗೆಹರಿಸುವುದರ ಬದಲು ಯುವಜನರ ಮನಸನ್ನು ಬೇರೆಕಡೆ ಸೆಳೆಯಲು ಪ್ರಯತ್ನಿಸುತ್ತಿರುವುದರ ವಿರುದ್ಧ ಯುವಜನರು ಹೋರಾಡಬೇಕೆಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಮಾಲಕ್ಷ್ಮಯ್ಯನವರು ಮಾತನಾಡಿ ಶೋಷಣೆ, ಭ್ರಷ್ಟಾಚಾರ, ಕೋಮುವಾದದ ವಿರುದ್ಧ ಯುವಜನತೆ ಹೋರಾಡಬೇಕೆಂದು ಹೇಳಿದರು. ಸಭೆಯಲ್ಲಿ ಡಿವೈಎಫ್ಐ ರಾಜ್ಯ ಖಜಾಂಚಿ ಪುಟ್ಟಸ್ವಾಮಯ್ಯ, ಹನುಮಂತು, ಜಿ.ರಾಮಕೃಷ್ಣ, ಜಯಶೀಲಪ್ಪ, ಲಿಂಗರಾಜು, ತಾಲ್ಲೂಕು ಪಂಚಾಯತ್ ಸದಸ್ಯ ಜಯಲಕ್ಷ್ಮಮ್ಮ, ಗ್ರಾ. ಪಂ.ಅಧ್ಯಕ್ಷರಾದ ಚಿಕ್ಕ ಚನ್ನೇಗೌಡ ಉಪಸ್ಥಿತರಿದ್ದರು. ಟಿ.ಎಂ.ಆನಂದ್ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನವು ತಾಲ್ಲೂಕು ಜನಗಳ ಸಮಸ್ಯೆಗಳನ್ನು ಕುರಿತಂತೆ ನಿರ್ಣಯಗಳನ್ನು ಅಂಗೀಕರಿಸಿತು.

ನೂತನ ಸಮಿತಿಯ ಅಧ್ಯಕ್ಷರಾಗಿ-ಟಿ.ಎಚ್.ಆನಂದ್, ಉಪಾಧ್ಯಕ್ಷರಾಗಿ-ಶಿವಪ್ಪ, ಶಂಕರೇಗೌಡ ಜೋಡಿಸಿ, ಕಾರ್ಯದರ್ಶಿಯಾಗಿ ಎನ್ ಎಲ್ ಭರತ್ ರಾಜ್ ಮತ್ತಿತರ ಪದಾಧಿಕಾರಿಗಳು ಹಾಗೂ 10 ಜನರ ಸಮಿತಿ ಆಯ್ಕೆಯಾಯಿತು.

ಶ್ರೀಲಂಕಾ ಸ್ಥಳೀಯ ಚುನಾವಣೆಗಳಲ್ಲಿ ಆಳುವ ರಂಗಕ್ಕೆ ಜಯ

ಇತ್ತೀಚೆಗೆ ನಡೆದ ಶ್ರೀಲಂಕಾದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಅಲ್ಲಿನ ಆಳುವ 'ಜನತಾ ಒಕ್ಕೂಟ' ಭಾರಿ ಬಹುಮತ ಗಳಿಸಿದೆ. 238 ಸ್ಥಳೀಯ ಸಂಸ್ಥೆಗಳಲ್ಲಿ 194 ರಲ್ಲಿ ಆಳುವ 'ಜನತಾ ಒಕ್ಕೂಟ' ಜಯ ಗಳಿಸಿದೆ. ಕೇವಲ 43 ಸ್ಥಳೀಯ ಸಂಸ್ಥೆಗಳನ್ನು ಪ್ರಮುಖ ವಿರೋಧ ಪಕ್ಷ ಹಾಗೂ ಹಿಂದಿನ ಆಳುವ ಪಕ್ಷ UNP(ಯುನೈಟೆಡ್ ನ್ಯಾಶನಲ್ ಪಾರ್ಟಿ) ಗೆದ್ದುಕೊಂಡಿದೆ.

ನಾಮಪತ್ರ ಸಲ್ಲಿಸುತ್ತಲೇ ಭಾರಿ ಹಿಂಸಾಚಾರವನ್ನು ಕಂಡ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮತದಾನ ಹೆಚ್ಚು ಆಗಲಿಕ್ಕಿಲ್ಲ ಎಂಬ ನಿರೀಕ್ಷೆ ಹುಸಿ ಮಾಡಿ ಭಾರಿ ಮತದಾನ-ಸುಮಾರು ಶೇಕಡಾ 77 ಮತ ನಡೆಯಿತು. ವಿರೋಧ ಪಕ್ಷ UNP ಚುನಾವಣೆ ಅಕ್ರಮಗಳ ಆರೋಪ ಹಾಕಿ, ಕಾನೂನು ಕ್ರಮ ತೆಗೆದುಕೊಳ್ಳುವ ಬೆದರಿಕೆ ಹಾಕಿದೆ.

ಈ ಚುನಾವಣೆ ಗೆಲುವು ಆಳುವ ರಂಗಕ್ಕೆ ಭಾರಿ ಗೆಲುವಿನಂತೆ ಕಂಡರೂ ಅಂತಹ ಭಾರಿ ಗೆಲುವು ಅಲ್ಲ ಎಂದು ರಾಜಕೀಯ ವೀಕ್ಷಕರ ಅಭಿಪ್ರಾಯ, ಸಂಖ್ಯೆಯಲ್ಲಿ ವಿರೋಧಿ UNP ಗೆದ್ದ ಮುನಿಸಿಪಾಲಿಟಿಗಳು ಕಡಿಮೆಯಾದರೂ ರಾಜಧಾನಿ ಕೊಲಂಬೋ, ಕ್ಯಾಂಡಿ ನಗರ ಸೇರಿದಂತೆ ಹಲವಾರು ಪ್ರಮುಖ ನಗರಗಳನ್ನು UNP ಗೆದ್ದುಕೊಂಡಿದೆ. 'ಜನತಾ ಒಕ್ಕೂಟ' ಶೇಕಡಾ 49 ಮತಗಳಿಸಿದರೆ, ವಿರೋಧಿ UNP ಶೇಕಡಾ 41 ಮತ ಗಳಿಸಿದೆ. ಉಳಿದ ಸಣ್ಣ ಪಕ್ಷಗಳಾದ ಜನತಾ ವಿಮುಕ್ತಿ ಪೆರುಮಾನ(ಶೇಕಡ 3.7), ಮಹಾಜನ ಏಕತಾ ಪೆರುಮಾನ(ಶೇಕಡ1.5) ಉಳಿದ ಮತಗಳಿಸಿವೆ. ಆಳುವ 'ಜನತಾ ಒಕ್ಕೂಟ' ಕಳೆದ ಪಾರ್ಲಿಮೆಂಟರಿ ಹಾಗೂ ಅಧ್ಯಕ್ಷೀಯ ಚುನಾವಣೆಗಳಲ್ಲಿ ಗಳಿಸಿದ ಮತಕ್ಕಿಂತ ಕಡಿಮೆ ಮತ ಗಳಿಸಿದೆ. ಸಣ್ಣ ಪಕ್ಷಗಳಲ್ಲಿ ಸಿಲೋನ್ ವರ್ಕರ್ಸ್ ಕಾಂಗ್ರೆಸ್ ತಾನು ಸ್ಪರ್ಧಿಸಿದ ಎಲ್ಲಾ ಕ್ಷೇತ್ರಗಳಲ್ಲಿ ಸೋತಿದೆ. ಪ್ಲಾಂಟೇಶನ್ ಕಾರ್ಮಿಕರ ಪ್ರದೇಶಗಳಲ್ಲಿ ಜನ ಬೆಂಬಲ ಇರುವ ಈ ಪಕ್ಷದ ಸೋಲು ಅನಿರೀಕ್ಷಿತವಾಗಿತ್ತು.

ಚುನಾವಣೆಯ ಫಲಿತಾಂಶಗಳ ವಿಶ್ಲೇಷಣೆ ಏನೇ ಇರಲಿ ಶ್ರೀಲಂಕಾವನ್ನು ಕಿತ್ತುತಿನ್ನುತ್ತಿರುವ ಜನಾಂಗೀಯ ಸಮಸ್ಯೆಯನ್ನು ಪರಿಹರಿಸಲು ಚಂದ್ರಿಕಾ ಸರಕಾರಕ್ಕೆ ಸಾಕಷ್ಟು ಕೈಬಲಪಡಿಸಿವೆ. 13 ವರ್ಷಗಳಿಂದ ಶ್ರೀಲಂಕಾದಲ್ಲಿ ಈ ಆಂತರಿಕ ಯುದ್ಧ 50 ಸಾವಿರಕ್ಕೂ ಹೆಚ್ಚು ಪ್ರಾಣ ಹಾನಿಗೆ, ಭಾರಿ ಆರ್ಥಿಕ ಹಾನಿಗೆ ಕಾರಣವಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಈ ಸರಕಾರ ಏನು ಮಾಡುತ್ತದೆ ಎಂಬುದರ ಮೇಲೆ ದೇಶದ ಹಾಗೂ ಈ ಸರಕಾರದ ಭವಿಷ್ಯ ಅವಲಂಬಿಸಿದೆ. ಚಂದ್ರಿಕಾ ಸರಕಾರ ಜನಾಂಗೀಯ ಸಮಸ್ಯೆ ಪರಿಹರಿಸಲು ಯೋಜಿಸಿರುವ ವಿಕೇಂದ್ರೀಕರಣ ಪ್ಯಾಕೇಜನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಲು ಬೇಕಾದ (ಮೂರನೇ ಎರಡು ಭಾಗ) ಬಹುಮತ ಸರಕಾರಕ್ಕಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಬಹುಮತ ಬಂದರೂ, ಶೇಕಡಾ 50 ಕ್ಕಿಂತ ಹೆಚ್ಚಿನ ಮತ ಬಾರದಿರುವುದು ಸರಕಾರ ಈ ಬಗ್ಗೆ ಜನಮತ ಸಂಗ್ರಹಕ್ಕೆ ಮುಂದಾಗುವ ಬಗ್ಗೆ ಅನುಮಾನ ತೋರಬಹುದು.

ಲೋಕಸಂಚಾರ



ಶರತ್‌ಚಂದ್ರ

1996 ರಲ್ಲಿ ಆರ್ಥಿಕ ಕುಸಿತ ಅನುಭವಿಸಿದ ಜಪಾನ್

ಜಪಾನ್ ಬಂಡವಾಳಶಾಹಿ ವ್ಯವಸ್ಥೆಯ 'ಉತ್ಕೃಷ್ಟತೆ'ಗೆ ಉದಾಹರಣೆಯಾಗಿ ಸಾಮ್ರಾಜ್ಯಶಾಹಿ ಪ್ರಚಾರದಲ್ಲಿ ಬರುವ ದೇಶ. ಎರಡನೇ ಮಹಾಯುದ್ದದಲ್ಲಿ ಪೂರ್ಣ ನಿರ್ನಾಮವಾದರೂ 'ಫೀನಿಕ್ಸ್'ನಂತೆ ಎದ್ದು ಬಂದ ದೇಶ. ಪ್ರಾಕೃತಿಕ ಸಂಪನ್ಮೂಲಗಳು ಭಾರಿ ಕಡಿಮೆ ಇದ್ದೂ, ಪ್ರಕೃತಿ ಜನಜೀವನಕ್ಕೆ ಪ್ರತಿಕೂಲವಾದದ್ದು.

ಆದರೆ ಈ ಜಪಾನಿ ವ್ಯವಸ್ಥೆಯ 'ಮ್ಯಾಜಿಕ್' ಕುಸಿಯಲಾರಂಭಿಸಿ ಜಪಾನಿನ ರಫ್ತು ಶೇಕಡಾ 7.7 ರಷ್ಟು ಏರಿದರೆ, ಆಮದು ಶೇಕಡಾ 20.4 ರಷ್ಟು ಏರಿತು. ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಇಳಿಯುತ್ತಿರುವ ಅಮೆರಿಕದ ಜೊತೆ ವಾಣಿಜ್ಯ ಹೆಚ್ಚುವರಿ ಈ ಬಾರಿ ಶೇಕಡಾ 32.40 ರಷ್ಟು ಕುಸಿಯಿತು. ಪಶ್ಚಿಮ ಯುರೋಪು, ಏಶ್ಯಾಗಳ ಜತೆಗೂ ಜಪಾನಿನ ಒಟ್ಟಾರೆ ವ್ಯಾಪಾರ ಹೆಚ್ಚುವರಿ ಇಳಿದಿದೆ.

ಕಳೆದ ಮೂರು ವರ್ಷಗಳಿಂದ ಏರುತ್ತಿರುವ ನಿರುದ್ಯೋಗದ ದರ ಸಹ ಈ ವರೆಗಿನ ವಿಕ್ರಮವಾದ ಶೇಕಡಾ 3.40ಕ್ಕೆ ಏರಿತು. ಜಪಾನಿನ ಕೈಗಾರಿಕಾ ಉತ್ಪನ್ನ ಶೇಕಡಾ 2.4 ರಷ್ಟು ಇಳಿಯಿತು."

ಸುಮಾರು 15 ಸಾವಿರ ಕಂಪನಿಗಳು ದಿವಾಳಿಯಾಗಿ ಒಂದು ಕೋಟಿ ಯೆನ್(ಒಂದು ಲಕ್ಷ ಡಾಲರ್) ನಷ್ಟು ಭಾರಿ ಸಾಲ ತೀರಿಸದೆ ಹೋದವು. ಈ ಕಂಪನಿಗಳಿಂದಾದ ಒಟ್ಟಾರೆ ನಷ್ಟ 72 ಶತ ಕೋಟಿ ಡಾಲರುಗಳು. ಇದು ಎರಡನೇ ಮಹಾಯುದ್ದದ ನಂತರ ಜಪಾನಿನ ಎರಡನೇ ಅತಿದೊಡ್ಡ ಹಾನಿ. ಕಳೆದ ಆರು ವರ್ಷಗಳಿಂದ ಕ್ರಮವಾಗಿ, ದಿವಾಳಿಯಾಗುವ ಕಂಪನಿಗಳ ಸಂಖ್ಯೆ ಹತ್ತು ಸಾವಿರ ದಾಟಿದೆ.

'ಇದು ಯುರೋಪಿಯನ್ ಕಾರ್ಮಿಕರ ಸೌಹಾರ್ದತೆಯತ್ತ ಪಯಣದ ಆರಂಭ'

ಹೀಗೆಂದು ಉದ್ಗರಿಸಿದವರು ಬೆಲ್ಜಿಯಂನ ಕಮ್ಯುನಿಸ್ಟ್ ನಾಯಕತ್ವದ FTGB ಯೂನಿಯನ್‌ನ ನಾಯಕ ಮಿಶೆಲ್ ನೊಲೆಟ್. ಅವರು ಉದ್ಗರಿಸಿದ್ದು ಬೆಲ್ಜಿಯಂನ ರಾಜಧಾನಿ ಬ್ರಸ್ಸೆಲ್ಸ್‌ನಲ್ಲಿ ಯುರೋಪಿನ ಎಲ್ಲೆಡೆಯಿಂದ ಬಂದಿದ್ದ ಸಾವಿರಾರು ಕಾರ್ಮಿಕರು, ಟ್ರೇಡ್ ಯೂನಿಯನ್ ಕಾರ್ಯಕರ್ತರು, ಎಡ ರಾಜಕೀಯ ನಾಯಕರು ನಡೆಸಿದ ಭಾರೀ ಪ್ರದರ್ಶನ, ಮೆರವಣಿಗೆ ಬಗ್ಗೆ. ಸುಮಾರು 60 ಸಾವಿರಕ್ಕೂ ಹೆಚ್ಚು ಜನರು ಈ ಭಾರೀ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮಾರ್ಚ್ 16 ರಂದು ಭಾನುವಾರ ನಡೆದ ಈ ಭಾರಿ ಪ್ರದರ್ಶನ ಯೋಜಿಸಲು ತತ್‌ಕ್ಷಣದ ಕಾರಣ ಬೆಲ್ಜಿಯಂನಲ್ಲಿ ಪ್ರಸಿದ್ಧ ಫ್ರೆಂಚ್ ಕಾರು ತಯಾರಿಸುವ ಕಂಪನಿ ರೆನಾಲ್ಟ್ ತನ್ನ ಕಾರ್ಖಾನೆಯನ್ನು ಮುಚ್ಚಿದ್ದು. ರೆನಾಲ್ಟ್ ಕಾರ್ಖಾನೆಯ ಈ ನಿರ್ಧಾರವನ್ನು ಪ್ರತಿಭಟಿಸಲು ಈ ಪ್ರದರ್ಶನ ಯೋಜಿಸಲಾಗಿತ್ತು. ಆದರೆ ಈ ಪ್ರದರ್ಶನಕ್ಕೆ ಬಂದ ಪ್ರತಿಕ್ರಿಯೆ, ಈ ಪ್ರದರ್ಶನ ಯುರೋಪ್ ವ್ಯಾಪಿ ಮಹತ್ವವನ್ನು ಸಾರಿತು.

ಈ ಪ್ರದರ್ಶನಕ್ಕೆ ಬೆಲ್ಜಿಯಂನ ರೆನಾಲ್ಟ್ ಕಾರು ಕಾರ್ಖಾನೆಯ ಕಾರ್ಮಿಕರಲ್ಲದೆ ಇತರ ಸಾವಿರಾರು ಕಾರ್ಮಿಕರು ಬಂದಿದ್ದರು. ಬೆಲ್ಜಿಯಂ ಮಾತ್ರವಲ್ಲ ನೆರೆಯ(ಹಾಗೂ ರೆನಾಲ್ಟ್ ಕಂಪನಿಯ ನೆಲೆಯಾದ) ಫ್ರಾನ್ಸಿನಿಂದಲೂ ಸಾವಿರಾರು ಕಾರ್ಮಿಕರು ಬಂದಿದ್ದರು. ಇದಲ್ಲದೆ ಸ್ಪೈನ್, ಪೋರ್ಚುಗಲ್, ಜರ್ಮನಿ, ಲಕ್ಸಂಬರ್ಗ್, ನೆದರ್‌ಲ್ಯಾಂಡ್, ಇಟಲಿ, ಗ್ರೀಸ್, ಆಸ್ಟ್ರಿಯ, ಹಂಗರಿ, ಸ್ಲೊವೇನಿಯಾ ಮತ್ತು ಚೆಕ್ ಹೀಗೆ ಹೆಚ್ಚು ಕಡಿಮೆ ಯುರೋಪಿನ ಎಲ್ಲಾ ದೇಶಗಳಿಂದ ಸಾಕಷ್ಟು ದೊಡ್ಡ ಕಾರ್ಮಿಕರ ತುಕಡಿಗಳು ಬಂದಿದ್ದವು. ಈ ಎಲ್ಲಾ ದೇಶಗಳ ಕಾರ್ಮಿಕರ ಜತೆ, ಅವರ ಪ್ರಮುಖ ಟ್ರೇಡ್ ಯೂನಿಯನ್ ನಾಯಕರು, ಎಡ ರಾಜಕೀಯ ಪಕ್ಷಗಳ ನಾಯಕರುಗಳು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ಈ ಪ್ರದರ್ಶನ ಯುರೋಪಿನ ಕಾರ್ಮಿಕ ವರ್ಗದ ಐಕ್ಯತೆ, ಸೌಹಾರ್ದತೆ ಹಾಗೂ ರಾಜಕೀಯ ಶಕ್ತಿಯ ಪ್ರತೀಕವಾಗಿತ್ತು. ಪ್ರದರ್ಶನದಲ್ಲಿ ಫ್ರೆಂಚ್ ಸೋಶಲಿಸ್ಟ್ ಪಕ್ಷದ ಅಧ್ಯಕ್ಷ ಬೆಲ್ಜಿಯಂ ಸೋಶಲಿಸ್ಟ್ ಪಕ್ಷದ ಅಧ್ಯಕ್ಷ, ಫ್ರೆಂಚ್ ಕಮ್ಯುನಿಸ್ಟ್ ಟ್ರೇಡ್ ಯೂನಿಯನ್ ಕೇಂದ್ರ CGT ಯ ನಾಯಕ ಹಾಗೂ ಬೆಲ್ಜಿಯನ್ ಕಮ್ಯುನಿಸ್ಟ್ ಟ್ರೇಡ್ ಯೂನಿಯನ್ ಕೇಂದ್ರ FTGB ಯ ನಾಯಕ ಬಂದಿದ್ದರು.

1990 ರ ಮಾಸ್‌ಟ್ರಿಕ್ಟ್ ಒಪ್ಪಂದದಿಂದ ಆರಂಭವಾದ ಯುರೋಪನ್ನು ಒಂದು ಆರ್ಥಿಕ, ರಾಜಕೀಯ ಮಾರುಕಟ್ಟೆ ಮಾಡುವ ಪ್ರಕ್ರಿಯೆ ಕಾರ್ಮಿಕರು ಹಾಗೂ ಸಾಮಾನ್ಯ ಜನತೆಯ ಮೇಲೆ ಭಾರಿ ದುಷ್ಪರಿಣಾಮ ಬೀರಿದೆ. ಈ ಪ್ರಕ್ರಿಯೆಯ ಮುಖ್ಯ ಉದ್ದೇಶ ಯುರೋಪನ್ನು ಅಲ್ಲಿನ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳಿಗೆ, ಬ್ಯಾಂಕುಗಳಿಗೆ, ಹಣಕಾಸು ಸಂಸ್ಥೆಗಳಿಗೆ ನಿಯಂತ್ರಿಸಲು ಸುಲಭವಾಗುವ ರೀತಿಯಲ್ಲಿ ಒಂದು ದೊಡ್ಡ ಮಾರುಕಟ್ಟೆಯಾಗಿಸುವುದು. ಯುರೋಪಿನಲ್ಲಿ ಈ ಉದ್ದೇಶಕ್ಕಾಗಿ ಒಂದೇ ನಾನ್ಯ ತರಲು ಹಾಕಲಾಗಿರುವ ಷರತ್ತುಗಳ ಒತ್ತಡದಿಂದ, ಯುರೋಪಿನ ದೇಶಗಳ ಸರಕಾರಗಳು ಒಂದಾದರ ಮೇಲೊಂದರಂತೆ ಸಾಮಾಜಿಕ ಭದ್ರತೆ, ಜನಕಲ್ಯಾಣ ಯೋಜನೆಗಳಲ್ಲಿ ಹಾಗೂ ಉದ್ಯೋಗವಕಾಶಗಳನ್ನು ಕಡಿತಗೊಳಿಸುತ್ತಿವೆ. ಈ ಜನ-ವಿರೋಧಿ ಪ್ರಕ್ರಿಯೆಗೆ ಮೊದಲಿಂದಲೇ ದೇಶದ ಮಟ್ಟದಲ್ಲಿ ತೀವ್ರ ಪ್ರತಿಭಟನೆ ಕಂಡು ಬಂದಿದೆ. ಯುರೋಪಿನ ಐಕ್ಯತೆ ಏತಕ್ಕಾಗಿ? ಯಾರಿಗಾಗಿ? ಎಂಬುದು ಎಲ್ಲ ದೇಶಗಳಲ್ಲೂ ದೊಡ್ಡ ರಾಜಕೀಯ ಪ್ರಶ್ನೆಯಾಗಿದೆ. ಹಲವಾರು ಬಲಪಂಥೀಯ ಹಾಗೂ ಮಧ್ಯಮ ಪಂಥೀಯ ಪಕ್ಷಗಳು ಈ ಪ್ರಶ್ನೆಯ ಸಂದರ್ಭದಲ್ಲಿ ಭಾರಿ ಅಲ್ಲೋಲ ಕಲ್ಲೋಲಕ್ಕೆ ಒಳಗಾಗಿವೆ. 1995 ರಲ್ಲಿ ಫ್ರೆಂಚ್ ಕಾರ್ಮಿಕರು ಮೂರು ವಾರಗಳ ಭಾರೀ ಮುಷ್ಕರದಿಂದ ಊದಿದ ರಣಕಹಳೆ, ಎಲ್ಲಾ ದೇಶಗಳಲ್ಲೂ ಪ್ರತಿಧ್ವನಿತ ಗೊಂಡಿದ್ದು ಹಲವಾರು ಪ್ರಬಲ ದೀರ್ಘ ಮುಷ್ಕರ, ಪ್ರತಿಭಟನೆಗಳು ನಡೆದಿವೆ.

ಆದರೆ ಮಾರ್ಚ್ 16 ರ ಪ್ರದರ್ಶನ ಇದನ್ನು ಯುರೋಪ್ ವ್ಯಾಪಿ ಹೋರಾಟದ ಮೇಲು ಮಟ್ಟಕ್ಕೆ ತೆಗೆದುಕೊಂಡಿದೆ ಎನ್ನಬಹುದು. ಬ್ರಸ್ಸೆಲ್ಸ್ ಯುರೋಪಿನ ರಾಜಧಾನಿ ಮಾತ್ರವಲ್ಲ. ಯುರೋಪಿಯನ್ ಒಕ್ಕೂಟದ ರಾಜಧಾನಿ ಕೂಡಾ. ಆದ್ದರಿಂದ ಯುರೋಪ್ ವ್ಯಾಪಿ ಮಹತ್ವದ ಈ ಭಾರಿ ಪ್ರದರ್ಶನದ ಮೂಲಕ, ಯುರೋಪಿನ ಕಾರ್ಮಿಕ ವರ್ಗ ಬಂಡವಾಳ ಶಾಹಿ ವರ್ಗಕ್ಕೆ ಅದರ ರಾಜಧಾನಿಯಲ್ಲೇ ಭಾರಿ ಸವಾಲು ಹಾಕಿದೆ.

ಈ ಭಾರಿ ಪ್ರದರ್ಶನ ಫ್ರೆಂಚ್ ಹಾಗೂ ಬೆಲ್ಜಿಯಂ ಕಮ್ಯುನಿಸ್ಟ್ ಟ್ರೇಡ್ ಯೂನಿಯನ್ ನಾಯಕರು ಹೇಳುವ ಹಾಗೆ ಕೊನೆಯ ಕ್ರಮವಲ್ಲ. ಯುರೋಪ್ ವ್ಯಾಪಿ ಐಕ್ಯತೆ ಹಾಗೂ ಕಾರ್ಮಿಕ ಸೌಹಾರ್ದತೆಯತ್ತ ಮೊದಲ ಹೆಜ್ಜೆ'

ಹೆಲ್ಸಿಂಕಿ, ಮಾಸ್ಕೋ ಶೃಂಗಸಭೆಗಳು ಬದಲಾಗುತ್ತಿರುವ ಅಂತರಾಷ್ಟ್ರೀಯ ಪರಿಸ್ಥಿತಿ

ಫಿನ್‌ಲ್ಯಾಂಡ್‌ನ ರಾಜಧಾನಿ ಹೆಲ್ಸಿಂಕಿಯಲ್ಲಿ ನಡೆದ ಅಮೆರಿಕ-ರಶ್ಯ ಶೃಂಗ ಸಭೆ, ಶೀತ ಸಮರದ ನಂತರ ಅಂತರ್ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯನ್ನು ಎಲ್ಲರಿಗೂ ಮನದಟ್ಟು ಮಾಡಿದೆ. ಅಮೆರಿಕದ ಅಧ್ಯಕ್ಷ ಕ್ಲಿಂಟನ್ ಭಾರೀ ಒತ್ತಡ ಹೇರಿ ರಶ್ಯನ್ ಅಧ್ಯಕ್ಷ ಯೆಲ್ಸಿನ್ ನಾಟೋ ಪೂರ್ವಯುರೋಪಿನ ಮಾಜಿ ವಾರ್ಸಾ ಒಪ್ಪಂದದ ದೇಶಗಳನ್ನು ಒಳಗೊಳ್ಳುವುದಕ್ಕೆ ಒಪ್ಪುವಂತೆ ಮಾಡಿದರು. ಅಲ್ಲದೆ ಸ್ಟಾರ್ಟ್-2 ಎಂದು ಹೆಸರಿಸಲಾದ ಅಣ್ವಸ್ತ್ರ ನಿಶ್ಶಸ್ತ್ರೀಕರಣ ಒಪ್ಪಂದಕ್ಕೆ ರಶ್ಯನ್ ಪಾರ್ಲಿಮೆಂಟನ್ನು ಒಪ್ಪಿಸುವುದಾಗಿಯೂ ಯೆಲ್ಸಿನ್ ಒಪ್ಪಿದ್ದಾರೆ. ಈ ಎರಡೂ ವಿಷಯಗಳ ಬಗ್ಗೆ ರಶ್ಯನ್ ಪಾರ್ಲಿಮೆಂಟು ಹಾಗೂ ಜನತೆಯ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವಂತೆ ವೀರಾವೇಶದಿಂದ ಶೃಂಗಸಭೆಗೆ ಹೋಗುವ ಮೊದಲು ಮಾತನಾಡಿದ ಯೆಲ್ಸಿನ್ ಕ್ಲಿಂಟನ್ ಎದುರಲ್ಲಿ ಕುಂಯ್ ಕುಂಯ್ ಎಂದರಷ್ಟೆ.

ಈ ಎರಡೂ ಮಹಾ ಸೋಲಿನೊಂದಿಗೆ ಹಿಂದಿರುಗಿರುವ ಯೆಲ್ಸಿನ್ ಇದರ ಬದಲು ಇನ್ನೆರಡು ವಿಷಯಗಳಲ್ಲಿ ರಶ್ಯಕ್ಕೆ ಅನುಕೂಲವಾಗಿದೆ ಎಂದು ಮಾಸ ಮುಚ್ಚಲು ಹೇಳುತ್ತಾರೆ. ಅವೆಂದರೆ ಜಿ-7 ಗೆ ರಶ್ಯಕ್ಕೆ ಪ್ರವೇಶ ಹಾಗೂ ರಶ್ಯದಲ್ಲಿ ಅಮೆರಿಕನ್ ಬಂಡವಾಳ ಹೂಡುವ ಆರ್ಥಿಕ ನೆರವಿನ ಬಗ್ಗೆ ಶೃಂಗಸಭೆಯ ಮೊದಲು ಜಿ-7 ಗೆ(ಏಳು ಅಭಿವೃದ್ಧಿ ಬಂಡವಾಳಶಾಹಿ ದೇಶಗಳ ಗುಂಪು) ಸಮಾನ ಸದಸ್ಯನಾಗಿ ರಶ್ಯವನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಲಾಗಿತ್ತು. ಆದರೆ ಆಮೇಲೆ ನಡೆದದ್ದು ಬೇರೆ. ರಶ್ಯವನ್ನು ಸದಸ್ಯವಾಗಿ ತೆಗೆದುಕೊಂಡಿಲ್ಲ. ರಶ್ಯ ಸಹ(ಹೆಚ್ಚು ಕಡಿಮೆ ವೀಕ್ಷಕನಂತೆ) ಜಿ-7 ಸಭೆಗಳಲ್ಲಿ ಭಾಗವಹಿಸಬಹುದು. ಆರ್ಥಿಕ ನೆರವು ಹಾಗೂ ಬಂಡವಾಳ ಹೂಡಿಕೆ ಬಗೆಗೂ ಅಷ್ಟೆ. ಪೊಳ್ಳು ಆಶ್ವಾಸನೆ ಬಿಟ್ಟರೆ, ಏನೂ ಸ್ಪಷ್ಟ ಹೇಳಿಕೆಗಳಿಲ್ಲ.

ಈಗಾಗಲೇ ಯೆಲ್ಸಿನ್ ಶೃಂಗಸಭೆಯ ನಿರ್ಣಯಗಳ ಬಗ್ಗೆ ತೀವ್ರ ವಿರೋಧ ಎದುರಿಸುತ್ತಿದ್ದಾರೆ. ಯೆಲ್ಸಿನ್ ಸರಕಾರದೊಳಗೂ ಶೃಂಗಸಭೆಯ ಅಪಮಾನದಿಂದ ಕುದಿಯುತ್ತಿದ್ದಾರೆ. ನಮ್ಮ ಪ್ರಧಾನಿ ದೇವೇಗೌಡರು ಹಾಗೂ ವಿದೇಶ ಮಂತ್ರಿ ಗುಜ್ರಾಲ್‌ರ ಮಾಸ್ಕೋ ಭೇಟಿಯಲ್ಲಿ ಮೊದಲ ಬಾರಿಗೆ ಅಧಿಕೃತವಾಗಿ ರಶ್ಯಾ-ಚೀನಾ-ಭಾರತ ನಾಟೋಕ್ಕೆ ಪೂರ್ವದ ಪ್ರತಿಕ್ರಿಯೆಯಾಗಿ ಮಿಲಿಟರಿ ಕೂಟ ರಚಿಸುವ ಬಗ್ಗೆ ಊಹಾಪೋಹಗಳು ಹೆರಡಿದವು. ಭಾರತ ಈ ಊಹಾಪೋಹಗಳನ್ನು ಅಲ್ಲಗಳೆದರೂ, ರಶ್ಯ-ಚೀನಾ, ಈಗಾಗಲೇ ಮಿಲಿಟರಿ ಸಹಕಾರದತ್ತ ಸಾಗಿವೆ. ದೇವೇಗೌಡರ ಭೇಟಿ ಸಮಯದಲ್ಲೇ, ಚೀನಾದ ಉಪ ಪ್ರಧಾನಿ ಹಾಗೂ ವಿದೇಶ ಮಂತ್ರಿಯವರು ಮಾಸ್ಕೋ ಭೇಟಿ ನೀಡಿದರು. ಈ ಎರಡೂ ಸಭೆಗಳಲ್ಲಿ ಪೂರ್ವದತ್ತ ನಾಟೋದ ವಿಸ್ತಾರದ ಬಗ್ಗೆ ಹೆಲ್ಸಿಂಕಿ ಶೃಂಗಸಭೆಯಲ್ಲಿ ಮಾತುಕತೆ ವಿವರಗಳನ್ನು ಚರ್ಚಿಸಲಾಯಿತು. ಚೀನಿ ವಿದೇಶ ಮಂತ್ರಿಯವರು ಮುಂದಿನ ತಿಂಗಳು ಚೀನಿ ಅಧ್ಯಕ್ಷ ಹಾಗೂ ರಶ್ಯನ್ ಅಧ್ಯಕ್ಷರ ನಡುವೆ ನಡೆಯಲಿರುವ ಶೃಂಗಸಭೆಯ ತಯಾರಿಗಾಗೀ ಭೇಟಿ ನೀಡಿರುವುದು - ಹಲವಾರು ಪ್ರಮುಖ ಆರ್ಥಿಕ, ರಾಜಕೀಯ, ಒಪ್ಪಂದಗಳ ರೂಪದನ್ನು ನಿಷ್ಪಾದಿಸುವುದಲ್ಲದೆ, ಸಂಬಂಧವನ್ನು ಮೇಲಿನ ಹಂತಕ್ಕೆ ಒಯ್ಯುವ ಬಗ್ಗೆ ಸಿದ್ಧತೆಗಳಾಗುತ್ತಿವೆ. ಮಾಸ್ಕೋ ಶೃಂಗಸಭೆ ಹೆಲ್ಸಿಂಕಿ ಶೃಂಗಸಭೆಗೆ ಉತ್ತರವಾದೀತೆ?

ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ವಿವಾದ "ಅಪಾಯಕಾರಿ ಪ್ರವೃತ್ತಿಯೊಂದರ ಸೂಚಕ"

ಮಂಗಳೂರು: ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡದೆ ಹೋದರೆ ಈಗ ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಇರುವ ಮಹಿಳೆಯರ ಸಂಖ್ಯೆ ಮುಂದಿನ ದಿನಗಳಲ್ಲಿ ಮತ್ತಷ್ಟು ಕುಸಿಯುವ ಅಪಾಯವಿದೆ" ಎಂದು ಮಂಗಳ ಗಂಗೋತ್ರಿಯ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ|| ವಲೇರಿಯನ್ ರೋಡ್ರಿಗಸ್ ಎಚ್ಚರಿಸಿದ್ದಾರೆ.

ದ.ಕ.ದ ಜನವಾದಿ ಮಹಿಳಾ ಸಂಘಟನೆ ಮಂಗಳೂರು ವಿ.ವಿ.ಯ ರಾಜ್ಯಶಾಸ್ತ್ರ ವಿಭಾಗ, ಬುಧವಾರದಂದು ಜಂಟಿಯಾಗಿ ಸೆನೆಟ್ ಸಭಾಂಗಣದಲ್ಲಿ ಏರ್ಪಡಿಸಿದ್ದ "ಮಹಿಳಾ ಮೀಸಲಾತಿ ಮಸೂದೆ" ಕುರಿತ ಚರ್ಚೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ ಎಂದ ಅವರು ಸಂಸತ್ತಿನಲ್ಲಿ ಇದು ವಿವಾದಕ್ಕೆ ಗುರಿಯಾಗಿರುವುದು ಅಪಾಯಕಾರಿ ಪ್ರವೃತ್ತಿಯ ಸೂಚಕವಾಗಿದೆ ಎಂದರು.

"ಮೀಸಲಾತಿಯಿಂದಾಗಿ ಇಂದು ಸಮಾಜದ ಕೆಲವು ವರ್ಗಗಳು ಒಂದಿಷ್ಟಾದರೂ ಉತ್ತಮ ಸ್ಥಿತಿ ತಲುಪಿರುವ ಉದಾಹರಣೆ ನಮ್ಮ ಮುಂದೆ ಇರುವುದರಿಂದ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಅವರ ಹಕ್ಕಿನ ಸ್ಥಾನ ಕೊಡುವುದು ಸಮರ್ಥನೀಯ" ಎಂದೂ ಅವರು ಅಭಿಪ್ರಾಯ ಪಟ್ಟರು.

"ನೀತಿ ನಿರೂಪಣೆಯ ಸ್ಥಾನಗಳಲ್ಲಿ ಮಹಿಳೆಯರು ಭಾಗವಹಿಸುವುದು ಸಾಧ್ಯವಾದಾಗ ಸರಕಾರದ ಯೋಜನೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಹಾಗೂ ಚಿಂತನಾ ಕ್ರಮದಲ್ಲಿ ಮಹಿಳಾ ಪರ ದೃಷ್ಟಿಕೋನ ಮೂಡುವುದು ಸಾಧ್ಯವಾಗುತ್ತದೆ. ಆ ಮೂಲಕ ಮಹಿಳೆಯರ ಪ್ರಾಥಮಿಕ ಅಗತ್ಯಗಳ ಕಡೆಗೆ ಸರಕಾರ ಒಂದಿಷ್ಟಾದರೂ ಗಮನ ಹರಿಸುತ್ತದೆ ಎಂದು ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಸತ್ಯಾ.ಎಸ್ ಅಭಿಪ್ರಾಯಪಟ್ಟರು.

ಮಸೂದೆಯ ವಿರುದ್ಧ ಎದ್ದಿರುವ ಹಲವು ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

ಮಹಿಳೆಯರಿಗೆ ಮೀಸಲಾತಿಯ ಅಗತ್ಯ ಹೇಗೆ ಚಾರಿತ್ರಿಕ ಅಗತ್ಯವಾಗಿದೆ ಎಂದು ವಿವರಿಸಿದ ಪ್ರಜಾವಾಣಿಯ ಬಾತ್ಮೀದಾರರಾದ ಆರ್.ಪೂರ್ಣಿಮಾ ಅವರು "ಈ ಮಸೂದೆಗೆ ಸಂಸತ್ತಿನಲ್ಲಿ ಎದುರಾಗಿರುವ ಟೀಕೆ ಹಾಗೂ ವಿರೋಧಗಳು ನಮ್ಮ ಸಾಮಾಜಿಕ ಚಿಂತನೆಯ ಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ, ಒಂದು ಸಾಮಾಜಿಕ ವ್ಯಾಖ್ಯಾನವಾಗಿದೆ" ಎಂದರು.

ಆರಂಭದಲ್ಲಿ ಕನ್ನಡ ವಿಭಾಗದ ಹಿರಿಯ ಉಪನ್ಯಾಸಕಿ ಡಾ|| ಸಬಿಹಾ ಸ್ವಾಗತ ಮಾಡಿದರು.

ಓದಲೇಬೇಕಾದ ಪುಸ್ತಕ

1. **ಉಚಲ್ಯಾ:** ಮರಾಠಿ ಮೂಲ : ಲಕ್ಷ್ಮಣ ಗಾಯಕವಾಡ (ಬೆಲೆ ರೂ.20) ಅನುವಾದ: ಚಂದ್ರಕಾಂತ ಪೋಕಳೆ
2. **ಕುಣಿಯೇ ಘುಮಾ:** ಮರಾಠಿ ಮೂಲ, ಮಾಧವಿ ದೇಸಾಯಿ (ಬೆಲೆ ರೂ. 55) ಅನುವಾದ: ಚಂದ್ರಕಾಂತ ಪೋಕಳೆ

ಎರಡೂ ಪುಸ್ತಕದ ಪ್ರಕಾಶಕರು : ನವಕರ್ನಾಟಕ ಪ್ರಕಾಶನ

ಜೀವನ ಚರಿತ್ರೆಯಷ್ಟೇ ಅಲ್ಲ ಪ್ರಾತಿನಿಧಿಕ ಕೃತಿಯೂ ಕೂಡ

ಡಾ|| ಆರ್.ವಿ.ಭಂಡಾರಿ

ಮರಾಠಿ ಸಾಹಿತ್ಯದಲ್ಲಿ ಬಂದ ಆತ್ಮಕತೆಗಳು ಆ ಸಾಹಿತ್ಯದಲ್ಲಿ ಬಹಳ ಶಕ್ತಿಶಾಲಿ ಕೊಡುಗೆಗಳು ಎಂಬುದು ಈಗ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಅದು ಸಂಪೂರ್ಣವಾಗಿ ದಲಿತ ಸಾಹಿತ್ಯದ ಕೊಡುಗೆಯಾಗಿದೆ. 'ಉಚಲ್ಯಾ' ಕೂಡ ಅಂಥ ಪ್ರಕಾರದಿಂದ ಬಂದ ಕೃತಿಯಾಗಿದೆ. ಈ ಎಲ್ಲ ಆತ್ಮಕಥೆಗಳು 'ಮಹಾತ್ಮ'ರುಗಳ ಆತ್ಮಚರಿತ್ರೆಯಲ್ಲ. ಆದರೆ ಅವು ಮಹತ್ತರವಾದ ಕೃತಿ ಎಂಬುದರಲ್ಲಿ ಸಂದೇಹವಿಲ್ಲ.

ಪ್ರಸ್ತುತ ಕೃತಿಯ ಲೇಖಕ ಲಕ್ಷ್ಮಣ ಗಾಯಕವಾಡ. ಇವರು ತಮ್ಮ ಜೀವನ ಚರಿತ್ರೆಯನ್ನು ತೆರೆದ ಮನಸ್ಸಿನಿಂದ ನಿವೇದಿಸಿದ್ದಾರೆ. ಆದರೆ ಇದು ಕೇವಲ ಅವರ ವೈಯಕ್ತಿಕ ಜೀವನ ಚರಿತ್ರೆಯಾಗಿರದೆ ಒಂದು ಜನಾಂಗದ ಪ್ರಾತಿನಿಧಿಕ ಕೃತಿಯಾಗಿದೆ.

'ಉಚಲ್ಯಾ' ಎಂದರೆ ಗಂಟುಕಳ್ಳರು ಎಂದು. ಇಡೀ ಜನಾಂಗ ಇಂಥ ಒಂದು ಉದ್ಯೋಗವನ್ನು ವೃತ್ತಿ ಕೊಡುಗೆಯೆಂದೇ ಸ್ವೀಕರಿಸಿತ್ತು. ಇವರನ್ನು ಬ್ರಿಟಿಷ್ ಸರಕಾರ 'ಕ್ರಿಮಿನಲ್ ಟ್ರೈಬ್'ಎಂದೇ ಗುರುತಿಸುತ್ತಿತ್ತು. ಅಲ್ಲಿಯ ಹಸಿವು, ಬಡತನ, ಅವರ ಮೇಲಾಗುತ್ತಿರುವ ಪೋಲೀಸರ ದೌರ್ಜನ್ಯ, ಮಾನ್ಯವಂತರು ಮಾಡುವ ಅಪಮಾನ, ಹೃದಯ ವೇಧಕವಾಗಿದೆ. ಎಷ್ಟು ಬಡತನವಿರಬಹುದು, ಹೇಗೆ ಬಾಳಿರಬಹುದು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಕನ್ನಡ ಸಾಹಿತ್ಯದಲ್ಲಂತೂ ಕುಂ.ವಿ.ಯವರ ಕಥೆಗಳಲ್ಲಿ ಬಿಟ್ಟರೆ ಇಂಥಾದ್ದೊಂದು ಹೊಳಹನ್ನು ಕೊಡುವ ಕೃತಿಗಳೇ ಇಲ್ಲ. ಆದರೆ ಪ್ರಗತಿಶೀಲ ಲೇಖಕರಾದ ದಿ.ಬಸವರಾಜ ಕಟ್ಟೀಮನಿ ಮಾತ್ರ ಇಂಥ ಒಂದು ಕಾದಂಬರಿ ಕೊಟ್ಟಿದ್ದಾರೆ. ಆದರೆ ಇದು ಕಾದಂಬರಿ ಅಲ್ಲ, ನಿಜ ಚರಿತ್ರೆ.

ಒಂದು ಜನಾಂಗ ಇಂಥ ಹೀನ ಕೃತ್ಯಗಳ ಗುರಿಯಾಗಲು ಯಾವ ದೈವಿಕ ಕಾರಣವೂ ಇಲ್ಲ ಅಥವಾ ಸ್ವಯಂಕೃತ ಅಪರಾಧವೂ ಅಲ್ಲ. ಇದು ಒಂದು ಸಮಾಜ ವ್ಯವಸ್ಥೆಯಲ್ಲಿ ಸಂಭವಿಸಿದ ಆಂತರಿಕ ಸಂಗತಿಯಾಗಿದೆ. ಈ ಕೃತಿ ಇಂಥ ವ್ಯವಸ್ಥೆ ಮಾಡಿದ ಅತ್ಯಂತ ಹೀನ ಹಿಂಸೆಯ ವಿಶ್ಲೇಷಣೆಯನ್ನು ಕೊಡುತ್ತದೆ.

ಇದೇ ರೀತಿ ಇದೇ ವ್ಯವಸ್ಥೆಯಲ್ಲಿ ಗಾಯಕವಾಡ ಮುಖಾಂತರ ಮೂಡಿಬರುವ ಪ್ರತಿಭಟನಾ ಹೋರಾಟ ಇಲ್ಲಿಯ ಮಹತ್ವದ ಅಂಶವಾಗಿದೆ. ಅದು ಅವರಿಗೆ ಎಸ್‌ಎಸ್‌ಎಲ್‌ಸಿ ತನಕ ಶಾಲಾಭ್ಯಾಸ ಆದುದರಿಂದಲೇ ಸಾಧ್ಯವಾಗಿದೆ.

ಈ ಕೃತಿ ದರ್ಶನ ಮಾಡಿಸುವ ಮತ್ತೊಂದು ವಿಶೇಷ ಸಂಗತಿಯೆಂದರೆ ಹೆಣ್ಣಿನ ಶೋಷಣೆಯ ಪೋಷಣೆ. ಹೆಣ್ಣು ಗಂಡಿನಷ್ಟೇ ಸಾಹಸ, ಜವಾಬ್ದಾರಿಯಿಂದ ಜೀವನ ನಿರ್ವಹಣೆ ಮಾಡುತ್ತಿರುವುದಾದರೂ ಅವಳು ಅನುಭವಿಸುವ ಕಷ್ಟ ಕೋಟಲೆ ಗಂಡಸಿಗೂ ಮೀರಿದ್ದು. ಇಂಥ ದರಿದ್ರ ಜೀವನದಲ್ಲಿ ಕೂಡಾ ಗಂಡಸಿನದೇ ಯಜಮಾನ್ಯ. ಈ ಯಜಮಾನ್ಯದ ಮುಖಾಂತರ ಅವಳ ಬದುಕು ಕಣ್ಣೀರಿನಿಂದ ಒದ್ದೆಯಾದದ್ದೇ ಆಗಿದೆ.

ಗಿರಣಿ ಕಾರ್ಮಿಕರಿಗೆ ಆಗುವ ಅನ್ಯಾಯವನ್ನು, ಮಕ್ಕಳ ಮೇಲೆ ಆಗುವ ಶೋಷಣೆಯು ಕೂಡಾ ಇಲ್ಲಿಯ ನಿರೂಪಣೆ ಒಳಗೊಳ್ಳುತ್ತದೆ. ಆದ್ದರಿಂದಲೇ ಲಕ್ಷ್ಮಣ ಗಾಯಕವಾಡರ ಆತ್ಮ ಚರಿತ್ರೆ ಒಂದು ಸಮಾಜ ವ್ಯವಸ್ಥೆಯ ಚರಿತ್ರೆ ಕೂಡಾ ಆಗಿರುವುದು ಇಲ್ಲಿಯ ಮಹತ್ವ.

ನೇರ ಮಾತು, ಇದು ತನ್ನದು, ಇದು ಪರರದು ಎಂಬ ಮುಚ್ಚು ಮರೆಯಿಲ್ಲದೆ ಸಂಗತಿಗಳನ್ನು ನಿರೂಪಿಸುವುದು ಅರ್ಥವತ್ತಾಗಿದೆ.

****

ಎರಡನೆಯ ಕೃತಿ ಮಾಧವಿ ದೇಸಾಯಿಯವರ 'ಕುಣಿಯೇ ಘುಮಾ' ಇದು ದಲಿತರ ಜೀವನ ಚರಿತೆಯಲ್ಲ, ಆದರೆ ಒಂದು ಹೆಣ್ಣಿನದು. ಅದರಲ್ಲೂ ಉತ್ತಮ ಸಮಾಜದ ಸ್ತರದಿಂದ ಬಂದಂತಹದು. ಆದರೆ 'ಉಚಲ್ಯಾ' ದಲ್ಲಿಯ ಅತ್ಯಂತ ಕೆಳಸ್ತರದ ಹೆಂಗಸರ ವೇದನೆಗೂ ಈ ಉತ್ತಮ ದೇಸಾಯಿ-ಸರಂಜಾಮಿ ಸಮಾಜದ ಹೆಣ್ಣಿನ ವೇದನೆಗೂ ಆಂತರಿಕವಾಗಿ ಸಂಬಂಧ ಹೊಂದಿದೆ.

'ಕುಣಿಯೇ ಘುಮಾ' ಎಂದರೆ ಮರಾಠಿ ಸಂಪ್ರದಾಯದಲ್ಲಿ ಒಂದು ನೃತ್ಯ. ಮಧ್ಯದಲ್ಲಿ ಓರ್ವ ಹೆಣ್ಣು ಇರುತ್ತಾಳೆ. ಸುತ್ತಲೂ ಬೇರೆ ಬೇರೆ ಹೆಣ್ಣುಗಳು ಇರುತ್ತಾರೆ. ಅವರು ಕೋಟೆ ಕಟ್ಟಿಕೊಂಡು ಮಧ್ಯದವಳನ್ನು ಕುಣಿಸುತ್ತಾರೆ. ಮಧ್ಯದಲ್ಲಿರುವವಳೇ ಘುಮಾ. ಅವಳನ್ನು ಪ್ರತಿಮೆಯಾಗಿ ಲೇಖಕಿ ಬಳಸಿಕೊಂಡಿದ್ದಾರೆ. ಫ್ಲಾಷ್‌ಬ್ಯಾಕ್ ತಂತ್ರದಲ್ಲಿ ಆತ್ಮ ಚರಿತ್ರೆ ನಿರೂಪಿತವಾಗಿದೆ. ಒಂದು ಕಾದಂಬರಿಗೆ ಪ್ರಾಪ್ತವಾಗುವ ಕಲಾತ್ಮಕ ವಿನ್ಯಾಸ ಇದಕ್ಕೆ ದಕ್ಕಿದೆ.

ಮಾಧವಿ ತಂದೆ ಸಿನಿಮಾ ನಿರ್ದೇಶಕ, ಶ್ರೀಮಂತಿಕೆಯಿದೆ. ಈತನಿಗೆ ಮೂವರು ಹೆಂಡಂದಿರು. ಈ ಮಧ್ಯೆ ಲೇಖಕಿ ಒಂದು ರೀತಿಯ ಏಕಾಂತದಲ್ಲಿ ಬೆಳೆಯುತ್ತಾರೆ. ಆಶ್ರಮ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಾರೆ. ದೇವರು, ಅಹಿಂಸೆ, ಸಾತ್ವಿಕತೆ ಅವರ ದಾರಿಯಾಗುತ್ತದೆ.

ಮದುವೆಯಾಗಬೇಕೆಂಬ ಪ್ರಜ್ಞೆ ಇಲ್ಲದಾಗಲೇ ಮದುವೆಯಾಗುತ್ತದೆ. ಅಲ್ಲಿ ಸಂಸಾರ ಸಾಗಿಸುವಲ್ಲಿ ಅವರು ದುಡಿಯುತ್ತಾರೆ. ಮೂರು ಮಕ್ಕಳು ಆದ ಮೇಲೆ ಆಕಸ್ಮಾತ್ ಗಂಡ ಸಾಯುತ್ತಾನೆ. ನಂತರದ ಅನಾಥ ಸ್ಥಿತಿಯಲ್ಲಿ ಎರಡನೇ ಮದುವೆಯಾಗುತ್ತಾರೆ. ಅವರಾದರೋ ಹೆಸರಾಂತ ಸಾಹಿತಿ ರಣಜಿತ್ ದೇಸಾಯಿ. ಇವರಿಗೆ ಪದ್ಮಶ್ರೀ ಪ್ರಶಸ್ತಿ ಕೂಡ ಬಂದಿದೆ. ಕಾದಂಬರಿ ಪಾತ್ರಗಳಲ್ಲಿ ಸ್ತ್ರೀಯರಿಗೆ ಆಗುವ ದೌರ್ಜನ್ಯವನ್ನು ಹೃದಯ ನಾಟುವಂತೆ ಚಿತ್ರಿಸಿದ್ದಾರೆ. ಆದರೆ ಇಂಥಾ ಮಹಾ ಲೇಖಕ ಸ್ವತಃ ತನ್ನ ಹೆಂಡಂದಿರ(ಇದುವರೆಗೂ ಎರಡು ಹೆಂಡಂದಿರು) ಮೇಲೆ ಎಸಗುವ ದೌರ್ಜನ್ಯ ಅತ್ಯಂತ ಹೇಯವಾದುದು.

ಸರಂಜಾಮಿ ಪದ್ಧತಿಯಲ್ಲಿ ಬಂದ ಅಹಂಕಾರ, ದರ್ಪ, ನೀಚತನ ಎಲ್ಲವೂ ಇಲ್ಲಿ ಚಿತ್ರಿತ. ಆದ್ದರಿಂದ ಇದು ಮರಾಠಿಯಲ್ಲಿ ಕೋಲಾಹಲ ಎಬ್ಬಿಸಿದ ಕೃತಿ.

ರಣಜಿತ್ ದೇಸಾಯಿ ಮಟ್ಟದ ಜನಪ್ರಿಯರ ಹೊಟ್ಟೆ ಕಿಚ್ಚು, ಮತ್ತೆ ಮತ್ತೆ ಹಾಸಿಗೆ ಆಸ್ತಿ ಉಂಟುಮಾಡುವ ಹೃದಯ ಹೀನ ನಡತೆ ಇವೆಲ್ಲ ಈ ಕೃತಿಯ ಹೆಚ್ಚಳ.

ಈ ಎರಡೂ ಕೃತಿಗಳನ್ನು ಕನ್ನಡಕ್ಕೆ ಸರಳವಾಗಿ, ಸುಂದರವಾಗಿ ಅನುವಾದಿಸಿದವರು ಶ್ರೀಚಂದ್ರಕಾಂತ ಪೋಕಳೆ. ಇಂಥ ಅಮೂಲ್ಯ ಕೃತಿಗಳನ್ನು ಅನುವಾದ ಮಾಡಿದ ಪೋಕಳೆ ನಮ್ಮೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಅಣಕ — ಶರತ್‌ಚಂದ್ರ

ತ್ರಿವಿಕ್ರಮ, ಬೇತಾಳ ಮತ್ತು......!

'ಅದೋ ದೇವೇಗೌಡರ ಸರಕಾರ ಬಿತ್ತು' 'ಇದೋ ದೇವೇಗೌಡರ ಸರಕಾರ ಬಿತ್ತು' ಎಂದು ಹೇಳುತ್ತಾ ಏನೂ ಆಗದ ಕೈ ಚೆಲ್ಲಿ ಕೂತ ಬಿಜೆಪಿಯಂತೆ ಆಗದೆ, ಹೇಗಾದರೂ ಮಾಡಿ ಬೇತಾಳವನ್ನು ಹಿಡಿದು ತರಲೇಬೇಕು ಎಂದು ಛಲ ಬಿಡದ ತ್ರಿವಿಕ್ರಮನು ಮತ್ತೆ ಮುಳ್ಳು ಮುತ್ತುಗದ ಮರದ ಬಳಿ ಪಾರ್ಲಿಮೆಂಟಿನ ಕಡೆ ನಡೆಯತೊಡಗಿದನು. ಶವ ಅಲುಗಾಡಿ 'ಅಯ್ಯಾ ರಾಜನೇ, ದೇಶದಲ್ಲಿ ಭಾರಿ ರಾಜಕೀಯ ಬಿಕ್ಕಟ್ಟು ಬಂದಿದ್ದು, ನಿನಗೆ ಗೊತ್ತೇ ಇದೆ. ಆ ಬಗ್ಗೆ ನಿನಗೆ ಹೇಳುತ್ತಾ ಹೋಗುತ್ತೇನೆ. ನೀನು ಕೇಳುತ್ತಾ ಹೋಗು. ನಿನ್ನ ಮಾರ್ಗಾಯಾಸವೂ ನೀಗುತ್ತದೆ" ಎಂದು ಈಗಿನ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಹೇಳಲು ಉಪಕ್ರಮಿಸಿತು. ತ್ರಿವಿಕ್ರಮ ರಾಜನು ತನ್ನ ಕಿವಿಯನ್ನು ಲೌಡ್ ಸ್ಪೀಕರ್‌ನಂತೆ ಹಿಗ್ಗಿಸಿ- ಆಲಿಸತೊಡಗಿದನು - ಬಾಯಿ ಮುಚ್ಚಿಕೊಂಡು.

"ಎಲೈ ಮಹಾರಾಜನೇ, ಕಾಂಗ್ರೆಸ್ ಬಿಜೆಪಿಯಂತಹ ಕೋಮುವಾದಿ ಪಾರ್ಟಿ ಅಧಿಕಾರ ವಹಿಸಿ ದೇಶದಲ್ಲಿ ಜಾತ್ಯಾತೀತತೆಗೆ ಧಕ್ಕೆ ಬರದಂತೆ ಸಂಯುಕ್ತ ರಂಗದ ದೇವೇಗೌಡರ ನಾಯಕತ್ವದ ಸರಕಾರಕ್ಕೆ ಬೇಷರತ್ತಾಗಿ, ಹೊರಗಡೆಯಿಂದ ಬೆಂಬಲ ಕೊಡಲು ನಿರ್ಧರಿಸಿದ್ದು, ಸರಿಯಷ್ಟೆ. ಆದರೆ ಇತ್ತೀಚೆಗೆ ಅಂತಹ ಆಕಾಶ ಕಳಚಿಬೀಳುವ ಪ್ರಮಾದ ಏನೂ ಸಂಭವಿಸದೆ, ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿಯವರು ಹಠತ್ತಾಗಿ ಸರಕಾರಕ್ಕೆ ಕೊಟ್ಟ ಬೆಂಬಲ ಹಿಂತೆಗೆದುಕೊಂಡದ್ದು ನಿನಗೆ ಗೊತ್ತಿರಬೇಕು.

"ಸೀತಾರಾಂ ಕೇಸರಿಯವರು ಹಳೇ ಜಮಾನದ ನಿಷ್ಠ ಕಾಂಗ್ರೆಸ್ಸಿಗರು. ಬೇರೆಯವರಿಗೆ ಟೋಪಿ ಹಾಕುವ ಕಾಂಗ್ರೆಸ್ಸಿಗರು ಹೆಚ್ಚಾಗಿರುವ ಈ ಜಮಾನದಲ್ಲಿ ತಾವೇ ಟೋಪಿ ಹಾಕಿಕೊಂಡು ತಿರುಗುವವರು. ಅವರ ಈ ನಿರ್ಧಾರಕ್ಕೆ ಕಾರಣವೇನಿರಬಹುದು? ತನಗೆ ಬಂದ ಗಂಡಾಂತರ ಪಕ್ಷದ ಗಂಡಾಂತರ ಎನ್ನುವ, ಪಕ್ಷಕ್ಕೆ ಬಂದ ಗಂಡಾಂತರ ದೇಶಕ್ಕೆ ಬಂದ ಗಂಡಾಂತರ ಎಂದು ತಿಳಿಯುವ ವಿಶಾಲ ಮನೋಭಾವದ ದೀರ್ಘ ಪರಂಪರೆ ಇರುವ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷ ಸೀತಾರಾಂ ಕೇಸರಿಯವರು ಇಂತಹ ನಿರ್ಧಾರಕ್ಕೆ ಬರಲು ಏನೋ ಬಲವಾದ ಕಾರಣವಿರಬೇಕು. ನನಗೆ ನಾಲ್ಕೇ ಕಾರಣಗಳು ಕಾಣುತ್ತಿರುವುದು.

"ಒಂದು-ಕರ್ನಾಟಕದ ಮುಖ್ಯಮಂತ್ರಿ ಕುಂತ್ರೆ ನಿಂತ್ರೆ ಕಾಂಗ್ರೆಸ್ಸಿನವರಿಗೆ ತಾಕತ್ತಿದ್ದರೆ ಸಂಯುಕ್ತರಂಗ ಸರಕಾರಕ್ಕೆ ಕೊಟ್ಟಿರುವ ಬೆಂಬಲ ವಾಪಸ್ಸು ತೆಗೆದುಕೊಳ್ಳಿ ನೋಡೋಣ ಎಂದು ರೇಗಿಸುವುದರಿಂದ ರೋಸಿ ಹೋಗಿರಬೇಕು.

ಎರಡು-ಕಾಂಗ್ರೆಸ್‌ನ ಮಾಜಿ ಮಂತ್ರಿ ಕಲ್ಪನಾಥ ರಾಯ್‌ರನ್ನು ಕೋರ್ಟು ಹತ್ತು ವರ್ಷ ಜೈಲಿಗೆ ಕಳಿಸಿರುವುದು ಕಾಂಗ್ರೆಸ್ಸಿಗರಿಗೆಲ್ಲಾ ಆತ್ಮವಿಶ್ವಾಸ ಕುಂದಿಸಿರಬಹುದು, ನಮ್ಮ ಪಕ್ಷ 'ಪವರ್'ನಲ್ಲಿ ಇಲ್ಲದಿದ್ದರೂ 'ಪವರ್‌ಫುಲ್' ಆಗಿದೆ ಎಂದು ತೋರಿಸುವ ತುರ್ತು, ಬಂದಿರಬೇಕು.

ಮೂರು- ಜೆಎಂಎಂ ಲಂಚ ಹಗರಣದಲ್ಲಿ ಈಗ ಒಬ್ಬ ಅಪಾದಿತ ಅಪ್ರೂವರ್ ಆಗಿರುವುದನ್ನು ನೋಡಿದರೆ ಒಬ್ಬೊಬ್ಬರಾಗಿ ಎಲ್ಲಾ ಕಾಂಗ್ರೆಸ್ ಎಂಪಿಗಳು ಜೈಲಿಗೆ ಹೋಗಿ ತಮ್ಮ ಸದಸ್ಯತ್ವ ಕಳೆದುಕೊಳ್ಳಬಹುದು.

ನಾಲ್ಕು- ಹೀಗೆ ಈ ಸಂಯುಕ್ತ ರಂಗ ಸರಕಾರ ಮುಂದುವರಿದರೆ, ಜನ ಕಾಂಗ್ರೆಸ್ ಅಂತ ಒಂದು ಪಕ್ಷ ಇದೆ ಎಂದು ಮರೆಯಬಹುದು. ಈ ದೇಶದ ಸ್ವಾತಂತ್ರ್ಯಾನಂತರ ಈ 50 ವರ್ಷಗಳಲ್ಲಿ 44 ವರ್ಷ ಆಳಿದ್ದು ಸಾಕು. ಇನ್ನು ಮೇಲೆ ಬೇರೆ ಪಕ್ಷಕ್ಕೆ ಛಾನ್ಸು ಕೊಡೋಣ ಎನ್ನಬಹುದು ಎಂಬ ಭಯ ಶುರುವಾದದ್ದು.

ಎಲೈ ಮಹಾರಾಜನೇ, ಈ ಮೇಲಿನ ನಾಲ್ಕು ಕಾರಣಗಳಲ್ಲಿ ಯಾವುದು ಸರಿ ಎಂದು ದೊಡ್ಡ ಕ್ಲಾಸು ಹಾಕದೆ, ಒಂದೇ ಶಬ್ದದಲ್ಲಿ ಹೇಳು-ಒಂದಾ, ಎರಡಾ, ಮೂರಾ, ನಾಲ್ಕಾ ಅಂತ. ನೀನು ಸಮಾಧಾನಕರ ಉತ್ತರ ಹೇಳದಿದ್ದಲ್ಲಿ ನಿನ್ನ ತಲೆ ಸಾವಿರ ಹೋಳಾದೀತು" ಎಂದು ಪಾರ್ಲಿಮೆಂಟಿನ ಬಳಿ ಬರುತ್ತಿದ್ದಂತೆ ಮೌನವಾಯಿತು.

ರಾಜ ತ್ರಿವಿಕ್ರಮ ತನ್ನ ಹಳೇ ಕತ್ತಿ ಝಳಪಿಸುತ್ತಾ ಗಹಗಹಿಸಿ ನಕ್ಕ... ಸುಮ್ಮನಾಗಿ ಬಿಟ್ಟ. ಬೇತಾಳ ಮಿಕಿ ಮಿಕಿ ನೋಡಿತು. ಬೇತಾಳ ಸುಮ್ಮನಿರಲಾರದೆ 'ಒಂದೇ ಶಬ್ದದಲ್ಲಿ ಹೇಳಲಿಕ್ಕಾಗದೆ ಒದ್ದಾಡ್ತೀಯಾ, ವಿವರವಾಗಿ ಹೇಳು ಮಾರಾಯ ಪರವಾಗಿಲ್ಲ' ಎಂದರೂ ತ್ರಿವಿಕ್ರಮ ಪುನಃ ನಕ್ಕು ಎರಡು ಬೆರಳು ತೋರಿಸಿದ. ಬೇತಾಳ 'ಉತ್ತರ ಎರಡು' ಎಂದಿತು. ತ್ರಿವಿಕ್ರಮ ತಲೆಯಲ್ಲಾಡಿಸಿ ಅಲ್ಲ ಎಂದ. 'ಬಾಯಿ ಬಿಟ್ಟು ಹೇಳು ಮಾರಾಯ- ಸೀತಾರಾಂ ಕೇಸರಿಯವರು ಯಾಕೆ ಹಿಂಗ ಮಾಡಿದರು? ದೇಶಕ್ಕೆ ಅವರ ಸಂದೇಶ ಏನು? ಎಂದಿತು ಬೇತಾಳ

ಆಗ ರಾಜ ತ್ರಿವಿಕ್ರಮ ಬಾಯಿಬಿಟ್ಟ - 'ಏಪ್ರಿಲ್ ಫೂಲ್!!!'

ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ

ಪು: 5ರಿಂದ

ಭಾರತೀಯ ಪತ್ರಿಕೋದ್ಯಮದ ಇಂದಿನ ಚಿತ್ರ ಈ ಮಾತನ್ನು ಸಾಬೀತುಗೊಳಿಸಿದೆ. ಒಂದೊಂದೇ ಪತ್ರಿಕೆಗಳು ಸೆಣಸಲಾರದೆ ಸೋಲುತ್ತಿದ್ದಂತೆ ಅದನ್ನು ಕೊಳ್ಳಲು ಭಾರತದ ಮಹಾನ್ ಬಂಡವಾಳಗಾರರು ಮುಗಿಬೀಳುತ್ತಿದ್ದಾರೆ. ಇಂದಿನ ಭಾರತದಲ್ಲಿ ಕೆಲವು ಬೆರಳೆಣಿಕೆಯ ಪತ್ರಿಕೆಗಳನ್ನು ಬಿಟ್ಟರೆ ಇನ್ನುಳಿದ ಎಲ್ಲವೂ ಇರುವುದು ಈ ಭಾರತದ ಆರ್ಥಿಕತೆಯನ್ನು ನಿಯಂತ್ರಿಸುತ್ತಿರುವ ಕೆಲವೇ ಕೆಲವು ಬಂಡವಾಳಗಾರರ ಮಡಿಲಲ್ಲಿ. ಈ ಬಂಡವಾಳಗಾರರು ಇಂದು ಜನಾಭಿಪ್ರಾಯ ರೂಪಿಸುವ ರೂವಾರಿಗಳೂ ಹೌದು. ಇವರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಲು ಕಲಿಸುವುದು ಈ ಪತ್ರಿಕೆಗಳ ಈ ಮಾಲೀಕರ ಉದ್ದೇಶ.

"ಭಾರತದಲ್ಲಿ ಪತ್ರಿಕೋದ್ಯಮ ಹಿಂದೆ ವೃತ್ತಿಯಾಗಿತ್ತು. ಆದರೆ ಇಂದು ಅದು ವ್ಯಾಪಾರವಾಗಿದೆ" ಎಂದು ಅಂಬೇಡ್ಕರ್ ವಿಷಾದದಿಂದ ನುಡಿದಿದ್ದರು. "ಭಾರತದ ಪತ್ರಿಕೆಗಳು ತಮ್ಮನ್ನು ಜನತೆಯ ಹೊಣೆಗಾರಿಕೆಯ ಸಲಹೆಗಾರರಾಗಿ ಭಾವಿಸಿಲ್ಲ ಎಂದರು. ಅಂದು ಅಂತೆಯೇ ಈ ಮುಂದೂ ಆ ಲಕ್ಷಣಗಳು ಪತ್ರಿಕೋದ್ಯಮದಲ್ಲಿ ಸ್ಥಾಯಿಯಾಗಿ ಉಳಿದುಕೊಂಡೇ ಬಂದಿವೆ.

ಇತ್ತೀಚಿನ ಮೀಸಲಾತಿ ವಿಚಾರದಲ್ಲಿ ಭಾರತದ ಗಣ್ಯ ಪತ್ರಿಕೆಗಳು ನಡೆದುಕೊಂಡ ರೀತಿಯನ್ನು ಗಮನಿಸಿದರೆ ಸಾಕು ಈ ಅಂಶ ಹೊರಬೀಳುತ್ತದೆ. ಮೇಲ್ವರ್ಗದ ಕೆಲವೇ ವಿದ್ಯಾವಂತರ ಕೈಯಲ್ಲಿ ಸಿಕ್ಕಿರುವ ಪತ್ರಿಕೆಗಳು ಜನತೆಯ ಅಭಿಪ್ರಾಯವನ್ನೇ ಬದಲು ಮಾಡುವ ಹಾದಿಗೆ ಇಳಿದವು. ಹಲವು ತುಳಿತಕ್ಕೊಳಗಾದ ಜೀವಗಳ ಬದುಕಿಗೆ ಭದ್ರತೆ ತರುವ ಮಂಡಲ್ ಆಯೋಗದ ವರದಿಯ ಜಾರಿ ಒಂದು ಜನಪರ ಸರಕಾರದ ಭದ್ರತೆಗೇ ಆತಂಕವೊಡ್ಡುವ ರೀತಿಯಲ್ಲಿ ಪತ್ರಿಕೆಗಳು ನಡೆದುಕೊಂಡವು. ಅಕ್ಷರಗಳ ಬೆಳಕು, ಸೃಷ್ಟಿ ಮಾಡುವ ಲೋಕ, ಉಂಟು ಮಾಡುವ ಬದಲಾವಣೆಯನ್ನು ಅರಿತಿರುವುದರಿಂದಲೇ ಈ ವರ್ಗ ಸದಾ ಇತರರನ್ನು ಅಕ್ಷರದಿಂದ ವಂಚಿಸುವುದರಿಂದಲೇ ದೊಡ್ಡವರಾಗುತ್ತವೆ".

"ಯಾವುದೇ ಉದ್ದೇಶಗಳಿಂದಲೂ ಬಣ್ಣ ಲೇಪಿಸಿಕೊಳ್ಳದ ಸುದ್ದಿಯನ್ನು ನೀಡುವುದು, ಸಮುದಾಯಕ್ಕೆ ಒಳಿತನ್ನುಂಟು ಮಾಡುವ ದೃಷ್ಟಿಕೋನವನ್ನು ನೀಡುವುದು, ಎಷ್ಟೇ ದೊಡ್ಡದಾದರೂ ತಪ್ಪು ದಾರಿಗೆಳೆದಿದ್ದನ್ನು ನಿರ್ಭಯವಾಗಿ ತಿದ್ದುವುದು ತನ್ನ ಪ್ರಥಮ ಕರ್ತವ್ಯ ಎಂದು ಭಾರತ ಪತ್ರಿಕೋದ್ಯಮ ಭಾವಿಸಿಲ್ಲ" ಎಂಬುದು ಅಂಬೇಡ್ಕರ್‌ರವರ ಕೊರಗಾಗಿತ್ತು.

ಎಕೆಜಿಯವರ ಕ್ರಾಂತಿಕಾರಿ ಬದುಕು

ಪುಟ 40ರಿಂದ

ಗಿದ್ದವರು ಇಂದು ಅಧಿಕಾರದ ಚಕ್ರವನ್ನು ತಿರುಗಿಸುತ್ತಿದ್ದಾರೆ. ಆದರೆ ಅವರ ಆಡಳಿತದಡಿಯಲ್ಲಿ ನನಗೆ ಪೋಲೀಸರ ಪಹರೆಯಿಲ್ಲದ ಒಂದು ತೊಟ್ಟು ನೀರು ಕುಡಿಯಲಿಕ್ಕೂ ಅವಕಾಶವಿಲ್ಲ"

ಪೋಪರ ವೈಭವ: "ಪೋಪ್ ಗುರುಗಳಿಗೆ ತನ್ನದೇ ಆದ ಪೋಲೀಸ್ ಮತ್ತು ಸೈನ್ಯವಿದೆ. ತನ್ನ ರೊಟ್ಟಿಯನ್ನು ಹಸಿದವರಿಗೆ ಕೊಡಬೇಕೆಂದು ಹೇಳಿದ ಏಸುಕ್ರಿಸ್ತನ ಈ ಪ್ರತಿನಿಧಿಗೆ ಮೂರು ಕೋಣೆಗಳಲ್ಲಿ ಬಂಗಾರ ಮತ್ತು ರತ್ನದ ಒಡವೆಗಳು ತುಂಬಿವೆ!"

ಸಿಪಿಐ(ಎಂ)ನ ಹುಟ್ಟಿನ ಬಗ್ಗೆ: "ವರ್ಗ ಸಹಕಾರದಲ್ಲಿ ವಿಶ್ವಾಸವಿದ್ದವರು ಸಿಪಿಐ ನೇತೃತ್ವವನ್ನು ತಮ್ಮ ಕೈಯಲ್ಲಿಟ್ಟುಕೊಂಡಂದಿನಿಂದ ನನ್ನ ನಿರಾಶೆ ಆರಂಭವಾಗಿತ್ತು. ಕಾಲು ಶತಮಾನದ ಪ್ರಯತ್ನ ವಿಫಲವಾದವೆಂಬ ಚಿಂತೆ. ಆ ನಿರಾಶೆ ಈಗ ಮಾಯವಾಯಿತು. ಈ ಹೊಸ ಅಧ್ಯಾಯ ಆರಂಭಿಸುವುದರಲ್ಲಿ ಸಣ್ಣದೊಂದು ಪಾತ್ರ ನನ್ನದಿದೆಯೆಂದು ಹೆಮ್ಮೆಯಿದೆ"

ಪರಿಷ್ಕರಣವಾದಿಗಳ ಬಗ್ಗೆ: "ಮಾರ್ಕ್ಸ್‌ವಾದ-ಲೆನಿನ್‌ವಾದವನ್ನೂ ಅದರ ಉದಾತ್ತ ತತ್ವಗಳನ್ನು ಎತ್ತಿಹಿಡಿಯುವುದರಿಂದ ಮಾತ್ರ ಕಾರ್ಮಿಕ ವರ್ಗದಲ್ಲಿ ಕ್ರಾಂತಿಕಾರಿ ಒಗ್ಗಟ್ಟನ್ನು ಬೆಳೆಸಲು ಸಾಧ್ಯ. ತತ್ವಗಳನ್ನು ಬಲಿಕೊಟ್ಟು ಸಂದರ್ಭಸಾಧಕರೊಂದಿಗೆ ಸಹಕರಿಸಿ ಗಳಿಸುವ ಐಕ್ಯವು ಕಾರ್ಮಿಕ ವರ್ಗದ ಐಕ್ಯವಲ್ಲ"

ಕಮ್ಯುನಿಸ್ಟರು ತಮ್ಮ ಸ್ವಂತ ದೇಶದ ಹಿತಾಸಕ್ತಿಗಳ ಹೆಸರಲ್ಲಿ ಕಾರ್ಮಿಕ ವರ್ಗ ಚಳುವಳಿಯಅಂತರ್ರಾಷ್ಟ್ರೀಯಹಿತಾಸಕ್ತಿಗಳನ್ನು ವಿರೋಧಿಸಿದರೆ, ಅವರು ಅಂತರ ರಾಷ್ಟ್ರೀಯ ಐಕ್ಯವನ್ನು ವಿರೋಧಿಸಿ- ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಅಂತರ್ರಾಷ್ಟ್ರೀಯತೆಗೆ ದ್ರೋಹ ಮಾಡಿದಂತಾಗುತ್ತದೆ"

ಇಎಂಎಸ್ ಬಗ್ಗೆ: "ನಾನು ಇಎಂಎಸ್ ಅವರ ಅಂಧ ಅನುಯಾಯಿಯೆಂದು ಯಾರಾದರೂ ಹೇಳಿದರೆ ಎಳ್ಳಷ್ಟೂ ಬೇಸರವಿಲ್ಲ. ನಾನು ಅವರಿಂದ ತುಂಬ ಕಲಿತೆ. ಈ ಸಂಗಾತಿಯ ರಾಜಕೀಯ ನೇತೃತ್ವದಲ್ಲೂ ಸಚ್ಚಾರಿತ್ರ್ಯದಲ್ಲೂ ಸಂಪೂರ್ಣ ವಿಶ್ವಾಸ ನನಗಿದೆ"

ಪಾರ್ಲಿಮೆಂಟ್ ಬಗ್ಗೆ: "ಒಬ್ಬ ಮನುಷ್ಯನನ್ನು ನಾಶಮಾಡಲು ಸಿದ್ಧಗೊಳಿಸಿದ ವಾತಾವರಣವನ್ನು ಅಲ್ಲಿ ಕಂಡೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಅಧಿಕಾರ ಶಾಹಿ ಪ್ರವೃತ್ತಿಯೂ ಅಹಂಕಾರವೂ ಭೋಗ ವಿಲಾಸಗಳ ಚಟವೂ ಬೆಳೆಯಲು ಬೇಕಾದ ಎಲ್ಲವೂ ಅಲ್ಲಿದ್ದವು. ಕಮ್ಯುನಿಸ್ಟರು ಒಮ್ಮಿಂದೊಮ್ಮೆಗೆ ಒದಗಿ ಬಂದ ಈ ವೈಭವದ ಪರಿಸರದಲ್ಲಿ ದಾರಿ ತಪ್ಪಿಹೋಗುವ ಅವಕಾಶವಿತ್ತು'

ಪಾರ್ಲಿಮೆಂಟಿನಲ್ಲಿ ಎಕೆಜಿಯ ಕೊನೆಯ ಮಾತು: "ಆಳುವ ವರ್ಗಗಳಿಗೆ ನಾವು ಎಂದೂ ಶರಣಾಗಲಾರೆವು. ದುಡಿಯುವ ಜನರಿಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೂ ನಾವು ಎಂದೂ ದ್ರೋಹ ಮಾಡಲಾರೆವು. ಚರಿತ್ರೆಯು ನಮ್ಮನ್ನು ಸಮರ್ಥಿಸುವುದು"

ಭವಿಷ್ಯತ್ತು: "ಸಾಮಾನ್ಯ ಜನರ ಜೊತೆ ಸೇರಿ ಹೋರಾಟ ನಡೆಸಿ ಅದರಿಂದ ನಾನು ಕಲಿತುಕೊಂಡ ಅನುಭವಗಳು ನನಗೆ ಮುಂದೆ ಸಾಗಲು ಸ್ಫೂರ್ತಿ ನೀಡಿವೆ. ನನ್ನ ಜೀವನದ ಕಥೆ ದೇಶದ ಮಿಲಿಯಗಟ್ಟಲೆ ಜನರ ಚರಿತ್ರೆಯ ಒಂದು ಭಾಗವಾಗಿದೆ. ನನ್ನ ದೇಶದ ಜನರು ಒಂದು ದಿನ ಖಂಡಿತವಾಗಿಯೂ ಕ್ರಾಂತಿ ಮತ್ತು ಸಮಾಜವಾದದ ಹಾದಿಯಲ್ಲಿ ಮುಂದುವರಿದು ಯಶಸ್ಸನ್ನು ಗಳಿಸುವರೆಂಬ ಭರವಸೆ ನನಗಿದೆ"

ನಾಗೇಶ್‌ಕುಮಾರ್,
'ನಿರಂತರ', ಮಂಗಳೂರು

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ವಿ. ರಾಮಚಂದ್ರರಾವ್
ಸಂಪಾದಕರು: ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು